ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 4 ಜನವರಿ 18-24, 1999 ರೂ. 2.00

ಜನವರಿ 26 ರಿಂದ ಜನವರಿ 30 ರವರೆಗೆ ಸೌಹಾರ್ದ ಆಂದೋಲನ

ಎಲ್ಲ ಒಂದೆ ಎಲ್ಲ ಒಂದೆ ಎಂಬುದೊಂದೆ ನಮ್ಮ ಯುದ್ಧ ಘೋಷಣ

ಜಿ.ಎನ್.ನಾಗರಾಜ್

ಬಿಜೆಪಿ ರಾಜಸ್ಥಾನ, ದೆಹಲಿಗಳಲ್ಲಿ ದಯನೀಯವಾಗಿ ಸೋತು ಅಲ್ಲಿ ಕಳೆದುಕೊಂಡ ಮಾನವನ್ನು ಮಧ್ಯಪ್ರದೇಶದಲ್ಲಿ ಪಡೆಯಬಹುದೆಂಬ ಕನಸು ಹಗಲುಗನಸಾದ ಮೇಲೆ ಕೈಲಾಗದೆ ಮೈ ಪರಚಿಕೊಳುತ್ತಿರುವ ಕಪಿಯಂತಾಗಿದೆ. ಕೇಂದ್ರದಲ್ಲಿ ನಾವು ಅಧಿಕಾರಕ್ಕೆ ಬಂದರೆ...... ಬಂದರೆ.... ಏನೇನೋ ಮಾಡಿಬಿಡುತ್ತೇವೆಂದು, ನಾವು ಅಂತಿಂತ ಪಕ್ಷವಲ್ಲ ಎಂತೆಂತಹದೋ ಪಕ್ಷವೆಂದು ಸಂಘ ಪರಿವಾರ ಭಾರತದ ಜನತೆಯಲ್ಲಿ ಕಳೆದ 50 ವರ್ಷದಿಂದ ಮೂಡಿಸಿದ್ದ ಭ್ರಮೆಯೆಲ್ಲಾ ಕೇವಲ 7-8 ತಿಂಗಳಲ್ಲಿ ಬಯಲಾಗಬೇಕೆ! ನಾನು ಎದ್ದರೆ ಆಳಲ್ಲ, ನಾನು ಎದ್ದರೆ.. ಎಂದು ಮಾತಿ ಮಾತಿಗೂ ಹೆದರಿಸುತ್ತಿದ್ದವನನ್ನು ಎದ್ದೇಬಿಡು ನೋಡೋಣ ಎಂದು ಜನ ಅವಕಾಶ ಮಾಡಿಕೊಟ್ಟಾಗ ಏಳ ಹೋಗಿ ಅಲ್ಲಿಯೇ ಬಿದ್ದು ***ತನ್ನ ಕುಂಟುತನವನ್ನು ಪ್ರದರ್ಶನಕ್ಕಿಟ್ಟ ಕುಂಟನಂತಾಗಿದೆ ಸಂಘ ಪರಿವಾರದ ಸ್ಥಿತಿ.***

ಸಂಘ ಪರಿವಾರಕ್ಕೆ ಆಳಲು ಬರುವುದಿಲ್ಲ. ಜನರ ಸಮಸ್ಯೆಗಳನ್ನು ಪರಿಹರಿಸಲು ಬರುವುದಿಲ್ಲ ಎಂದು ಭಾರತದ ಜನತೆಗೆ ಸಾಬೀತು ಮಾಡಿದೆ. ಇನ್ನು ಮುಂದೆ ನಡೆಯಬೇಕಿರುವ ನಾಲ್ಕು ರಾಜ್ಯಗಳ ಚುನಾವಣೆಯಲ್ಲಿ ಕರ್ನಾಟಕ, ಆಂಧ್ರಪ್ರದೇಶದಂತಹ ದೊಡ್ಡ ರಾಜ್ಯಗಳಿವೆ. ಜನರ ಸಮಸ್ಯೆ ಬಗೆಹರಿಸಲಾರದ ಪಕ್ಷವೊಂದು ಗೆಲ್ಲುವುದು ಹೇಗೆ? ಈ ಪ್ರಶ್ನೆ ಬಿಜೆಪಿಯನ್ನು, ಇಡೀ ಸಂಘ ಪರಿವಾರವನ್ನು ಕಾಡಿದೆ. ಅದಕ್ಕಾಗಿಯೇ ಬೆಂಗಳೂರಿನಲ್ಲಿ ಬಿಜೆಪಿಯ ಬೈಠಕ್, ನಾಗಪುರದಲ್ಲಿ ಆರ್‌ಎಸ್‌ಎಸ್‌ನ ಚಿಂತನ ಬೈಠಕ್, ವಿಶ್ವ ಹಿಂದು ಪರಿಷತ್‌ನ ಹರಿಯಾಣ ಬೈಠಕ್, ಮುಂದೆ ಗುಜರಾತ್‌ನಲ್ಲಿ ಧರ್ಮ ಸಂಸದ್-ಇವೆಲ್ಲ ಒಂದರ ಹಿಂದೊಂದು ನಡೆಯುತ್ತಿವೆ.

ಸಂಘ ಪರಿವಾರಕ್ಕೆ ಆಳಲು ಬರುವುದಿಲ್ಲವೆಂದ ಮೇಲೆ ಅವರಿಗೆ ಗೊತ್ತಿರುವುದೇನು? ದೇಶದೆಲ್ಲೆಡೆ ಕೋಮು ಗಲಭೆಗಳನ್ನೆಬ್ಬಿಸುವುದು, ಕೋಮು ಉದ್ರೇಕ ಮಾಡುವುದು, ಜನರ ಕೊಲೆಗೈಯುವುದು, ಹೆಣದ ಬಣವೆಯ ಮೇಲೆ ರಕ್ತದೋಕುಳಿಯಾಡುತ್ತಾ ***ಸಾವಿರಾರು ಜನರ ಕಣ್ಣೀರಿನ ಕಡಲಲ್ಲಿ ತೇಲಿ ಅಧಿಕಾರದ ದಡ ಸೇರಲೆತ್ನಿಸುವುದು.*** ಇದನ್ನೇ ವ್ಯವಸ್ಥಿತವಾಗಿ ಮಾಡಬೇಕು, ಇಂದೊಂದೇ ಅವರು ಸ್ವಾತಂತ್ರ್ಯ ಬರುವ ಮೊದಲಿಂದಲೂ ಅಭ್ಯಾಸ ಮಾಡಿ ಪಡೆದಿರುವ ಪರಿಣತಿ.

ಗುಜರಾತಿನಲ್ಲಿ ಕ್ರಿಶ್ಚಿಯನ್ನರ ಮೇಲೆ ಕ್ರಿಸ್‌ಮಸ್ ಹಬ್ಬದ ದಿನವೇ ಧಾಳಿ, ಬಿಜೆಪಿಯ ಗೆಳೆಯರಿಂದ ಜನಪ್ರಿಯ ಕ್ರೀಡೆ ಕ್ರಿಕೆಟ್ ಮೇಲೆ, 'ಫೈರ್' ಚಿತ್ರದ ಮೇಲೆ ಕಣ್ಣು. ಕರ್ನಾಟಕದಲ್ಲಿ ಬಾಬಾ ಬುಡನ್ ಗಿರಿಯ ಹಸಿರು ತಪ್ಪಲಿಗೆ ಬೆಂಕಿ ಹಚ್ಚುವ ಪ್ರಯತ್ನ, ಸುರತ್ಕಲ್‌ನಲ್ಲಿ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ದಾಂಧಲೆ, ಗಾಳಿ ಸುದ್ದಿ ಹರಡಿ, ವಿಷ ಜ್ವಾಲೆಯನ್ನು ನೆರೆಯ ಪ್ರದೇಶಗಳಿಗೆ ಹಬ್ಬಿಸುವ ಪ್ರಯತ್ನ, ಕೊಡಗಿನಲ್ಲಿ ಕೋಮು ಗಲಭೆ, ನಂಜನಗೂಡಿನಲ್ಲಿ ದುಷ್ಕೃತ್ಯ. ಇದಕ್ಕೆ ಮೊದಲೆ ಗುಲ್ಬರ್ಗದಲ್ಲಿ ಪಟೇಲ್ ಪ್ರತಿಮೆಯ ಸ್ಥಾಪನೆ ನೆವದಲ್ಲಿ ಕೋಮು ಉದ್ರೇಕ. ಮತ್ತೆ ತಮ್ಮ ಸ್ನೇಹಿತರಿಂದ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ಎಂಬ ಹೆಸರಿಡುವ ಪ್ರಯತ್ನ, ಪ್ರತಿ ಬಾರಿ ಚುನಾವಣೆ ಬಂದಾಗೊಮ್ಮೆ 'ಮಾತೆ'ಯವರಿಗೆ ಬಸವೇಶ್ವರನ ಧ್ಯಾನ ಉಳಿದ ಸಮಯದಲ್ಲಿ 'ಲಿಂಗದೇವ'ನ ನೆನಪು. '94 ರ ವಿಧಾನಸಭಾ ಚುನಾವಣೆಗೆ ಕೆಲವು ತಿಂಗಳ ಮುನ್ನ, '96 ರ ಲೋಕಸಭಾ ಚುನಾವಣೆಯ ಸಮಯದಲ್ಲಿ, ಮತ್ತೆ ಈಗ ಬಸವೇಶ್ವರನ ಧ್ಯಾನ. ಇಲ್ಲಿಯವರೆಗೆ ಬಿಚ್ಚಿಕೊಂಡಿರುವುದಿಷ್ಟು. ಇನ್ನೂ ಮತ್ತೆಷ್ಟು ಕುತಂತ್ರಗಳ ಆಳ ಕಡಲಲ್ಲಿ ಹುದುಗಿದ್ದಾವೋ? ಅವುಗಳನ್ನು ಯಾವಾಗ ಹೊರತೆಗೆಯಲಾಗುವುದೋ? ಇಡಿ ದೇಶ ಇಂದು ಆತಂಕಗೊಂಡಿದೆ. ಆತಂಕಗೊಳ್ಳಬೇಕಾಗಿದೆ.

ಅಲ್ಲಿ ರಾಮ ದೇವಸ್ಥಾನ ಹಲವು ಕೇಂದ್ರಗಳಲ್ಲಿ ತುಂಡು ತುಂಡಾಗಿ ಕಟ್ಟಲ್ಪಡುತ್ತದೆ. ಕಾಶಿ ವಿಶ್ವೇಶ್ವರನ, ಮಥುರಾದ ಕೃಷ್ಣನ ಸಮಸ್ಯೆಯಂತೂ ಇನ್ನೂ ಹಸಿರಾಗಿದೆ. 3000 ಮಸೀದಿಗಳ ಪಟ್ಟಿ ಮಾಡಿಯಾಗಿದೆ. ನಿರಂತರ ಅಪಪ್ರಚಾರ, ಒಳಸಂಚು ಸಾಗಿದೆ.

ಕರ್ನಾಟಕದಲ್ಲಿ 28 ಸ್ಥಾನಗಳಲ್ಲಿ 15 ಸ್ಥಾನಗಳನ್ನು ಸ್ವತಃ ತಾವೇಗೆದ್ದು ತಮ್ಮ ಮಿತ್ರರೂ ಸೇರಿ ಒಟ್ಟು 18 ಸ್ಥಾನ ಗೆದ್ದು ಇನ್ನು ಕರ್ನಾಟಕದಲ್ಲಿ ನಾವೇ ಎಂದುಕೊಳ್ಳುತ್ತಿದ್ದ ಬಿಜೆಪಿಗೆ ಕರ್ನಾಟಕ ಕೈಗೆ ಬಂದದ್ದು ಬಾಯಿಗಿಲ್ಲ ಎನ್ನುವಂತಾಗುವ ದಿಗಿಲು. ಅದಕ್ಕಾಗಿ ವಿಷದ ಮನಸುಗಳ ಕ್ರೂರ ಸಂಚುಗಳು.

ಇಂತಹ ಪರಿಸ್ಥಿತಿಯಲ್ಲಿ ಗುಜರಾತ್ ಕ್ರಿಶ್ಚಿಯನ್ನರ ಮೇಲೆ ಧಾಳಿ ಮಾಡಿಸುತ್ತಿರುವ ಗುಜರಾತ್ ಸರ್ಕಾರಕ್ಕೆ ಸರ್ಟಿಫಿಕೇಟು ನೀಡಿದ, ಫಿರೋಜ್ ಶಾ ಕೋಟ್ಲಾ ಮೈದಾನವನ್ನು ಅಗೆದು ಗಂಡಿ ತೋಡುವುದನ್ನು ನೋಡುತ್ತಾ ನಿಂತ ಕೇಂದ್ರ ಸರ್ಕಾರದ ಭಾಗಿದಾರನಾದ ಲೋಕಶಕ್ತಿ ಕೇವಲ ಮೊಸಳೆ ಕಣ್ಣೀರು ಸುರಿಸಿ 'ತಪ್ಪು ತಪ್ಪು' ಎಂದರೆ ಜನ ಮರುಳಾಗುತ್ತಾರೆಂದು ಭಾವಿಸಿದಂತಿದೆ. ಜೊತೆಗೆ ಮುಖ್ಯಮಂತ್ರಿ, ಮಂತ್ರಿ ಪದವಿಗಳ ಆಸೆ ಹುಟ್ಟಿಸಿ ಪಕ್ಷಾಂತರ ಮಾಡಿದ ಜನತಾ ದಳ ಶಾಸಕರು ಕಾಂಗ್ರೆ ಸೇರಲು ದುಂಬಾಲು ಬೀಳುತ್ತಿರುವುದನ್ನು ಅದರಿಂದ ಪಕ್ಷದಲ್ಲುಂಟಾಗುವ ಡೊಗರನ್ನು ಮುಚ್ಚುವುದು ಹೇಗೆ, ರೇಷ್ಮೆ ಆಮದಿನಿಂದ ರೊಚ್ಚಿಗೆದ್ದಿರುವ ರೈತರನ್ನು ಸಮಾಧಾನ ಮಾಡುವುದು ಹೇಗೆ ಎಂದು ಹಳಹಳಿಸುತ್ತಿರುವ ***ಲೋಕಶಕ್ತಿಗೆ ಸಂಘ ಪರಿವಾರ ರಾಜ್ಯದಲ್ಲಿ ಹಚ್ಚುತ್ತಿರುವ ಕೋಮು ಜ್ವಾಲೆಗೆ ಎದುರಾಗುವ ಪುರಸೊತ್ತೆಲ್ಲಿದೆ?***

ಜನತೆಯ ನಿಜವಾದ ಸಮಸ್ಯೆಗಳನ್ನು ಬಿಟ್ಟು, ಸದಾ ಕಾವೇರಿ, ಕೃಷ್ಣ, ಉತ್ತರ ಕರ್ನಾಟಕದಂತಹ ವಿಚ್ಛಿದ್ರಕಾರಿ ಘೋಷಣೆಗಳಿಂದ ಜನರನ್ನು ಆಕರ್ಷಿಸಲು ಪ್ರಯತ್ನಿಸುತ್ತಿದ್ದ ಕಾಂಗ್ರೆ ಪಕ್ಷಕ್ಕೆ ಕೋಮುವಾದಿಗಳ ಈ ಸಂಚಿನ ಬಗ್ಗೆ ಯೋಜನೆ ಮಾಡಲು ವೇಳೆಯಲ್ಲಿದೆ? ಜನತಾದಳ ಹಾಗೂ ಬಿಜೆಪಿಯ ಆಡಳಿತಗಳ ಬಗ್ಗೆ ಜನ ಅತೃಪ್ತರಾಗಿರುವುದರಿಂದ ***ಕರ್ನಾಟಕ ಸರ್ಕಾರ ತಮ್ಮ ಬುಟ್ಟಿಗೆ ಈಗಾಗಲೇ ಬಿದ್ದಿದೆ ಎಂದುಕೊಂಡಿರುವ ಕಾಂಗ್ರೆಗಳಿಗಿರುವುದೊಂದೇ ಚಿಂತೆ ಮುಂದಿನ ಮುಖ್ಯಮಂತ್ರಿ ಪದವಿ.*** '89 ರಿಂದ '94 ರ ಅವಧಿಯಲ್ಲಿ ಅಧಿಕಾರ ಕೈಗೆ ಬಂದ ಮೇಲೆ ಅವರ ಕಾಲು ಇವರು, ಇವರ ಕಾಲು ಅವರು ಎಳೆಯುವ ಕೆಲಸ ಮಾಡಿದ, ಮಾಡಿ ಅಭ್ಯಾಸವಾಗಿಹೋಗಿರುವ ಕಾಂಗ್ರೆಗಳು ಅಧಿಕಾರ ಕೈಗೆ ಬರುವ ಮೊದಲೇ ಆರಂಭಿಸಿಬಿಟ್ಟಿದ್ದಾರೆ ತಮ್ಮ ಹಳೆಯ ಚಾಳಿಯನ್ನು. ಕಾಂಗ್ರೆ ರಾಜ್ಯ ಅಧ್ಯಕ್ಷ ಪದವಿಯ ಬಗ್ಗೆ.

ಜನತಾದಳ ಸರ್ಕಾರ ಹಾಗೂ ಪಕ್ಷ

ಇನ್ನು ಜನತಾದಳ ಸರ್ಕಾರ ಹಾಗೂ ಪಕ್ಷ ತಮ್ಮೊಳಗಿನ ಗುದ್ದಾಟದಲ್ಲಿ ಮುಂದಿನ ಚುನಾವಣೆಯನ್ನೆದುರಿಸಲು ಯಾವ ಜಾತಿ ಕೂಟ ಅನುಕೂಲವಾಗಬಹುದು ಎಂಬ ಲೆಕ್ಕಾಚಾರದಲ್ಲಿ ಮುಳುಗಿ ಹೋಗಿವೆ. ಈ ಮಧ್ಯೆ ಸುರತ್ಕಲ್ ಗಲಭೆಗಳಿಗೆ ಕಾರಣರಾರು ಎಂಬುದು ಹಾಡು ಹಗಲಿನಂತೆ ಸ್ಪಷ್ಟವಾಗಿದ್ದರೂ, ಇದಕ್ಕೆ ಯಾವ ಪಕ್ಷವೂ ಕಾರಣವಲ್ಲ, ಕೇವಲ ಭೂಗತ ಜಗತ್ತಿನವರು ಎಂದು ಹೇಳುತ್ತಾ ನಾಳೆ ನಾವು ಬಿಜೆಪಿಯ ಬೆಂಬಲಕ್ಕೆ ಕೈ ಚಾಚಬೇಕಾಗುವುದೇನೋ ಎನ್ನುವ ಆಲೋಚನೆ ಇರುವ ಮುಖ್ಯಮಂತ್ರಿಗಳಿಂದ ಸಂಘ ಪರಿವಾರದ ಒಳಸಂಚಿಗೆ ಮದ್ದರೆಯುವ ಕೆಲಸ ಸಾಧ್ಯವಾಗಬಹುದೆ?

ಇನ್ನು ಅವರ ಪಕ್ಷ ಜನತಾದಳ. ರಾಜಕೀಯ ಪಕ್ಷವಾಗಿ ತನ್ನ ಪಕ್ಷದ ಸರ್ಕಾರದ ಅಲ್ಪಸ್ವಲ್ಪ ಸಾಧನೆಗಳನ್ನು ಜನರಿಗೆ ಮುಟ್ಟಿಸುವ ಪ್ರಾಥಮಿಕ ಕೆಲಸ ಮಾಡದ, ರಾಜಕೀಯವಾಗಿ ನಿಷ್ಕ್ರಿಯವಾಗಿರುವ ಪಕ್ಷ ಕೋಮುವಾದದ ಸವಾಲೆನ್ನೆದುರಿಸುವ ರಾಜಕೀಯ ಹೋರಾಟ ಮಾಡಬಲ್ಲುದೇ?

'ಹೀಗಾಗಿ ಮಿತ್ರರೇ, ಇಡೀ ರಾಜ್ಯದಲ್ಲಿ ಕೋಮುವಾದವನ್ನೆದುರಿಸಲು ಪ್ರಜ್ಞಾವಂತ ಜನತೆ ಎದ್ದು ನಿಲ್ಲಬೇಕಾಗಿದೆ. **ಜಾತ್ಯಾತೀತ ಮನಸ್ಸಿನ ಜನಶಕ್ತಿಯ ಎಚ್ಚರ ಮಾತ್ರ ಕೋಮುವಾದದ ಕಾಡುಕಿಚ್ಚನ್ನು ಎದುರಿಸಬಲ್ಲದು.** ಈ ಜನಶಕ್ತಿಯನ್ನು ಒಗ್ಗೂಡಿಸುವ ಕೆಲಸವನ್ನು ರಾಜ್ಯ ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲರೂ ಸೇರಿ ಮಾಡಬೇಕಾಗಿದೆ. ಕೋಮುವಾದಿ ಶಕ್ತಿಗಳ ಫ್ಯಾಸಿಸ್ಟ್ ಮನೋಭಾವದ ಕ್ರೂರ ಕೃತ್ಯಗಳ ಬಗ್ಗೆ ಸದಾ ಎಚ್ಚರವಿರುವ ಎಡಶಕ್ತಿಗಳು ಮುನ್ನುಗ್ಗಬೇಕಾಗಿದೆ.

ಅದಕ್ಕಾಗಿ ಜ 13, 14 ರಂದು ಸೇರಿದ್ದ ಸಿಪಿಐ(ಎಂ) ರಾಜ್ಯ ಸಮಿತಿ ಜ. 26 ರಿಂದ ಜ. 30 ರವರೆಗೆ ಕೋಮು ಸೌಹಾರ್ದ ಆಂದೋಲನವಾಗಿ ಆಚರಿಸಲು ಕರೆ ನೀಡಿದೆ. ಸಂವಿಧಾನದ ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಸ್ವರೂಪವನ್ನು, ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳನ್ನು ದೇಶದ ಆರ್ಥಿಕ ಸ್ವಾತಂತ್ರ್ಯವನ್ನು ನಾಶ ಮಾಡುತ್ತಿರುವ ಸಂಘ ಪರಿವಾರದ ವಿರುದ್ಧ ರಾಜ್ಯದ ಜನತೆಯಲ್ಲಿ ಸುಪ್ತವಾಗಿರುವ 'ನಾವೆಲ್ಲರೂ ಒಂದೇ ಜಾತಿ, ಒಂದೇ ಮತ, ಒಂದೇ ಕುಲ ನಾವು ಮನುಜರು' ಎಂಬ ಭಾವನೆಯನ್ನು ಎಚ್ಚರಿಸಬೇಕಾಗಿದೆ. ***ಇದಕ್ಕಾಗಿ ಗಣರಾಜ್ಯ ದಿನದಿಂದ ಮಹಾತ್ಮಗಾಂಧಿ ಹುತಾತ್ಮರಾದ ದಿನದವರೆಗೆ ಕೋಮುಸೌಹಾರ್ದ ಪ್ರಚಾರಾಂದೋಲನ***

"ಎಲ್ಲ ಒಂದೇ, ಎಲ್ಲ ಒಂದೆ
ಎಂಬುದೊಂದೆ ನಮ್ಮ ಯುದ್ಧಘೋಷಣ'

ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆಯ ಹೆಸರಲ್ಲಿ ಹೀನ ಕೃತ್ಯಗಳನ್ನು ಮರೆಮಾಚುವ ಹುನ್ನಾರ

ಇಡೀ ದೇಶದಲ್ಲಿ ಆತಂಕ ಮೂಡಿಸಿದ ಗುಜರಾತಿನ ಸತತ ಹಿಂಸಾತ್ಮಕ ಘಟನೆಗಳು, ಅದನ್ನು ನಿಲ್ಲಿಸುವಲ್ಲಿ ಬಿಜೆಪಿ ಸರಕಾರದ ವಿಫಲತೆಗೆ ವ್ಯಾಪಕ ಟೀಕೆಗಳು ಬಂದಿರುವ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿಗಳ ಗುಜರಾತ್ ಭೇಟಿ ದೇಶಪ್ರೇಮಿಗಳ ಆತಂಕವನ್ನು ಶಮನ ಮಾಡುವ ಬದಲು ಇನ್ನಷ್ಟು ಹೆಚ್ಚಿಸಿದೆ.ಅಲ್ಲಿ ಕಾನೂನು ವ್ಯವಸ್ಥೆ ಮುರಿದುಬಿದ್ದಿದೆಯೆಂಬ ಮಾತು ಆಧಾರಹೀನ ಎಂದು ಸಾರಿರುವ ಪ್ರಧಾನಿಗಳು ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕೆಂದು ಕರೆಯನ್ನೇ ಕೊಟ್ಟಿದ್ದಾರೆ !ಅವರ ಈ ಕರೆಗೆ ದೇಶಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತಗೊಂಡಿದೆ.

ಪ್ರಧಾನಮಂತ್ರಿಗಳು ಈರೀತಿ ಕರೆ ನೀಡುವ ಮೂಲಕ ಅಲ್ಲಿ ಕ್ರೈಸ್ತ ಕೋಮಿನ ಮೇಲೆ ನಡೆಯುತ್ತಿರುವ ಹಿಂಸಾಚಾರಕ್ಕೆ ಸಮರ್ಥನೆ ನೀಡಿದಂತಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೊ ಖಂಡಿಸಿದೆ. ಕೋಮು ಹಿಂಸಾಚಾರಗಳನ್ನು ನಿಲ್ಲಿಸುವಲ್ಲಿ ಗುಜರಾತ್ ಸರಕಾರದ ವಿಫಲತೆಯನ್ನು ಪರಾಮರ್ಶಿಸುವ ಬದಲು ಅವರು ಆ ಸರಕಾರ ಚೆನ್ನಾಗಿ ಕೆಲಸ ಮಾಡಿದೆಯೆಂದು ಸರ್ಟಿಫಿಕೇಟ್ ನೀಡಿರುವುದನ್ನು ಸಿಪಿಐ(ಎಂ) ಕಟುವಾಗಿ ಟೀಕಿಸಿದೆ.

ಪ್ರಧಾನಮಂತ್ರಿಗಳು ನಮ್ಮ ಸಂವಿಧಾನದ ಧರ್ಮ ನಿರಪೇಕ್ಷ ತತ್ವವನ್ನು ಎತ್ತಿ ಹಿಡಿಯುತ್ತೇನೆಂದು ಪ್ರತಿಜ್ಞೆ ಸ್ವೀಕರಿಸಿರುವವರು. ಆದ್ದರಿಂದ ಅವರು ಗುಜರಾತಿನಲ್ಲಿ ಕ್ರೈಸ್ತ ಸಮುದಾಯದ ಮೇಲೆ ನಡೆಯುತ್ತಿರುವ ಹೀನ ಹಿಂಸಾಚಾರವನ್ನು ನೇರವಾಗಿ ಖಂಡಿಸದೆ ಸಾರ್ವಜನಿಕವಾಗಿ ಇಂತಹ ನಿಲುವು ತಳೆದಿರುವುದು ಈ ರೀತಿಯ ಹೀನ ಕೃತ್ಯಗಳನ್ನು ಎಸಗಲು ಕೋಮುವಾದಿ ವ್ಯಕ್ತಿಗಳಿಗೆ ಪ್ರೋತ್ಸಾಹ ನೀಡುತ್ತದಷ್ಟೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ. ದೇಶದ ಧರ್ಮನಿರಪೇಕ್ಷ ಅಡಿ ಗಟ್ಟನ್ನು ಈ ರೀತಿ ಧ್ವಂಸ ಮಾಡುವುದನ್ನು ಭಾರತೀಯ ಜನತೆ ಸಹಿಸುವುದಿಲ್ಲ ಎಂದು ಬಿಜೆಪಿ ನೇತೃತ್ವದ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೊ ಎಚ್ಚರಿಕೆ ನೀಡಿದೆ.

ಮುಖವಾಡ ಇನ್ನೊಮ್ಮೆ ಕಳಚಿದೆ

ವಾಜಪೇಯಿ ಸರಕಾರವನ್ನು ಬೆಂಬಲಿಸುವವರಿಗೆ ಕೂಡಾ ಪ್ರಧಾನಿಗಳ ಈ 'ಕರೆ' ಆಶ್ಚರ್ಯ, ಮುಜುಗರ ಉಂಟು ಮಾಡಿದೆ. ಬೇರಾವುದೇ ಮುಖಂಡರಿಂದ ಈ ಕರೆ ಬಂದಿದ್ದರೆ ಅಲ್ಪ ಸಂಖ್ಯಾತರ ಮೇಲೆ ಧಾಳಿಗಳ ಹಿನ್ನೆಲೆಯಲ್ಲಿ ಇದು ಜನರ ಕಣ್ಣಿಗೆ ಮಣ್ಣೆರಚುವ ಮಾತು ಎಂದು ಸುಲಭವಾಗಿ ಹೇಳಬಹುದಿತ್ತು. ಆದರೆ 'ಸೌಮ್ಯ' ಪ್ರಕೃತಿಯವರೆಂದು ಪ್ರತೀತಿಯಿರುವ ವಾಜಪೇಯಿಯವರಿಂದಲೇ ಈಮಾತು ಬಂತಲ್ಲಾ ಎಂದು ಆಶ್ಚರ್ಯ ವ್ಯಕ್ತಪಡಿಸಿರುವ 'ಇಂಡಿಯನ್ ಎಕ್ಸ್‌ಪ್ರೆಸ್' ದೈನಿಕದ ಸಂಪಾದಕೀಯ ಅವರ ಉದಾರ ಮುಖವಾಡ ಕಳಚಿ ಬಿದ್ದಿರುವ ಬಗ್ಗೆ ಎಲ್ಲೆಡೆಗಳಿಂದ ಟೀಕೆ ಬಂದಿರುವುದನ್ನು ಪ್ರಸ್ತಾಪಿಸಬೇಕಾಗಿ ಬಂದಿದೆ; ಅವರ ಕರೆ ಧಾರ್ಮಿಕ ಮೂಲಭೂತವಾದಿಗಳಿಗೆ ತೃಪ್ತಿ ತಂದಿದೆಯಷ್ಟೇ ಅಲ್ಲ ಎಷ್ಟು ಬಲವಾಗಿ ಕಾನೂನು ಬಾಹಿರತೆಯನ್ನು ಖಂಡಿಸಬೇಕಾಗಿತ್ತೋ ಅಷ್ಟು ಬಲವಾಗಿ ಅವರು ಖಂಡಿಸಲಿಲ್ಲ ಎಂದು ಕಳವಳ ಪಟ್ಟಿದೆ; ಇದು ರಾಜಕೀಯವಲ್ಲದೆ ಮತ್ತೇನೂ ಅಲ್ಲ ಎಂದೂ ಒಪ್ಪಿಕೊಳ್ಳಬೇಕಾಗಿ ಬಂದಿದೆ.

ವಾಸ್ತವದಲ್ಲಿ ಗುಜರಾತದಲ್ಲಿನ ಈಗಿನ ಪ್ರಶ್ನೆ ಮತಾಂತರದ್ದಲ್ಲ ಎಂಬುದು ದೇಶದ ವಿಚಾರಶೀಲರೆಲ್ಲರೂ ಒಪ್ಪಿರುವ ವಿಷಯ. ಆದ್ದರಿಂದಲೇ ಈ ಕರೆಯ ಮೂಲಕ ಪ್ರಧಾನಿಗಳು ಜನರ ಗಮನವನ್ನು ಗುಜರಾತದಲ್ಲಿ ಮೂಲಭೂತವಾದಿಗಳ ಹಿಂಸಾಚಾರ

ಪುಟ 2 ನೋಡಿ



ಕೋಮುವಾದಿಗಳ ಭಯೋತ್ಪಾದನೆಯಲ್ಲಿ ತತ್ತರಿಸಿದ ಸುರತ್ಕಲ್

ಕೋಮುಗಲಭೆಯೆಂಬ ಕ್ಯಾನ್ಸರ್

ವಿಚಾರಶೀಲರ ಆತಂಕ



ಪುಟ 4 ನೋಡಿ

ಬೆನ್ನು ಮುರಿಯುತ್ತಿರುವ ವಿದೇಶೀ ಸಾಲದ ಹೊರೆ

ಉದಾರೀಕರಣದೊಂದಿಗೆ ದೇಶದ ಆರ್ಥಿಕ ಸುಧಾರಿಸಿ ವ್ಯಾಪಾರ ಮಿಗುತಾಯ ಆಗಿ ವಿದೇಶೀ ಸಾಲಗಳ ಪ್ರಮಾಣ ಬಹಳ ಕಡಿಮೆ ಆಗುತ್ತದೆ ಎಂದು ಅರ್ಥಶಾಸ್ತ್ರಜ್ಞರ ಒಂದು ಗುಂಪು ವಾದಿಸಿತ್ತು. ಉದಾರೀಕರಣದಿಂದಾಗಿ ರಫ್ತು ಹೆಚ್ಚಾಗಿ ದೇಶ ವಿದೇಶಗಳೆರಡರ ಉತ್ತಮ ವಸ್ತುಗಳು ಸುಲಭ ಬೆಲೆಗೆ ದೊರಕುವಂತಾಗುತ್ತದೆ ಎಂಬ ವಾದ ಇದು.

ಈಗ ವಿದೇಶೀ ಸಾಲ 99 ಶತಕೋಟಿ ಡಾಲರಿಗೇರುವ ಆತಂಕ ಹಣೆಯ ಮೇಲೆ ಮೂಡಿದೆ.ಬರುವ ಮಾರ್ಚಿಯ ವೇಳೆಗೆ ಭಾರತದ ವಿದೇಶೀ ಸಾಲ ಈ ಮಟ್ಟಕ್ಕೆ ಅಂದರೆ 4150 ಶತಕೋಟಿ ರೂಪಾಯಿಗಳಷ್ಟಾಗಲಿದೆಯಂತೆ!

ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧಿಕಾರಿಗಳ ಪ್ರಕಾರ ಜಾಗತಿಕ ನಾಣ್ಯಗಳ ಚಲನೆಯನುಸರಿಸಿ ಈ ಮೊತ್ತ 100 ಶತಕೋಟಿ ಡಾಲರುಗಳ ಸೀಮೆಯನ್ನು ಮೀರಿ ಹೋಗಬಹುದು.ಇಷ್ಟಾದರೂ ಯಾವುದೇ ಆತಂಕಕ್ಕೆ ಕಾರಣವಿಲ್ಲ ಎಂದು ಸರ್ಕಾರೀ ವಕ್ತಾರರು ಹೇಳುತ್ತಲೇ ಇದ್ದಾರೆ.ಆದರೆ ಜಾಗತಿಕ ಆರ್ಥಿಕದ ಸ್ಥಿತಿಯಲ್ಲಿ ಏರುಪೇರಾಗಿರುವಾಗ ಭಾರತದ ಆರ್ಥಿಕ ಅಲ್ಲೋಲ ಕಲ್ಲೋಲವಾಗಲಿರುವ ಸಂಕೇತ ಇದು.

ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಅಧಿಕಾರವನ್ನು ನಿರ್ವಹಿಸುವ ಸಾಮರ್ಥ್ಯವಿಲ್ಲದೇ ಇರುವುದು ಈಗಾಗಲೇ ಸ್ಪಷ್ಟವಾಗಿ ಹೋಗಿದೆ.

ಇಂತಹ ಸ್ಥಿತಿಯಲ್ಲಿ ಭಾರತದ ಸಾಲದ ಹೊರೆಯ ಭಾರ ಇನ್ನೂ ಹೆಚ್ಚಾಗುತ್ತಾ ಹೋಗಲಿದೆ ಹೊರತು ಕಡಿಮೆಯಲ್ಲ.

ಬಿಜೆಪಿಯ ಅರ್ಥಶಾಸ್ತ್ರಜ್ಞರ ಅರಿಕೆ

ಸಾರ್ವಜನಿಕ ವಲಯದ ಘಟಕಗಳಲ್ಲಿನ ತನ್ನ ಹೂಡಿಕೆಯನ್ನು ಸರ್ಕಾರ ಕಡಿಮೆ ಮಾಡಬೇಕೆಂದು ಬಿಜೆಪಿ ಅರ್ಥಶಾಸ್ತ್ರಜ್ಞರ ಗುಂಪೊಂದು ಒತ್ತಾಯಪಡಿಸಿದೆ. ಕೇಂದ್ರ ಹಣಕಾಸು ಮಂತ್ರಿ ಯಶವಂತಸಿನ್ಹಾ ಅವರನ್ನು ಭೇಟಿಮಾಡಿದ ಈ ಗುಂಪು ಸರ್ಕಾರ ಹಿಂದಿನ ಬಜೆಟ್ಟುಗಳಲ್ಲಿ ಮಾಡಿದಂತೆ ಕಂದಾಯ ದರಗಳನ್ನು ಹೆಚ್ಚು ಮಾಡಬಾರದೆಂದಿತು.

ಬಜೆಟ್ ಪೂರ್ವದ ತಯಾರಿಯ ಅಂಗವಾಗಿ ಹಣಕಾಸು ಮಂತ್ರಿಗಳನ್ನು ಭೇಟಿಮಾಡಿದ ಈ ಗುಂಪು ಇಂತಹ ಸಲಹೆಗಳನ್ನು ಮಾಡಿದೆ. ಹದಿನಾಲ್ಕು ಅರ್ಥಶಾಸ್ತ್ರಜ್ಞರ ಈ ಗುಂಪಿನಲ್ಲಿ ಡಾ.ಇಶರ್ ಅಹ್ಲುವಾಲಿಯಾ, ಡಾ.ಅಮ್ರೀಶ್ ಬಗ್ಚಿ ಡಾ.ಅಶೋಕ ಗುಲಾಟಿ, ಜಗದೀಶ ಶೆಟ್ಟಿಗಾರ, ಡಾ.ಕಿರಿಟ್ ಪರೇಖ್ ಹಾಗೂ ಡಾ.ವರದರಾಜನ್ ಶ್ರೀನಿವಾಸನ್ ಸೇರಿದ್ದರು.

ಉದಾರೀಕಣದ ಆರ್ಥಿಕವನ್ನು ಪ್ರತಿಪಾದಿಸುವ ಈ ಅರ್ಥಶಾಸ್ತ್ರಜ್ಞರ ಗುಂಪು ಯಾವುದೇ ಜನಪರವಾದ ಆರ್ಥಿಕ ನೀತಿಗಳ ಶಿಫಾರಸ್ಸು ಮಾಡಿಲ್ಲ. ಬದಲಿಗೆ ಶೇರು ಮಾರುಕಟ್ಟೆಗಳು ಮತ್ತು ಬಂಡವಾಳಿಗರ ವ್ಯವಹಾರಗಳು ಚೇತರಿಸಿಕೊಳ್ಳುವುದಕ್ಕೆ ಏನು ಮಾಡಬೇಕೊ ಅದನ್ನು ಮಾತ್ರ ಶಿಫಾರಸ್ಸು ಮಾಡಿದ್ದಾರೆ.

ಉರಿವ ಮನೆ ಗಳ ಎಣಿಸಿದರೆ 8000 ಕೋಟಿ

ಸಾರ್ವಜನಿಕವಲಯದ ಉದ್ದಿಮೆಗಳ ಶೇರು ಮಾರಾಟದಿಂದ ಸುಮಾರು 8000 ಕೋಟಿ ರೂಪಾಯಿಗಳನ್ನು ಸರ್ಕಾರ ಸಂಗ್ರಹಿಸಲಿದೆಯಂತೆ . ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದಿಂದ ಹಣಕಾಸು ಸಂಗ್ರಹಣೆ ಹೆಚ್ಚಿಸಿ ಕೊಳ್ಳುವ ಮಾತು ಉದಾರೀಕರಣದ ಆರ್ಥಿಕ ನೀತಿಗಳು ಜಾರಿಗೆ ಬಂದಂದಿನಿಂದ ಕೇಳಿಬಂದಿದೆ. ಕಳೆದ ಮೂರು ವರ್ಷಗಳಿಂದ ಪ್ರತಿವರ್ಷವೂ ಇದಕ್ಕೆ ಗುರಿಗಳನ್ನು ನಿಗದಿ ಮಾಡಿಕೊಳ್ಳಲಾಗುತ್ತಿತ್ತು. ಆದರೆ ಆ ಗುರಿಗಳನ್ನು ಹಲವು ಕಾರಣಗಳಿಂದಾಗಿ ಮುಟ್ಟುವುದು ಸಾಧ್ಯವಾಗಿರಲಿಲ್ಲ.

ಈಗ ಸರ್ಕಾರ ಕೆಲವು ಉದ್ದಿಮೆಗಳ ಶೇರುಗಳನ್ನು ಬೇರೆ ಉದ್ದಿಮೆಗಳಿಗೆ ಮಾರುವಮೂಲಕ ತನ್ನ ಹಣಕಾಸು ಸಂಗ್ರಹಣೆ ಆಗುವಂತೆ ಮಾಡಿಕೊಳ್ಳುವ ಹುನ್ನಾರ ನಡೆಸಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್, ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮಿಷನ್, ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್, ವಿದೇಶ್ ಸಂಚಾರ್ ನಿಗಮ್ ಲಿಮಿಟೆಡ್, ಮಹಾನಗರ್ ಟೆಲಿಫೋನ್ ನಿಗಮ ಲಿಮಿಟೆಡ್, ನ್ಯಾಷನಲ್ ಅಲ್ಯುಮಿನಿಯಂ ಕಾರ್ಪೊರೇಷನ್‌ಗಳು ಸರ್ಕಾರದ ಈ ಹಣಕಾಸು ಸಂಗ್ರಹಣೆ ಕಾರ್ಯಕ್ರಮದಲ್ಲಿ ಬಡವಾಗಲಿವೆ. ಈ ಎಲ್ಲ ಸಾರ್ವಜನಿಕ ವಲಯದ ಉದ್ದಿಮೆಗಳು ಉದಾರೀಕರಣದ ನೀತಿಗಳಿಂದಾಗಿರುವ ಮುಗ್ಗಟ್ಟುಗಳನ್ನು ಎದುರಿಸತ್ತಿವೆ. ಆದರ ಜೊತೆಗೆ ಸರ್ಕಾರವೇ ಇವುಗಳನ್ನು ಹೀರುತ್ತಿರುವುದರಿಂದ ಇವು ಇನ್ನೂ ಹೆಚ್ಚಿನ ತೊಂದರೆಗೆ ಸಿಕ್ಕಿಕೊಳ್ಳಲಿವೆ.

ಬಿಜೆಪಿಯ(ಸರ್ಕಾರದ) ಆರ್ಥಿಕ ಅಜೆಂಡಾ

ಹಿಂದೆ ತಾನು ವಿರೋಧಿಸಿದ ಆರ್ಥಿಕ ನೀತಿಗಳನ್ನೇ ಬಿಜೆಪಿಯ ಕೇಂದ್ರ ಸರ್ಕಾರ ತನ್ನ ಅಜೆಂಡಾ ಮಾಡಿಕೊಂಡಿದೆ.ಯಾವ ನೀತಿಗಳು ದೇಶಕ್ಕೆ ಮಾರಕ ಎಂದು ತಾನು ವಿರೋಧ ಪಕ್ಷವಾಗಿದ್ದಾಗ ಬಿಜೆಪಿ ಹೇಳಿತ್ತೋ ಅವನ್ನೇ ಅದು ಇಂದು ತನ್ನದಾಗಿಸಿಕೊಂಡಿದೆ.

ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆಯಲ್ಲಿ ಸರ್ಕಾರ ಅನುಸರಿಸುತ್ತಿರುವ ನೀತಿಗಳಿಗೆ ಬಿಜೆಪಿ ತನ್ನ ಪೂರ್ಣ ಬೆಂಬಲ ನೀಡಿದೆ. ಸ್ಥೂಲವಾಗಿ ಹೇಳುವುದಾದರೆ

- ವಿಮಾ ಮಸೂದೆ ಮತ್ತು ಪೆಟೆಂಟ್ ಮಸೂದೆಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ನಿಲುವುಗಳನ್ನು ಬಿಜೆಪಿ ಒಪ್ಪಿಕೊಂಡಿದೆ. ಅದು ಸರ್ಕಾರ ಬೆಲೆಗಳನ್ನು ಸ್ಥಿರೀಕರಿಸಬೇಕೆಂದು ಒತ್ತಾಯಿಸಿದೆ.
- ಶೇರು ಮಾರಾಟದ ಪ್ರಕ್ರಿಯೆಯನ್ನು ಶೀಘ್ರಗೊಳಿಸಿ ಸಾಮಾಜಿಕ ಮತ್ತು ಅಂತರ್ರಚನಾ ಸೌಕರ್ಯ ವಲಯಗಳಲ್ಲಿ ಹೂಡಿಕೆ ಹೆಚ್ಚಿಸಬೇಕೆಂದು ಅದು ಒತ್ತಾಯಪಡಿಸಿದೆ.
- ಸಣ್ಣ ಕೈಗಾರಿಕಾ ವಲಯವನ್ನು ಬಲಪಡಿಸಬೇಕೆಂದು ಅದು ಹೇಳಿದೆ.
- ಸಣ್ಣ ಹೂಡಿಕೆದಾರರಿಗೆ ರಕ್ಷಣೆಯನ್ನು ಅದು ಕೋರಿದೆ.

ಮೇಲಿಂದ ಮೇಲೆ ನೋಡಿದರೆ ಬಿಜೆಪಿಯ ಈ ಅಜೆಂಡಾಗಳು ಬಿಜೆಪಿಗೆ ತೀವ್ರ ಕಾಳಜಿಯಿರುವಂತೆ ಅದನ್ನು ಬಿಂಬಿಸುತ್ತವೆ.

ಆದರೆ ನಿಜದಲ್ಲಿ ಬಿಜೆಪಿ ಸಾಮ್ರಾಜ್ಯಶಾಹಿಗಳ, ದೊಡ್ಡ ಬಂಡವಾಳಿಗಳ ಮತ್ತು ಭೂಮಾಲಕರ, ವ್ಯಾಪಾರಿಗಳ ಹಿತಾಸಕ್ತಿಗಳನ್ನೇ ಕಾಯುತ್ತಿರುವುದು ಗೊತ್ತಾಗಿ ಬಿಡುತ್ತದೆ.



ಬ್ಯಾಂಕಿಂಗ್ ವಲಯದ ನೌಕರರ ಮುಷ್ಕರ

ಜನವರಿ 12ರಂದು ಬ್ಯಾಂಕಿಂಗ್ ವಲಯದ 10ಲಕ್ಷ ನೌಕರರು ಒಂದು ದಿನದ ಮುಷ್ಕರ ನಡೆಸಿದರು. ದೇಶದಾದ್ಯಂತ ಬ್ಯಾಂಕಿಂಗ್ ಚಟುವಟಿಕೆ ಆ ದಿನ ನಡೆಯಲಿಲ್ಲ.

ವೇತನ ಹೆಚ್ಚಳಕ್ಕಾಗಿ ಮುಷ್ಕರ ಹೂಡಿರುವ ಈ ನೌಕರರ ಎದುರಿಗೆ ಉದಾರೀಕರಣ ತಂದು ನಿಲ್ಲಿಸಿರುವ ಪೆಡಂಭೂತವೇ ಇದೆ. ಸರ್ಕಾರ ಈ ಭೂತವನ್ನೇ ತೋರಿಸಿ ಬೆದರಿಕೆ ಹಾಕುತ್ತಿದೆ.

ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕುಗಳ ನೌಕರರೊಡನೆ ಬ್ಯಾಂಕುಗಳ ಪರವಾಗಿ ಐಬಿಎ ಅಂದರೆ ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ ವೇತನ ನಿರ್ಧರಿಸಲು ಮಾತುಕತೆ ನಡೆಸಿ ಒಪ್ಪಂದಕ್ಕೆ ಬರುವುದು ವಾಡಿಕೆ. ಈ ಸಾರಿ ಹಲವು ಬ್ಯಾಂಕುಗಳು ಐಬಿಎ ಇಂದ ಹೊರಬರುವ ಮಾತನ್ನು ಆಡುತ್ತಿದ್ದಾರೆ. ಐಬಿಎ ಬರೀ ಶೇ.8ರಷ್ಟು ವೇತನ ಹೆಚ್ಚಳ ನೀಡಲು ಮುಂದೆ ಬಂದಿದೆ.ಇದು ಬಹಳ ಕಡಿಮೆಯಾದ್ದರಿಂದ ನೌಕರರು ಮುಷ್ಕರಕ್ಕೆ ಇಳಿದಿದ್ದಾರೆ.

ನಿಜದಲ್ಲಿ ನೋಡಿದರೆ ಕಳೆದ ಸಾಲಿನಲ್ಲಿ ಒಟ್ಟಾರೆಯಾಗಿ ಬ್ಯಾಂಕುಗಳು ಹೆಚ್ಚಿನ ಲಾಭ ತೋರಿಸಿವೆ.ಕಳೆದ ಸಾಲಿನಲ್ಲಿ ಒಟ್ಟಾರೆಯಾಗಿ ಹಾನಿ ತೋರಿಸಿದ್ದ ಬ್ಯಾಂಕುಗಳು ಈ ಸಾರಿ ಒಟ್ಟಾರೆಯಾಗಿ ಲಾಭ ತೋರಿಸಿವೆ.ಆದರೂ ಹಲವು ಬ್ಯಾಂಕುಗಳು ದುರ್ಬಲವಾಗಿರುವುದರಿಂದ ಅವು ಹೆಚ್ಚಿನ ವೇತನ ನೀಡಲಾರವೆಂಬ ನಿಲುವನ್ನು ಐಬಿಎ ತಳೆದಿದೆ.

ಬಂಡವಾಳಿಗರಿಗಾಗಿ ಬಡ್ಡಿ ಕಡಿತ, ಗ್ರಾಹಕ ಸೇವೆ ಇತ್ಯಾದಿ ಮಾತನಾಡುವ ಬ್ಯಾಂಕುಗಳ ಮ್ಯಾನೇಜುಮೆಂಟುಗಳು ನೌಕರರ ಸಂಬಳದ ವಿಷಯ ಬಂದಾಗ ಮಾತ್ರ ಲಾಭ ನಷ್ಟದ ಮಾತನಾಡುತ್ತಿವೆ. ಗುಟ್ಟಿನಲ್ಲಿ ಸಹಸ್ರಗಟ್ಟಲೆ ಕೋಟಿ ರೂಪಾಯಿಗಳ ಸಾಲವನ್ನು (ಬಂಡವಾಳಿಗರದು)ಮನ್ನಾ ಮಾಡುವ ಇವು ನೌಕರರಿಗೆ ಹೆಚ್ಚಿನ ಸಂಬಳದ ಮಾತು ಬಂದಾಗ ತಮ್ಮ ನಿಜ ರೂಪವನ್ನು ತೋರುತ್ತಿವೆ.

ಕಂಪನಿಗಳ ಮೇಲೆ ನಿಗಾ

ಕಂಪನಿಗಳ ಮೇಲೆ ನಿಗಾ ಇಡಿ ಎಂದು ಸರ್ಕಾರ ಹಣಕಾಸು ಸಂಸ್ಥೆಗಳಿಗೆ ಹೇಳಿದೆ. ಕಂಪನಿಗಳ ಮೇಲಿನ ಹಲವು ನಿರ್ಬಂಧಗಳನ್ನು ತೆಗೆದು ಹಾಕಿ ಈಗ ಈ ಕಂಪನಿಗಳ ಮೇಲೆ ನಿಗಾ ಇಡಿ ಎಂದು ಹಣಕಾಸು ಸಂಸ್ಥೆಗಳಿಗೆ ಹೇಳುತ್ತಿರುವುದು ತಮಾಷೆಯಾಗಿದೆಯಲ್ಲವೇ?

ಈ ಕೆಳಗಿನ ವಿಷಯಗಳಲ್ಲಿ ನಿಗಾ ಇಡಬೇಕೆಂದು ಸರ್ಕಾರ ಸೂಚಿಸಿದೆ.

- ಸಾಕಷ್ಟು ವಿಷಯಗಳನ್ನು ಬಹಿರಂಗಪಡಿಸದೇ ಇರುವುದು
- ಅಂತರ್ರಾಷ್ಟ್ರೀಯ ಲೆಕ್ಕ ನೀತಿ ಅನುಸರಿಸುವುದು
- ಮುಖ್ಯ ಕಾರ್ಯನಿರ್ವಾಹಕ ಮತ್ತು ಅಧ್ಯಕ್ಷರು ಬೇರೆ ಬೇರೆಯಾಗಿರುವುದು
- ಕಂಪನಿಯ ಬೋರ್ಡುಗಳು ನಿಯಮಿತವಾಗಿ ಸೇರಿ ಸಭೆ ನಡೆಸುವುದು ಇತ್ಯಾದಿ.

ಉದಾರೀಕರಣ ಬಂದಂದಿನಿಂದ ಕಂಪನಿಗಳು ಸಕಲ ಅವ್ಯವಹಾರಗಳಲ್ಲಿ ತೊಡಗಿರುವುದು ನಿಜವಾಗಿರುವುದರಿಂದ ಸರ್ಕಾರ ಈಗ ಇಂತಹ ಕಣ್ಣುಕಟ್ಟಿನ ಕ್ರಮ ಅನುಸರಿಸ ಬೇಕಾಗಿದೇ ಅಲ್ಲವೇ

ಆರ್ಥಿಕದ ಆಮೂಲಾಗ್ರ ದುರಸ್ತಿಯಾಗಬೇಕು ಸುಧಾರಣೆಗಳು ಜನ - ಕೇಂದ್ರಿತವಾಗಿರಬೇಕು

ಹಣಕಾಸು ಮಂತ್ರಿಗಳಿಗೆ ಸಿಐಟಿಯು ಸೂಚನೆ

ಆರ್ಥಿಕ ನೀತಿಗಳಲ್ಲಿ ಒಂದು ಆಮೂಲಾಗ್ರ ದುರಸ್ತಿಕಾರ್ಯ ಕೈಗೊಳ್ಳಬೇಕು ಮತ್ತು ಆರ್ಥಿಕ ಸುಧಾರಣೆಗಳ ದಿಕ್ಕಿನಲ್ಲಿ ಮತ್ತು ಒತ್ತಿನಲ್ಲಿ ಜನಗಳನ್ನು ಕೇಂದ್ರವಾಗಿಟ್ಟು ಕೊಂಡು ಸಮಗ್ರ ಬದಲಾವಣೆಗಳನ್ನು ತರಬೇಕು. ಇದು ಜನವರಿ 13ರಂದು ಹಣಕಾಸು ಮಂತ್ರಿಗಳು ಕಾರ್ಮಿಕ ಸಂಘ ಗಳೊಂದಿಗೆ ನಡೆಸಿದ ಸಮಾಲೋಚನೆ ಯಲ್ಲಿ ಸಿಐಟಿಯು ಮಾಡಿರುವ ಆಗ್ರಹ.

ಎಂದಿನಂತೆ ಕೇಂದ್ರ ಬಜೆಟಿನ ಮೊದಲು ಹಣಕಾಸು ಮಂತ್ರಿಗಳು ಕರೆದ ಈ ಸಭೆಯಲ್ಲಿ ಸಿಐಟಿಯು ಪ್ರತಿನಿಧಿಗಳು ಈ ಕೆಳಗಿನ ಪ್ರಶ್ನೆಗಳ ಮೇಲೆ ಸರಕಾರ ತಕ್ಷಣ ಗಮನ ಹರಿಸಬೇಕು ಎಂದು ಒತ್ತಿ ಹೇಳಿದರು:

- ■ ಜನಗಳ ಜೀವನ ಮಟ್ಟವನ್ನು ಸುಧಾರಿಸುವುದು ಬಜೆಟಿನ ಗುರಿಯಾಗಿರಬೇಕು. ಇದಕ್ಕಾಗಿ ನಗರಗಳಲ್ಲೂ, ಗ್ರಾಮೀಣ ಪ್ರದೇಶಗಳಲ್ಲೂ ಕನಿಷ್ಠ ಕೂಲಿ ಹೆಚ್ಚಿಸಬೇಕು,ರೇಶನ್ ವ್ಯವಸ್ಥೆಯನ್ನು ಬಲಪಡಿಸಬೇಕು ಹಾಗೂ ಸಾಮಾಜಿಕ ಮೂಲಸೌಲಭ್ಯಗಳ ವಲಯಗಳಲ್ಲಿ ಖರ್ಚಿನ ಪ್ರಮಾಣ ಹೆಚ್ಚಿಸಬೇಕು.
- ■ ಕೇವಲ ಹಣಕಾಸು ಕೊರತೆ ತುಂಬಲಿಕ್ಕಾಗಿ ಬೇಕಾಬಿಟ್ಟಿಯಾಗಿ ಸಾರ್ವಜನಿಕ ವಲಯದ ಶೇರುಗಳ ಮಾರಾಟ ಹಾಗೂ ಖಾಸಗೀಕರಣ ಮಾಡುವುದನ್ನು ಸರಕಾರ ಕೈಬಿಡಲೇಬೇಕು. ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಹಾಗೂ ಬಲಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು.
- ■ ದೇಶದ ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಗೊಳಿಸಲು, ಸಾರ್ವತ್ರಿಕಗೊಳಿಸಲು ಒಂದು ಧೈರ್ಯದ ಹೆಜ್ಜೆ ಈ ಬಜೆಟಿನ ಒಂದು ಪ್ರಮುಖ ಲಕ್ಷಣವಾಗಬೇಕು. ಇದಕ್ಕಾಗಿ ಸಾಕಷ್ಟು ಸಂಪನ್ಮೂಲವನ್ನು ಒದಗಿಸಬೇಕು.
- ■ 'ಬೇರೋಜ್ ಗಾರೀ ಹಟಾವೋ' ಎಂಬ ತನ್ನ ಮಾತಿಗನುಗುಣ ವಾಗಿ ಸರಕಾರ ಬಜೆಟಿನಲ್ಲಿ ಉದ್ಯೋಗದ ಹಕ್ಕು ಒಂದು ಮೂಲಭೂತ ಹಕ್ಕು ಎಂದು ಸಾರಬೇಕು ಹಾಗೂ ನಗರ ಪ್ರದೇಶ ಗಳಲ್ಲೂ-ಗ್ರಾಮೀಣ ಪ್ರದೇಶಗಳಲ್ಲೂ, ಸಂಘಟಿತ ವಲಯದಲ್ಲೂ-ಅಸಂಘಟಿತ ವಲಯದಲ್ಲೂ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶ ನಿರ್ಮಾಣಕ್ಕೆ ಕ್ರಮಗಳನ್ನು ಹಾಗೂ ಯೋಜನೆಗಳನ್ನು ಬಜೆಟಿನಲ್ಲಿ ಅಳವಡಿಸಬೇಕು.
- ■ ಸಾರ್ವಜನಿಕ ವಲಯದ ಉದ್ದಿಮೆಗಳ ಪುನಶ್ಚೇತನಕ್ಕೆಂದು ರೂಪಿಸಿದ ಹಲವು ಸಮಗ್ರ ಕ್ರಮಗಳು ಹಣಕಾಸು ಸಚಿವಾಲಯದ ಅನುಮೋದನೆಗೆ ಕಾದಿವೆ. ಈ ಎಲ್ಲಾ ಕ್ರಮಗಳಿಗೆ ಹಣಕಾಸು ಅನುಮೋದನೆ ನೀಡಲು ಮುಂಬರುವ ಬಜೆಟ್ ಸಾಕಷ್ಟು ಹಣ ಒದಗಿಸಬೇಕು.
- ■ ಸರಕಾರ ಪೇಟೆಂಟುಗಳು ಹಾಗೂ ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆಗಳನ್ನು ಹಿಂತೆಗೆದುಕೊಳ್ಳಬೇಕು.
- ■ ಸುಧಾರಣಾ ಪ್ರಕ್ರಿಯೆ ಆರಂಭವಾದಂದಿನಿಂದ ವ್ಯಾಪಾರೀ ಗುಂಪುಗಳಿಗೆ ರಿಯಾಯ್ತಿ ಗಳನ್ನು,ಒಂದಾದ ಮೇಲೆ ಒಂದರಂತೆ ಕ್ಷಮಾದಾನ ಕ್ರಮಗಳನ್ನು ನೀಡುವುದೇ ಸರಕಾರದ ನಿಲುವಿನ ಮುಖ್ಯ ಲಕ್ಷಣವಾಗಿಬಿಟ್ಟಿದೆ. ಈ ಕ್ಷಮಾದಾನ ಖಾಯಿಲೆಯಿಂದ ಸರಕಾರ ತನ್ನನ್ನು ಮುಕ್ತಗೊಳಿಸಿಕೊಂಡು ಕಪ್ಪು ಹಣ ಮತ್ತು ಸಮಾನಾಂತರ ಆರ್ಥಿಕವನ್ನು ಎದುರಿಸಲು ಧೀರ ಕ್ರಮಗಳನ್ನು ಕೈಗೊಳ್ಳಬೇಕು.
- ■ ಆದಾಯ ತೆರಿಗೆಯ ವಿನಾಯ್ತಿ ಮಿತಿಯನ್ನು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿಸಿ ಸಂಬಳದಾರರಿಗೆ ಬಜೆಟಿನಲ್ಲಿ ಪರಿಹಾರ ಒದಗಿಸಬೇಕು.
- ■ ಇತ್ತೀಚೆಗೆ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರಗಳನ್ನು ಇಳಿಸಿದ ಕ್ರಮವನ್ನು ಸರಕಾರ ರದ್ದುಪಡಿಸಬೇಕು, ಈ ಯೋಜನೆಗಳಲ್ಲಿ ತಾವು ಬೆವರು ಸುರಿಸಿ ಸಂಪಾದಿಸಿದ್ದರಲ್ಲಿ ಕಷ್ಟಪಟ್ಟು ಉಳಿಸಿದ ಜನಸಾಮಾನ್ಯರ,ನಿವೃತ್ತರ, ಪಿಂಚಣಿದಾರರ ಹಿತಾಸಕ್ತಿಗಳನ್ನು ರಕ್ಷಿಸಬೇಕು.
- ■ ಬೋನಸ್ ಪಾವತಿ ಕಾಯ್ದೆ ಇತ್ಯಾದಿ ಕಾರ್ಮಿಕ ಶಾಸನಗಳಲ್ಲಿ ಆದಾಯದ ಮಿತಿ-ಪರಿಮಿತಿಗಳನ್ನು ತೆಗೆಯಬೇಕು.
- ■ ಸಾರ್ವಜನಿಕ ಖಾತೆ ಯಲ್ಲಿರುವ ನೌಕರರ ಪೆನ್ಶನ್ ಯೋಜನೆಯ ಹಣಕ್ಕೆ ಬಡ್ಡಿದರವನ್ನು ಶೇ.8.5ರಿಂದ ಶೇ.12.5ಕ್ಕೆ ಏರಿಸಬೇಕು.

ಎರಡನೇ ಕಾರ್ಮಿಕ ಆಯೋಗದ ರಚನೆ ಹಾಗೂ ಕಾರ್ಯವ್ಯಾಪ್ತಿಯ ಬಗ್ಗೆ ಕೇಂದ್ರ ಕಾರ್ಮಿಕ ಸಂಘಗಳೊಡನೆ ಆರಂಭದಿಂದ ಮಾತುಕತೆ ನಡೆಸಬೇಕು ಎಂದೂ ಸಿಐಟಿಯು ಆಗ್ರಹ ಪಡಿಸಿದೆ. ಎಂಟು ವರ್ಷಗಳಿಂದಲೂ ಹೆಚ್ಚು ಸಮಯದಿಂದ ನೆನೆಗುದಿಗೆ ಬಿದ್ದಿರುವ ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ ಕುರಿತಾದ ಮಸೂದೆಯನ್ನು ತಕ್ಷಣವೇ ಶಾಸನವಾಗಿ ಮಾಡಬೇಕು ಎಂದೂ ಅದು ಒತ್ತಾಯಿಸಿದೆ.

ಹಣಕಾಸು ಮಂತ್ರಿಗಳ ಜೊತೆಗಿನ ಈ ಸಭೆಯಲ್ಲಿ ಜೀಬನ್ ರಾಯ್ ಹಾಗೂ ಡಬ್ಲ್ಯು.ಆರ್. ವರದರಾಜನ್ ಸಿಐಟಿಯುವನ್ನು ಪ್ರತಿನಿಧಿಸಿದ್ದರು.

ರಾಷ್ಟ್ರೀಯ ಚರ್ಚೆಯ ಹೆಸರಲ್ಲಿ ....

ಪುಟ 1 ರಿಂದ

ದಿಂದಾಗಲೀ, ಅದನ್ನು ಬೇಗನೇ ಹತೋಟಿಗೆ ತರುವಲ್ಲಿ ಬಿಜೆಪಿ ಸರಕಾರದ ವಿಫಲತೆಯಿಂದಾಗಲೀ ಬೇರೆಡೆಗೆ ಸೆಳೆಯಬಹುದು ಎಂದು ನಂಬಿದ್ದರೆ ಅದು ದೊಡ್ಡ ತಪ್ಪಾಗುತ್ತದೆ ಎಂದು ಟಿಪ್ಪಣಿ ಮಾಡಿದೆ 'ಹಿಂದೂ' ಪತ್ರಿಕೆಯ ಸಂಪಾದಕೀಯ.

ಮತಾಂತರದ ಪ್ರಶ್ನೆಯೆತ್ತಿದಾಗ ಇದು ಏಕೆ ನಡೆಯುತ್ತದೆ ಎಂಬ ಪ್ರಶ್ನೆಯೂ ಏಳುತ್ತದೆ. ಆದಿವಾಸಿಗಳು, ದಲಿತರು ಇತ್ಯಾದಿ ಕೆಳವರ್ಗದಲ್ಲಿರುವ ಜನ ಸಮುದಾಯ ಬೇರೆ ಧರ್ಮಗಳತ್ತ ಏಕೆ ಆಕರ್ಷಿತರಾಗುತ್ತಾರೆ ಎಂಬುದರ ಬಗ್ಗೆ ಚಿಂತನೆ ನಡೆಯಬೇಕು ಎಂದಿರುವ 'ಪ್ರಜಾವಾಣಿ' ದೈನಿಕದ ಸಂಪಾದಕೀಯ ಚರ್ಚೆ ನಡೆಯಬೇಕಾದ್ದು ಮತಾಂತರದ ಬಗ್ಗೆಯಲ್ಲ, ಹಿಂದು ಧರ್ಮದ ಇಂತಹ ಹಲವಾರು ದೋಷ, ದೌರ್ಬಲ್ಯಗಳ ಬಗ್ಗೆ ಎಂದು ಅಭಿಪ್ರಾಯಪಟ್ಟಿದೆ.

ಇದು ನಿಜ. ಆದರೆ ತಕ್ಷಣದ ಪ್ರಶ್ನೆ ಬಿಜೆಪಿ ಈ ರೀತಿ ತನ್ನ ಬಚ್ಚಿಟ್ಟ ಅಜೆಂಡಾವನ್ನು ಜ್ಯಾರಿಗೊಳಿಸಲು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಹೇಗೆ ನೇರವಾಗಿ, ಪರೋಕ್ಷವಾಗಿ ಪ್ರಯತ್ನಿಸುತ್ತಾ ಜನಗಳ ಶಾಂತಿ- ಸೌಹಾರ್ದತೆಗೆ ಗಂಭೀರ ಅಪಾಯ ಒಡ್ಡಿದೆ ಎಂಬುದನ್ನು ಮನಗಂಡು ಅದನ್ನು ಎದುರಿಸುವುದು.

ಪ್ರಧಾನಿಗಳ 'ಕರೆ'ಯ ಮರುದಿನವೇ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಅಲ್ಪಸಂಖ್ಯಾತರ ವಿರುದ್ಧ ಧಾಳಿಗಳನ್ನು ತಡೆಯುವಲ್ಲಿ ವಿಫಲವಾದ ಗುಜರಾತ್ ಸರಕಾರದ ವಿರುದ್ಧ ಸಂವಿಧಾನದ 256 ಹಾಗೂ 355ನೇ ಕಲಮಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಶಿಫಾರಸು ಮಾಡಿದೆ. ಈ ಕರೆಯ ಹಿಂದಿರುವುದು ಕೋಮು ರಾಜಕೀಯ ಎನ್ನುವ ಬಗ್ಗೆ ಬೇರೆ ಪುರಾವೆ ಬೇಕೇ?

ದ.ಕ. ಮತ್ತು ಉಡುಪಿ ಜಿಲ್ಲಾ 12ನೇ ರೈತ ಸಮ್ಮೇಳನ



1999 ಜನವರಿ 3 ಮತ್ತು 4 ರಂದು ದ.ಕ. ಮತ್ತು ಉಡುಪಿ ಜಿಲ್ಲಾ ರೈತ ಸಂಘದ 12 ನೇ ಸಮ್ಮೇಳನವು ಬೆಳ್ತಂಗಡಿಯ ಕಾಂ. ರಾಮಚಂದ್ರ ರಾವ್ ನಗರದಲ್ಲಿ ಯಶಸ್ವಿಯಾಗಿ ಜರಗಿತು.

ಜನವರಿ 3 ರಂದು ಬೆಳ್ತಂಗಡಿಯ ಮೂಲೆ ಮೂಲೆಯಲ್ಲಿ ಕೆಂಪು ಪತಾಕೆ ಹಾರಾಡುತ್ತಿತ್ತು. ನಗರವೆಲ್ಲ ಕೆಂಪು ತೋರಣಗಳಿಂದ ಮುಳುಗಿತ್ತು. ಕಾಂ. ರಾಮಚಂದ್ರ ರಾವ್ ನಗರವು ಪ್ರತಿನಿಧಿಗಳಿಗೆ ಸ್ವಾಗತ ನೀಡಿ ಕರೆಯುತ್ತಿತ್ತು. ಬೆಳ್ತಂಗಡಿಯ ಲಕ್ಷ್ಮೀವೆಂಕಟರಮಣ ಕಲಾ ಮಂಟಪದಲ್ಲಿ ಜಿಲ್ಲಾ ರೈತ ಸಂಘದ 12 ನೇ ಸಮ್ಮೇಳನವು ಕಾಂ. ಕೆ.ವಿ.ರಾವ್ ವೇದಿಕೆಯಲ್ಲಿ ನಡೆಯಿತು.

ಕಾಂ. ಡೇವಿಡ್ ಕರ್ಕಡ ಅವರು ಧ್ವಜಾರೋಹಣಗೈಯುವುದುರೊಂದಿಗೆ ಪ್ರಾರಂಭವಾದ ಸಮ್ಮೇಳನವು ಕೆ.ವಿ.ರಾವ್ ವೇದಿಕೆಯಲ್ಲಿ ಉದ್ಘಾಟನೆಗೊಂಡಿತು. ಸ್ವಾಗತ ಸಮಿತಿ ಅಧ್ಯಕ್ಷರೂ, ರೈತ ಸಂಘದ ಜಿಲ್ಲಾ ಸಮಿತಿ ಸದಸ್ಯರೂ ಆದ ನ್ಯಾಯವಾದಿ ಬಿ.ಎಂ.ಭಟ್ ಸ್ವಾಗತಿಸಿದರು. ವಿಷ್ಣುಮೂರ್ತಿ ಭಟ್ ಶ್ರದ್ಧಾಂಜಲಿ ನಿರ್ಣಯ ಮಂಡಿಸಿದರು. ನಿಧನರಾದ ಹಿರಿಯ ಸಂಗಾತಿಗಳಾದ ಇ.ಎಂ.ಎಸ್., ಪಿ. ರಾಮಚಂದ್ರ ರಾವ್, ಜನಾರ್ಧನ ನಾಯ್ಕ ಮೊದಲಾದ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯ್ತು. ಕೆ.ವಿ. ರಾವ್ ಬೆಳ್ತಂಗಡಿಯಲ್ಲಿ ರೈತ ಸಂಘ ಕಟ್ಟಿ ಬೆಳೆಸಿ ಬೆಳ್ತಂಗಡಿಯಲ್ಲಿಯ ರೈತರ ಕಣ್ಮಣಿಯಾಗಿದ್ದರು. ಜೀವದ ಹಂಗು ತೊರೆದು ರೈತರ ಪರ ಹೋರಾಡಿ ಬಹಳ ಕಷ್ಟನಷ್ಟ ಅನುಭವಿಸಿದ್ದರು. ಅವರು 31-12-96 ರಂದು ನಿಧನರಾಗುವ ತನಕ ಬೆಳ್ತಂಗಡಿಯ ತಾಲೂಕು ರೈತ ಸಂಘದ ಅಧ್ಯಕ್ಷರಾಗಿದ್ದರು. ಈ ಹಿರಿಯ ಸಂಗಾತಿಯ ನೆನಪಿಗಾಗಿ ಅವರ ಹೆಸರಿನ ವೇದಿಕೆಯಲ್ಲಿ ಈ 12 ನೇ ಸಮ್ಮೇಳನ ಜರಗಿತು. ಬೆಳ್ತಂಗಡಿಯ ಚರಿತ್ರೆಯಲ್ಲಿ ಪ್ರಥಮವಾಗಿ ನಡೆಯುತ್ತಿರುವ ಈ ಜಿಲ್ಲಾ ರೈತ ಸಮ್ಮೇಳನವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಅವರು ಉದ್ಘಾಟಿಸಿ ರೈತರ ಸಂಘಟನೆಯ ಅನಿವಾರ್ಯತೆ ಬಗ್ಗೆ ವಿವರಿಸಿದರು. ಸಂಘಟಿತ ರೈತರು ಮಾತ್ರ ಭೂ ಮಸೂದೆಯ ಪ್ರಯೋಜನವನ್ನು ಪಡೆದರು ಎಂದು ತಿಳಿಸಿ ಬರುವ ದಿನಗಳಲ್ಲಿ ರೈತರು ಸಂಘಟನೆಗೊಂಡು ತಮ್ಮ ಸಮಸ್ಯೆಗಳ ವಿರುದ್ಧ ಹೋರಾಡಬೇಕು ಎಂದು ಹೇಳಿದರು. ಸಮ್ಮೇಳನಕ್ಕೆ ಶುಭಕೋರಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಶ್ರೀಯಾನ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಬಿ. ಮಾಧವ ಬೀಡಿ ಜಿಲ್ಲಾ ಫೆಡರೇಶನ್‌ನ ಜಿ. ಬಾಲಕೃಷ್ಣ ಶೆಟ್ಟಿ, ಡಿ.ವೈ. ಎಫ್.ಐ. ಜಿಲ್ಲಾ ಅಧ್ಯಕ್ಷ ಕೃಷ್ಣಪ್ಪ ಕೊಂಚಾಡಿ ಮೊದಲಾದವರು ಮಾತಾಡಿದರು. ಜಿಲ್ಲಾ ಕಾರ್ಯದರ್ಶಿ ಅಬ್ರಾಹಂ ಕರ್ಕಡ ವರದಿ ಮಂಡಿಸಿದರು. 19 ಜನರು ಚರ್ಚೆಯಲ್ಲಿ ಭಾಗವಹಿಸಿ ನಂತರ ವರದಿ ಅಂಗೀಕರಿಸಲಾಯಿತು. ನಂತರ 35 ಮಂದಿಯ ನೂತನ ಜಿಲ್ಲಾ ಸಮಿತಿ ಆಯ್ಕೆ ಮಾಡಲಾಯ್ತು. ಸಮಿತಿ ಸೇರಿ 11 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಅಬ್ರಾಹಂ ಕರ್ಕಡ, ಕಾರ್ಯದರ್ಶಿಯಾಗಿ ರಾಮಚಂದ್ರ ಉಚ್ಚಿಲ್, ಕೋಶಾಧಿಕಾರಿಯಾಗಿ ಪಾವೂರು ಬಾಬು ಆಯ್ಕೆ ಅವರು.

ಮರುದಿನ ಬೆಳಿಗ್ಗೆ ಬೆಳ್ತಂಗಡಿ ತಾಲೂಕಿನ ಗ್ರಾಮ ಗ್ರಾಮಗಳಿಂದ ಹಳ್ಳಿ ಹಳ್ಳಿಗಳಿಂದ ಸಾವಿರಾರು ಮಹಿಳೆಯರು, ರೈತರು, ಯುವಕರು ಉತ್ಸಾಹದಿಂದ ಬೆಳ್ತಂಗಡಿಯಲ್ಲಿ ಸೇರ ತೊಡಗಿದರು. ಬೆಳಿಗ್ಗೆ ಹತ್ತೂವರೆ ಗಂಟೆಗೆ ಕಲಾಮಂಟಪದಿಂದ ವಿಜೃಂಭಣೆಯ ಮೆರವಣಿಗೆ ಹೊರಟಿತು. ಬೆಳ್ತಂಗಡಿಯ ಚರಿತ್ರೆಯ ಪುಟಗಳಲ್ಲಿ ದಾಖಲಾದ ಈ ಮೆರವಣಿಗೆ ಈತನಕ ಯಾವುದೇ ಸಂಘಟನೆಯ ಸಭೆಗೆ ಸೇರದಿದ್ದಷ್ಟು ಜನರು ಉತ್ಸಾಹದಿಂದ ಭಾಗವಹಿಸಿದ್ದರು. ಬೆಳ್ತಂಗಡಿಯ ಪೋಲೀಸ್ ಮೈದಾನದತನಕ ಬಂದ ಈ ಮೆರವಣಿಗೆ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಸುಮಾರು 1 ಗಂಟೆ ಹೊತ್ತು ಬೆಳ್ತಂಗಡಿ ನಗರವನ್ನು ಮಂತ್ರಮುಗ್ಧವಾಗಿಸಿತ್ತು. ರಸ್ತೆಯುದ್ದಕ್ಕೂ ಜನ ಕಣ್ಣರಳಿಸಿ, ನೋಡುವಂತಾಗಿತ್ತು ಈ ಅಪಾರ ಸಂಖ್ಯೆಯ ಗೌಜಿಯ ಮೆರವಣಿಗೆ.

ಸಾರ್ವಜನಿಕ ಸಭೆಯಲ್ಲಿ ಮೊದಲು ಎಲ್ಲರನ್ನೂ ಸ್ವಾಗತಿಸಿದ ಸ್ವಾಗತ ಸಮಿತಿ ಕಾರ್ಯದರ್ಶಿ ಹಾಗೂ ತಾಲೂಕು ರೈತ ಸಂಘದ ಕಾರ್ಯದರ್ಶಿಯಾದ ಹರಿದಾಸ್ ಅವರು, ಕರ್ನಾಟಕ ರಾಜ್ಯ ಕೃಷಿ ಕೂಲಿ ಸಂಘದ ಕಾರ್ಯದರ್ಶಿ, ಜಿ.ಎನ್. ನಾಗರಾಜ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಶ್ರೀಯಾನ್, ಜಿಲ್ಲಾ ರೈತ ಸಂಘದ ನೂತನ ಅಧ್ಯಕ್ಷ ಅಬ್ರಾಹಂ ಕರ್ಕಡ, ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್. ಸ್ವಾಗತ ಸಮಿತಿ ಅಧ್ಯಕ್ಷರಾದ ಬಿ.ಎಂ.ಭಟ್, ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ -ನ್ಯಾಯವಾದಿ ಶಿವಕುಮಾರ್, ಕಾರ್ಮಿಕ ಮುಖಂಡರುಗಳಾದ ಜೆ. ಬಾಲಕೃಷ್ಣ ಶೆಟ್ಟಿ, ಸಂಜೀವ ಬಂಗೇರ, ಯಲ್. ಮಂಜುನಾಥ, ಸುಕುಮಾರ, ಜಿ.ಪ. ಸದಸ್ಯೆ ಪದ್ಮಾವತಿ ಶೆಟ್ಟಿ ಮೊದಲಾದವರನ್ನು ವೇದಿಕೆ ಕರೆದು ಸ್ವಾಗತಿಸಿದರು. ನಂತರ ಕಾಂ: ಬಿ.ಎಂ. ಭಟ್, ಮಾತಾಡಿ ಸಮ್ಮೇಳನ ಕೈಗೊಂಡ ನಿರ್ಣಯಗಳನ್ನು ತಿಳಿಸಿದರು.

ಪ್ರಧಾನ ಭಾಷಣಕಾರರಾದ ಜಿ.ಎನ್. ನಾಗರಾಜ ರವರು ಮಾತಾಡಿ ರೈತರ ಹೋರಾಟದ ಚರಿತ್ರೆ, ಸಮಗ್ರ ಭೂಸುಧಾರಣೆಯ ಅಗತ್ಯ, ಪ. ಬಂಗಾಳ ಕೇರಳ ಭೂಸುಧಾರಣೆ ಬಗ್ಗೆ ವಿವರ ನೀಡಿ ಸ್ವದೇಶೀ ಮುಖವಾಡದಿಂದ ವಿದೇಶೀಯರಿಗೆ ಖಾಸಗೀಕರಿಸುತ್ತಿರುವ ಕೇಂದ್ರ ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ಬೆಲೆ ಏರಿಕೆಗಳ ಬಗ್ಗೆ ಪ್ರಸ್ತಾಪಿಸಿ ಕಾಂಗ್ರೆಸ್ 45 ವರ್ಷಗಳಲ್ಲಿ ಮಾಡಿದ್ದನ್ನು ಬಿಜೆಪಿ ಕೇವಲ ಎಂಟು ತಿಂಗಳಲ್ಲಿ ಮಾಡಿತು ಎಂದು ಹೀಯಾಳಿಸಿದರು. ಕೋಮು ಸೌಹಾರ್ದತೆಯ ಬಗ್ಗೆ ಗಮನಸೆಳೆದ ಅವರು ದ.ಕ. ಜಿಲ್ಲೆಯಲ್ಲಿ ನಡೆಯುತ್ತಿರುವ ಕೋಮು ಗಲಭೆ ಬಗ್ಗೆ ಕಳವಳ ವ್ಯಕ್ತಪಡಿಸಿ ಕೋಮು ಸೌಹಾರ್ದತೆಗೆ ಕರೆ ನೀಡಿದರು.

ಕೇಂದ್ರ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ಜನ ತಿರುಗಿ ಬೀಳದಂತೆ ಬೆಲೆ ಏರಿಕೆ ವಿರುದ್ಧ ಜನ ಸಂಘಟಿತರಾಗದಂತೆ ಬಿಜೆಪಿ ಈ ಕೋಮು ಗಲಭೆ, ಬಾಂಬ್ ಸ್ಫೋಟ ಮೊದಲಾದ ಹೇಯ ಕೃತ್ಯಗಳನ್ನು ಮಾಡಿಸುತ್ತಿದೆ ಎಂದು ಅವರು ದೂರಿದರು. ವ್ಯಾಪಾರಿ ವರ್ಗದಿಂದ ಹಣ ಪಡೆದು ಅದರ ಬಡ್ಡಿ ತೀರಿಸಲು ಸಹಕರಿಸುವಂತೆ ಈ ಬೆಲೆ ಏರಿಕೆಗಳಿಗೆ ಮೌನ ಸಮ್ಮತಿ ನೀಡುತ್ತಿದೆ ಈ ಬಿಜೆಪಿ ಸರಕಾರ ಎಂದು ಅವರು ಹೇಳಿದರು.

ಶ್ರೀಯಾನ್, ಅಬ್ರಾಹಂ ಕರ್ಕಡ ಮಾತಾಡಿದರು. ಎಲ್.ಮಂಜುನಾಥ ವಂದಿಸಿದರು. ಬೆಳ್ತಂಗಡಿ ತಾಲೂಕು ನಿರ್ಮಿಸಿದ ಈ ಚರಿತ್ರೆ ದುಡಿಯುವ ವರ್ಗದ ಸಂಘಟನೆಗಳಿಗೆ ಹಾಗೂ ಇತರ ಪ್ರದೇಶಗಳಿಗೆ ಮಾದರಿಯಾಗಿತ್ತು. ಜನ ಎಡ ಶಕ್ತಿಗಳ ಕಡೆ ಕಾತುರದಿಂದ ನೋಡುತ್ತಿದ್ದಾರೆ ಎಂಬ ಅರಿವು ಎಲ್ಲರೂ ತಿಳಿದುಕೊಳ್ಳುವಂತೆ ಮಾಡಿತ್ತು ಈ ಜನ ಪ್ರವಾಹ. ಸಮ್ಮೇಳನದ ಯಶಸ್ವಿಗೆ ತಾಲೂಕಿನ ಸರ್ವಜನತೆ ಸಹಕರಿಸಿತ್ತು. ○

ಕಾನೂನಿನ ಹೆಸರಿನಲ್ಲಿ ಉಳುಮೆ ಮಾಡುವ ರೈತರನ್ನು ಎತ್ತಂಗಡಿ ಮಾಡಬೇಡಿ - ಮಾರುತಿ ಮಾನ್ಪಡೆ

ಉತ್ತರ ಕನ್ನಡ: ಭಾರತ ಸ್ವಾತಂತ್ರ್ಯ ಹೊಂದಿದಾಗ ರೈತರ ಬದುಕು ಹಸನಾಗಿ ಒಳ್ಳೆ ಜೀವನ ಸಿಗುತ್ತದೆ ಎಂದು ಭಾವಿಸಿದ್ದರೆ, ಇಂದು ಆ ಒಳ್ಳೆ ಜೀವನ ಮಟ್ಟದ ಕನಸು ನನಸಾಗಲಿಲ್ಲ. ಬಡ ರೈತರು ಕೊಳ್ಳುವ ವಸ್ತುವಿನ ಮೇಲೆ ಟ್ಯಾಕ್ಸಿ ಹೆಚ್ಚಿಸಿ. ಶ್ರೀಮಂತರುಗಳಿಗೆ ಅನುಕೂಲವಾಗುವಂತೆ ಮಾಡಿದ ಇಂದಿನ ಸರ್ಕಾರಗಳು ಎಲ್ಲವನ್ನು ವಿದೇಶಿಯರಿಗೆ ಮಾರಲು ಹೊರಟಿದ್ದಾರೆ. ಐಶಾರಾಮಿ ಜೀವನ ನಡೆಸುವ ಈ ಜನರು ರೈತರನ್ನು ಕೃಷಿ ಕೂಲಿಕಾರರನ್ನು ನಿರ್ಗತಿಕರನ್ನಾಗಿಸಿ, ಭೂಮಿಯ ಉಳಿಮೆ ಮಾಡಿದವನಿಗೆ ಭೂಮಿ ಕೊಡದೇ ಕಾನೂನಿನ ಹೆಸರಿನಲ್ಲಿ ರೈತರನ್ನು ಎತ್ತಂಗಡಿ ಮಾಡುತ್ತಿದ್ದಾರೆ. ಈ ರೀತಿಯನ್ನು ರೈತರೆಲ್ಲ ಸೇರಿ ಹಿಮ್ಮೆಟ್ಟಿಸಬೇಕು ಎಂದು ಮಾರುತಿ ಮಾನ್ಪಡೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರು ರೈತರಿಗೆ ಕರೆ ನೀಡಿದರು.

ಅವರು ಕಾರವಾರದ ಉಳಗಾದಲ್ಲಿ ನಡೆದ ರೈತರ ಸಮ್ಮೇಳನವನ್ನು ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು. ನಪುಂಸಕ ಬೀಜ (ಮಾನ್ಸಂಟೋ) ಖರೀದಿಸಲು ಒತ್ತಡ ಹೇರುತ್ತಿದೆ. ಒಟ್ಟಾರೆಯಾಗಿ ಬಂಡವಾಳಶಾಹಿ ಪರವಾದ ಉದಾರೀಕರಣ, ನೀತಿಪರವಾದ ಈ ಆಳುವ ಜನ 'ಲೂಟೋ, ಮಾರೋ ಬಚಾವೋ' ಎನ್ನುತ್ತ ರೈತರನ್ನು ಸಂಕಷ್ಟಕ್ಕೀಡು ಮಾಡಿದ್ದಾರೆ ಎಂದರು. ಅತಿಥಿಗಳಾದ ರೈತ ಮುಂದಾಳು ಮಂಜುನಾಥ ಪುಲ್ಕರ್, ಶಾಂತಾರಾಂ ನಾಯಕ್ ಮಾತನಾಡಿ ಭಾರತದ ಸ್ವಾತಂತ್ರ್ಯಕ್ಕಾಗಿ ಹಾಗೂ ಭೂಮಿಗಾಗಿ ಮಾಡಿದ ಹೋರಾಟದ ಅನುಭವ ಪಡೆದು ನಾವು ಇನ್ನೂ ಸಂಘಟಿತರಾಗ ಬೇಕಿದೆ. ಯುವಜನರು ಈ ರೈತರ ಪರವಾದ ಹೋರಾಟದಲ್ಲಿರುತ್ತಾರೆ ಎಂದರು.

ಅಧ್ಯಕ್ಷತೆವಹಿಸಿದ್ದ ಜೀವಾಜಿ ಪುರುಷೋತ್ತಮ ನಾಯ್ಕ, ಹಿಂದೆ ಗೋದಾವರಿ ಪರುಳೇಕರರಂಥ ಆದಿವಾಸಿ ಜನರ ಪರ ಹೋರಾಟ ಮಾಡಿದ್ದು ರೈತ ಕಾರ್ಮಿಕ ಹೋರಾಟಕ್ಕೆ ನೇತೃತ್ವ ಕೊಟ್ಟ ಬಿ.ಟಿ ರಣದಿವೆ, ಪಿ.ಆರ್.ರಾವ್‌ರವರ ನೇತೃತ್ವದ ರೈತ ಹೋರಾಟ ಕಾರವಾರ ತಾಲೂಕಿನಲ್ಲಿ ಆದುದನ್ನು ಸ್ಮರಿಸಿ ಇಂದು ಈ ತಾಲೂಕಿನ ರೈತ ಹೋರಾಟಕ್ಕೆ ನೇತೃತ್ವ ನಾವೇ ವಹಿಸಿಕೊಂಡು ಅಂದು ಹುತಾತ್ಮ ಸಂಗಾತಿಗಳ ಕನಸನ್ನು ನನಸಾಗಿಸೋಣ ಎಂದರು. ಎಂ.ಜಿ. ಶೇಟ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಜಿ.ಎಲ್. ನಾಯ್ಕ ವಂದಿಸಿದರು.

ಸಮ್ಮೇಳನ ಕೈಗೊಂಡ ನಿರ್ಣಯಗಳು:

. ಉಳಗಾ-ಹಳಗಾದಲ್ಲಿ ಅಕ್ರಮ ಮನೆಗಳನ್ನು ಸಕ್ರಮಗೊಳಿಸಬೇಕು.

. ಭೂಮಿ ಉಳುಮೆ ಮಾಡುವವರಿಗೆ ಹಕ್ಕು ಪತ್ರ ನೀಡಬೇಕು.

. ಎಲ್ಲ ಮನೆಗಳಿಗೆ ನೀರು ಒದಗಿಸಿಕೊಡಬೇಕು ಮುಂತಾದ ಇನ್ನು ಕೆಲವು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಬೇಡಿಕೆ ಕೂಡಲೇ ಈಡೇರಿಸದಿದ್ದಲ್ಲಿ ಗ್ರಾಮ ಪಂಚಾಯತ್ ಎದುರು ಸರದಿ ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಗಿದೆ.

ಅಧ್ಯಕ್ಷರಾಗಿ ಶ್ರೀ ಜೀವಾಜಿ ಪುರುಷೋತ್ತಮ ನಾಯ್ಕ, ಕಾರ್ಯದರ್ಶಿ ಅಶೋಕಹರಿ ಶೇಟ್ ಆಯ್ಕೆಯಾದರು.

ಬೀಡಿಯಲ್ಲಿ ಕಂಟ್ರಾಕ್ಟ್ ಪದ್ದತಿ ರದ್ದಿಗೆ ಒತ್ತಾಯ

ದ.ಕನ್ನಡ: ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಬೊರುಗುಡ್ಡ ಪ್ರದೇಶದ ಬೀಡಿ ಮಜ್ದೂರರ ಸಭೆಯ ಜನವರಿ 1-1-99 ರಂದು ಜರಗಿತು. ಸಭೆಗೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಂಘದ ಕಾರ್ಯದರ್ಶಿ ಸದಾಶಿವ ದಾಸ್ ಮಾತನಾಡುತ್ತ ಬೀಡಿ ಕಾರ್ಮಿಕರನ್ನು ದಿನ ನಿತ್ಯ ಶೋಷಣೆ ಮಾಡುತ್ತಿರುವ ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕೆಂದು ಒತ್ತಾಯಿಸಿದರು.

ಸಿ.ಐ.ಟಿ.ಯು ಸಂಘದ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಸಂಘಟಿತರಾಗಿ ಹಲವಾರು ಸವಲತ್ತುಗಳನ್ನು ಪಡೆದಿರುತ್ತಾರೆ. ಸಾವಿರ ಬೀಡಿಗೆ ಪಿ.ಎಫ್.ಕಟ್ಟು ಮಾಡಿ 39-26 ಕಾರ್ಮಿಕರ ಕೈಗೆ ಸಿಗಬೇಕಾದ ಕೂಲಿ, ಇದರಲ್ಲಿ ಕಂಟ್ರಾಕ್ಟ್‌ದಾರರು ತೀರಾ ಕಡಿಮೆ ಕೊಡುತ್ತಿರುವುದು ಹಾಗೂ ಎಲೆ ಎವರೇಜಿನ ಸರಾಸರಿ ಹೆಸರಲ್ಲಿ ಕಾರ್ಮಿಕರಿಂದ ಪ್ರತೀವಾರ ದಂಡದ ರೂಪದಲ್ಲಿ ಹಣ ವಸೂಲಿ ಮಾಡುವುದು ಮತ್ತು ಕಾರ್ಮಿಕರ ಕೈಯಲ್ಲಿ ಕೂಡಬೇಕಾದ ಲೋಗ ಪುಸ್ತಕ ಕೊಡದೆ ಇರುವುದು ಅದರಲ್ಲಿ ಕಾರ್ಮಿಕರ ಕೈಯಲ್ಲಿ ಕೊಡಬೇರಾದ ಲೋಗ ಪುಸ್ತಕ ಕೊಡದೆ ಇರುವುದು ಅದರಲ್ಲಿ ಕಾರ್ಮಿಕರು ಕಟ್ಟಿದ ಬೀಡಿಯನ್ನು ಬರೆಯದೆ ಕಂಟ್ರಾಕ್ಟ್‌ದಾರರ ಮನೆಯವರ ಹೆಸರಿನಲ್ಲಿರುವ ಲೋಗ ಪುಸ್ತಕದಲ್ಲಿ ಬರೆದು ಬೀಡಿ ಕಾರ್ಮಿಕರಿಗೆ ಸಿಗಬೇಕಾದ ಬೋನಸ್ಸು ಹಾಗೂ ಪ್ರಾವಿಡೆಂಟ್ ಫಂಡ್ ಹಣದಲ್ಲಿ ಕಾರ್ಮಿಕರಿಗೆ ತೀರ ಮೋಸ ಮಾಡುತ್ತಿರುವುದು, ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕೆಂದರು.

ಕಂಟ್ರಾಕ್ಟ್‌ದಾರರು ಈ ಅನ್ಯಾಯವನ್ನು ನಿಲ್ಲಿಸದಿದ್ದಲ್ಲಿ ಬ್ರಾಂಚ್ ಬ್ರಾಂಚ್‌ಗಳಲ್ಲಿ ಕಾರ್ಮಿಕರು ಹೋರಾಟ ನಡೆಸುವುದು ಅನಿವಾರ್ಯವಾಗಿದೆಯೆಂದರು.

ಸಂಘದ ಕೋಶಾಧಿಕಾರಿ ನೋಣಯ್ಯ ಗೌಡರವರು ಮಾತನಾಡುತ್ತ ಕಾರ್ಮಿಕರು ಸಂಘಟನೆಯನ್ನು ಬಲಪಡಿಸಿ ತಮಗಾಗುವ ಅನ್ಯಾಯವನ್ನು ಎದುರಿಸಲು ಸಿದ್ಧರಾಗಬೇಕೆಂದರು. ಜನವರಿ 24 ರಂದು ನಡೆಯುವ ಸಂಘದ 16ನೇ ವಾರ್ಷಿಕ ಮಹಾಸಭೆಯನ್ನು ಯಶಸ್ವಿಗೊಳಿಸಲು ಕಾರ್ಮಿಕರಿಗೆ ಕರೆ ನೀಡಿದರು. ಈ ಸಭೆಯಲ್ಲಿ ಶಾಂಭವಿ ಮತ್ತು ಫಾತಿಮಾ ಕಾರ್ಯದರ್ಶಿಯಾಗಿರುವ 17 ಮಂದಿಯ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ಮಾಲತಿಯವರು ಸ್ವಾಗತಿಸುತ್ತ ಸವಿತಾರವರು ವಂದಿಸಿದರು.

ಕೋಮು ಗಲಭೆಗೆ ಕಾರಣ ಕರ್ತರನ್ನು ಕೂಡಲೇ ನ್ಯಾಯಾಂಗ ತನಿಖೆ ನಡೆಸಿ ಶಿಕ್ಷಿಸಬೇಕು ನಷ್ಟಕ್ಕೊಳಗಾದವರಿಗೆ ಶೀಘ್ರ ಪರಿಹಾರ ನೀಡಬೇಕು. ಸಿಪಿಐ(ಎಂ) ಜಿಲ್ಲಾ ಸಮಿತಿ ಒತ್ತಾಯ

ಕಳೆದ ಒಂದು ವಾರದಲ್ಲಿ ಸುರತ್ಕಲ್ ಪ್ರದೇಶದಲ್ಲಿ ಉಂಟಾದ ಕೋಮು ಗಲಭೆ ಮತ್ತು ಮಂಗಳೂರು ಬಂದರು ಪ್ರದೇಶ, ಬಂಟ್ವಾಳ, ಪುತ್ತೂರು ತಾಲೂಕುಗಳ ಕೆಲವು ಪ್ರದೇಶಗಳಲ್ಲಿ ಸಂಭವಿಸಿದ ಕೋಮು ಗಲಭೆಗಳಿಂದಾಗಿ ಸುಮಾರು 8 ಜನರು ಸತ್ತು ಅನೇಕರಿಗೆ ತೀವ್ರ ಗಾಯಗಳಾಗಿ, ಕೋಟ್ಯಾಂತರ ರೂಪಾಯಿ ಆಸ್ತಿಪಾಸ್ತಿಗಳು ನಷ್ಟವಾಗಿ, ಅನೇಕ ಮನೆಗಳ ಹಾಗೂ ವ್ಯಾಪಾರ ಸಂಸ್ಥೆಗಳ ಲೂಟಿಯಾಗಿರುವ ಇಡೀ ಪ್ರಕರಣಕ್ಕೆ ಸಂಬಂಧಿಸಿ ಸರಕಾರ ತಕ್ಷಣ ನ್ಯಾಯಾಂಗ ತನಿಖೆ ನಡೆಸಲು ಆದೇಶಿಸಬೇಕೆಂದು ಸಿಪಿಐ(ಎಂ) ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿ ಸರಕಾರವನ್ನು ಒತ್ತಾಯಿಸಿದೆ.

ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದಾಗ ಕಂಡು ಬರುವ ದೃಶ್ಯ ಹಾಗೂ ನಡೆದ ಭೀಭತ್ಸ ದೌರ್ಜನ್ಯಗಳ ಬಗ್ಗೆ ಶಾಂತಿಪ್ರಿಯ ಜನರು ತಲೆತಗ್ಗಿಸಬೇಕಾಗಿದೆ. ಕೆಲವು ದುಷ್ಟ ಶಕ್ತಿಗಳು ಉದ್ದೇಶಪೂರ್ವಕವಾಗಿ ಆರಂಭಿಸಿದ ಗಲಭೆ ಪೂರ್ವಯೋಜಿತವಾಗಿರುವುದೆಂದು ಸ್ಪಷ್ಟವಾಗುತ್ತದೆ. ಒಂದೆರಡು ತಿಂಗಳಿಂದ ಸುರತ್ಕಲ್ ಪ್ರದೇಶದಲ್ಲಿ ನಡೆದ ಕೆಲವು ಘಟನೆಗಳು ಮತ್ತು ಕೋಮುವಾದಿಗಳು ನಡೆಸಿದ ದ್ವೇಷಪೂರಿತ ಪ್ರಚಾರಗಳು ಇತ್ಯಾದಿಗಳಿಗೆ ಕಾರಣಕರ್ತರಾದ ವ್ಯಕ್ತಿಗಳ ಬಗ್ಗೆ ಸಾಕಷ್ಟು ಮಾಹಿತಿ ಪೋಲೀಸಧಿಕಾರಿಗಳಿಗೆ ತಿಳಿದಿದ್ದು, ಈ ಬಗ್ಗೆ ತಕ್ಷಣ ಕಾರ್ಯಪ್ರವೃತ್ತರಾಗಬೇಕೆಂದೂ ಇಲ್ಲದಿದ್ದರೆ ಮುಂದಕ್ಕೂ ಇಂತಹ ಶಕ್ತಿಗಳಿಂದ ಶಾಂತಿಭಂಗವಾಗುವ ಅಪಾಯವಿದ್ದೇ ಇರುತ್ತದೆ. ಆದುದರಿಂದ ಯಾವ ವ್ಯಕ್ತಿಗಳೇ ಆಗಲಿ ಯಾವ ಕೋಮಿನವರೇ ಆಗಲಿ ಇಂತಹ ದುಷ್ಟ ಶಕ್ತಿಗಳನ್ನು ಪತ್ತೆಹಚ್ಚಿ ಶಿಕ್ಷೆಗೆ ಗುರಿಪಡಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಈ ಗಲಭೆಯಲ್ಲಿ ಜೀವ ಹಾಗೂ ಮನೆಮಾರು ಕಳಕೊಂಡ ಕುಟುಂಬಗಳಿಗೆ ಪುನರ್‌ವ್ಯವಸ್ಥೆ ಹಾಗೂ ಸಾಕಷ್ಟು ಪರಿಹಾರ ನೀಡಬೇಕೆಂದೂ ಅದೇ ರೀತಿ ವ್ಯಾಪಾರಿಗಳ ಅಂಗಡಿಗಳನ್ನು ಅನೇಕ ಕಡೆ ಲೂಟಿ ನಡೆಸಿ ನಾಶಪಡಿಸಲಾಗಿದ್ದು, ಈ ಬಗ್ಗೆ ಸರಿಯಾದ ತನಿಖೆ ನಡೆಸಿ ಸೂಕ್ತ ಪರಿಹಾರ ನೊಂದವರಿಗೆ ನೀಡಬೇಕೆಂದೂ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್ ಶ್ರೀಯಾನ್ ಆಗ್ರಹಿಸಿದ್ದಾರೆ. ○

ಭ್ರಷ್ಟ ಅಧಿಕಾರಿಗಳನ್ನು ಅಮಾನತು ಗೊಳಿಸಲು ಅಂಗನವಾಡಿ ನೌಕರರ ಸಂಘರ್ಷ ಸಮಿತಿ ಒತ್ತಾಯ

ಅಂಗನವಾಡಿ ಮಕ್ಕಳು ಮತ್ತು ಬಾಣಂತಿಯರಿಗೆ ಹಂಚಿಕೆಯಾಗಬೇಕಿದ್ದ ಗೋಧಿಯ ಭ್ರಷ್ಟಚಾರ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಆಗವಾನೆ ಹಾಗೂ ವಿ.ಎಸ್. ಉಗ್ರಪ್ಪ ಸಮಿತಿ ಶಿಫಾರಸ್ಸಿನಂತೆ ಅಮಾನತು ಗೊಳಿಸುವಂತೆ ಅಂಗನ ವಾಡಿ ನೌಕರರ ರಾಜ್ಯ ಸಂಘರ್ಷ ಸಮಿತಿ ಸಂಚಾಲಕಿ ಎಸ್. ವರಲಕ್ಷ್ಮಿ ಪತ್ರಿಕಾ ಗೋಷ್ಠಿಯಲ್ಲಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಬೇಡಿಕೆಗಳಿಗಾಗಿ ಈ ಹಿಂದೆ ಚಳುವಳಿ ನಡೆಸಿದ ಸಂದರ್ಭದಲ್ಲಿ ಅವರ ಗೌರವಧನ ಕಡಿತ ಗೊಳಿಸಿ ಮಾನಸಿಕ ಹಿಂಸೆಗೊಳಪಡಿಸಿದ ಅಧಿಕಾರಿಗಳು ಈಗ ಕಾರ್ಯಕರ್ತೆಯರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವುದು ಆಶ್ಚರ್ಯಕರ ಎಂದಿರುವ ಸಮಿತಿಯು ಅಧಿಕಾರಿಗಳು ನಡೆಸುವ ಮುಷ್ಕರಕ್ಕೆ ನಮ್ಮ ಸಂಘಟನೆಯ ಬೆಂಬಲವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕೋಮುವಾದಿಗಳ ಭಯೋತ್ಪಾದನೆಯಲ್ಲಿ ತತ್ತರಿಸಿದ ಸುರತ್ಕಲ್

ಮೊನ್ನೆಯ ತನಕ ಮನುಷ್ಯರಾಗಿದ್ದವರು, ನೆರೆಹೊರೆಯ ಮಿತ್ರರಾಗಿದ್ದವರು ತಾವು ಹಿಂದುಗಳು, ತಾವು ಮುಸ್ಲಿಮರು ಎಂದು ತಮ್ಮನ್ನು ಗುರುತಿಸಿಕೊಂಡು ಏಕೆ ರಕ್ಕಸರ ಭಾಷೆಯಲ್ಲಿ ಮಾತನಾಡತೊಡಗಿದ್ದಾರೆ? ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಕಾರ್ಮಿಕ ಮುಖಂಡರೂ ಆದ ಬಿ.ಮಾಧವರು ಪರಿಶೀಲಿಸುತ್ತಾರೆ.



ಬಿ.ಮಾಧವ

ಹೊಸ ವರ್ಷವನ್ನು ಸ್ವಾಗತಿಸಲು ದಕ್ಷಿಣ ಕನ್ನಡ ಜಿಲ್ಲೆಯ ಜನರು ಸಂಭ್ರಮದಿಂದ ಸಜ್ಜಾಗುತ್ತಿದ್ದಾಗ, ಡಿಸೆಂಬರ್ 29 ರಂದು ಸಿಡಿಲೆರಗಿದಂತೆ ಬಂದು ಅಪ್ಪಳಿಸಿತು ಕೋಮುವಾದಿಗಳ ಅಟ್ಟಹಾಸ! ಹೌದು, ಕೋಮುವಾದಿಗಳಿಗೆ ಹೊಸ ವರ್ಷ ಬಂದಿಲ್ಲ. ಯಾಕೆಂದರೆ ಅವರು ಕ್ರಿಸ್ತ ಶಕವನ್ನು ನಂಬುವುದಿಲ್ಲ. ಅವರಿಗೆ ಇಂದಿನ ಕಾಲಘಟ್ಟವು ಕಲಿಯುಗದ 53ನೇ ಶತಮಾನ. ಹಾಗೆಂದು ಕೆಲವೇ ತಿಂಗಳುಗಳ ಹಿಂದೆ ಇದೇ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ರಾಷ್ಟ್ರಮಟ್ಟದ ಮುಖಂಡರೊಬ್ಬರು ವ್ಯಾಖ್ಯಾನಿಸಿದ್ದರು! ಹೊಸ ವರ್ಷದ ವೇದನೆ ಅಂತಿರಲಿ, ಸುರತ್ಕಲ್‌ನ ಮುಗ್ಧ ಜನರನ್ನು ಎರಡು ವಾರಗಳ ಕಾಲ ಭಯಭೀತಗೊಳಿಸಿದ ಮಹಾಮಾರಿ ಯಾವುದು?

ಕೋಮು ಗಲಭೆಗಳಲ್ಲಿ ಒಟ್ಟು 9 ಸಾವು! ಅಂದರೇನು? ಎರಡು ಕೋಮುಗಳ ಜನರು ಪರಸ್ಪರರನ್ನು ಎದುರಿಸಿ ನಡೆದ ಘರ್ಷಣೆಗಳಲ್ಲಿ ಸಂಭವಿಸಿದ ಸಾವುಗಳು ಎಂಬುದು ಸಾಮಾನ್ಯ ಅರ್ಥ. ಆದರೆ ಅಮಾಯಕರ ಮನೆಗಳಿಗೆ ನುಗ್ಗಿ ಅಲ್ಲಿದ್ದ ಜನರನ್ನು - ವೃದ್ಧರನ್ನು ಒಳಗೊಂಡು - ಕೊಲ್ಲುವುದು ಕೋಮುಗಲಭೆಯಲ್ಲ ಅದು ನೇರವಾಗಿ ಮಾಡಿದ ಕೊಲೆ. ಸುರತ್ಕಲ್‌ನಲ್ಲಿ ನಡೆದ ಘಟನೆಗಳಲ್ಲಿ ಗಲಭೆಗಳು ಕಡಿಮೆ, ಕೊಲೆಗಳು ಹೆಚ್ಚು. ಮುಗ್ಧ ಜನರನ್ನು ಕೊಲೆ ಮಾಡುವವರು ಒಂದೋ ಫ್ಯಾಸಿಸ್ಟರು, ಇಲ್ಲವೇ ಭಯೋತ್ಪಾದಕರು. ಅವರಿಗೆ ಧರ್ಮಾಭಿಮಾನಿಗಳೆಂಬ ಮುಖವಾಡ ಬೇರೆ!

ಘಟನಾವಳಿಗಳು

ನವೆಂಬರ್ 22 ರಂದು ಸುರತ್ಕಲ್ ಪ್ರದೇಶದ ಕುಳಾಯಿಯಲ್ಲಿರುವ ಸೈಂಟ್ ಇವಾಂಜಲಿಕಲ್ ಚರ್ಚ್‌ನಲ್ಲಿ ಪ್ರಾರ್ಥನೆ ನಡೆಯುತ್ತಿದ್ದಾಗ ಸುಮಾರು ಹದಿನೈದು ಯುವಕರು ಒಮ್ಮಿಂದೊಮ್ಮೆಗೇ ಒಳನುಗ್ಗಿ, ಅಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದ ಜನರನ್ನು ಮಾರಕ ಆಯುಧಗಳಿಂದ ಅಮಾನವೀಯವಾಗಿ ಹೊಡೆದು, ಚರ್ಚನ್ನು ಹಾನಿಗೊಳಿಸಿದರು. ಕ್ರೈಸ್ತ ಬಂಧುಗಳು ಕೂಡಲೇ ದೂರು ನೀಡಿದರೂ, ಈ ಘಟನೆಯು ರಾಷ್ಟ್ರಮಟ್ಟದಲ್ಲಿ ಸುದ್ದಿಯಾದ ನಂತರವಷ್ಟೇ ಪೋಲಿಸರು ಆರೋಪಿಗಳನ್ನು ಬಂಧಿಸಿದರು.

ಡಿಸೆಂಬರ್ 7 ರಂದು ಸುರತ್ಕಲ್ಲಿನ ಗೋವಿಂದ ದಾಸ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದಾಗ ಅಲ್ಲಿಗೆ ಹೋದ ಐದಾರು ಮಂದಿ ಯುವಕರು, ಅಬ್ದುಲ್ ಖಾದರ್ ಎಂಬ ವಿದ್ಯಾರ್ಥಿಯೊಬ್ಬನನ್ನು ಅಮಾನುಷವಾಗಿ ಹೊಡೆದರು. ಆತ ಹಿಂದೂ ವಿದ್ಯಾರ್ಥಿನಿಯೋರ್ವಳ ಶಾಲು ಎಳೆದಿದ್ದಾನೆಂಬ ಕಾರಣ ನೀಡಲಾಯಿತು. ಆ ಆರೋಪವು ಸುಳ್ಳೆಂದು ಅದೇ ಕಾಲೇಜಿನ ವಿದ್ಯಾರ್ಥಿಗಳು ಮರುದಿನ ಹೇಳಿಕೆ ನೀಡಿದರು. ಈ ಘಟನೆಗೆ ಸಂಬಂಧಿಸಿ ಆರು ಮಂದಿಯನ್ನು ಪೋಲೀಸರು ಬಂಧಿಸಿದರು. ಆದರೆ ಸ್ಥಳೀಯ ಶಾಸಕರು ಸುಮಾರು ಒಂದು ಸಾವಿರ ಜನರನ್ನು ಸೇರಿಸಿ ಪೋಲೀಸ್ ಠಾಣೆಗೆ ಮುತ್ತಿಗೆ ಹಾಕಿ, ಬಂಧಿತರನ್ನು ಬಿಡುಗಡೆಗೊಳಿಸಲು ಒತ್ತಾಯಿಸಿದರು. ಪೋಲೀಸ್ ಇಲಾಖೆ ಶರಣಾಯಿತು. ಬಿಡುಗಡೆಗೊಂಡ ಯುವಕರನ್ನು ವಿಜಯ ಯಾತ್ರೆಯಲ್ಲಿ ಕೊಂಡು ಹೋಗಲಾಯಿತು.

ಡಿಸೆಂಬರ್ 27 ರಂದು ಸುರತ್ಕಲ್‌ನಲ್ಲಿ ಹಿಂದೂ ಜಾಗರಣ ವೇದಿಕೆಯುವರು ಬೃಹತ್ ಬಹಿರಂಗ ಸಭೆ ನಡೆಸಿದರು. ಅತ್ಯಂತ ಪ್ರಚೋದನಕಾರಿ ಭಾಷಣಗಳನ್ನು ಮಾಡಿದ ಈ ಸಭೆಯಲ್ಲಿ ಒಬ್ಬ ವಿಧಾನ ಪರಿಷತ್ತಿನ ಸದಸ್ಯರೂ, ಒಬ್ಬ ಧರ್ಮಗುರುಗಳೂ ಭಾಗವಹಿಸಿದ್ದರು.

ಡಿಸೆಂಬರ್ 29 ರಂದು ಮಹಾನ್ ಮಾರಣಹೋಮ ಆರಂಭವಾಯಿತು. ಮನೆ ಮನೆಗಳಿಗೆ ನುಗ್ಗಿ ಹಲ್ಲೆ, ಲೂಟಿ, ನರಸಂಹಾರ! ಎರಡೂ ಧರ್ಮಗಳ ಜನರೂ ಸತ್ತಿದ್ದಾರೆ. ಆದರೆ ದೊಡ್ಡ ಸಂಖ್ಯೆ

ಪುಟ 6 ನೋಡಿ



ಬೆಂಕಿ ಹಚ್ಚಲು ಬಂದ ಜಗದೀಶ ಕಾರಂತ

ಮಂಗಳೂರಿನ ಪತ್ರಿಕೆ 'ಪಟ್ಟಾಂಗ' 15.1.99 ರ ಸಂಚಿಕೆಯಲ್ಲಿ ಪ್ರಕಟಿಸಿದ ಈ ವರದಿಯನ್ನು ನಮ್ಮ ಓದುಗರ ಮಾಹಿತಿಗಾಗಿ ಇಲ್ಲಿ ಕೊಡುತ್ತಿದ್ದೇವೆ.

ಹಿಂದೂ ಜಾಗರಣ ವೇದಿಕೆಯ ಕರ್ನಾಟಕ ಪ್ರಾಂತ ಸಂಚಾಲಕ ಜಗದೀಶ ಕಾರಂತನ ಹೆಸರು ಕೇಳಿದ ಇಡೀ ಕೊಡಗು ಜಿಲ್ಲೆ ಒಮ್ಮೆ ಹೆಚ್ಚಿ ಬೀಳುತ್ತದೆ. ಸುಂದರ ನಾಡಾದ ಕೊಡಗಿಗೆ ಬೆಂಕಿ ಬೀಳಲು ತುಪ್ಪ ಸುರಿದ ವ್ಯಕ್ತಿಯೇ ಈ ಜಗದೀಶ. ಈಗ ಆತನ ಹೆಸರು ಕೇಳಿ ಬೆಚ್ಚಿ ಬೀಳುವ ಸರದಿ ಸುರತ್ಕಲ್‌ನ ಅಲ್ಪಸಂಖ್ಯಾತರದ್ದು. ಇಲ್ಲಿ ಅವ್ಯಾಹತವಾಗಿ ನಡೆದ ಕೋಮುಗಲಭೆಗೆ ಮೂಲ ಪ್ರಚೋದನೆ ನೀಡಿದ ವ್ಯಕ್ತಿಗಳಲ್ಲಿ ಜಗದೀಶ ಕಾರಂತನೂ ಒಬ್ಬ ಎಂಬುದನ್ನು ಸ್ಪಷ್ಟಪಡಿಸಬಹುದು.

ಡಿಸೆಂಬರ್ 24 ರಂದು ಸುರತ್ಕಲ್‌ನಲ್ಲಿ ಹಿಂದೂ ಜಾಗರಣ ವೇದಿಕೆಯವರು ನಡೆಸಿದ ಸಭೆಯನ್ನು ಹಿಂದೂಗಳ ಮೇಲಿನ ರಾಜಕೀಯ ಪ್ರೇರಿತ ಮತಾಂಧ ಅಲ್ಪ ಸಂಖ್ಯಾತರ ದೌರ್ಜನ್ಯ ಪ್ರತಿಭಟನಾ ಸಭೆ ಎಂದು ಕರೆಯಲಾಗಿತ್ತು. ಕುಳಾಯಿ ಚರ್ಚ್‌ಗೆ ನುಗ್ಗಿ ಬಡಪಾಯಿಗಳನ್ನು ಬಡಿದ ಕೃತ್ಯ ಸುರತ್ಕಲ್‌ನ ಮುಸ್ಲಿಮ್ ಹುಡುಗನಿಗೆ ಹೊಡೆದ ಘಟನೆಯನ್ನೆಲ್ಲ ಒಟ್ಟು ಸೇರಿಸಿ ಹಿಂದೂಗಳ ಮೇಲಿನ ದೌರ್ಜನ್ಯ ಎಂದು ಹೇಳುವಂತಹ ಸಾಹಸವನ್ನು ಜಗದೀಶ ಕಾರಂತ ಯಶಸ್ವಿಯಾಗಿ ಪೂರೈಸಿದರು. ಕಳೆದ ಮೂರು ತಿಂಗಳಿನಿಂದಲೂ ಕೋಮಿ ಭಾವನೆ ಕೆರಳುತ್ತಾ ಬಂದಿರುವ ಸುರತ್ಕಲ್‌ನಲ್ಲಿ ಜಗದೀಶ ಕಾರಂತನಂತಹ ವ್ಯಕ್ತಿಯ ಕಾರ್ಯಕ್ರಮ ಏರ್ಪಡಿಸಲು ಪೋಲೀಸರು ಅನುಮತಿ ನೀಡಿರುವುದು ಮತ್ತೊಂದು ಆಶ್ಚರ್ಯಕರ ಘಟನೆ. ಇದರಿಂದಲೇ ಸುರತ್ಕಲ್ ಪೋಲೀಸರು ಹೇಗೆ ನಾಮಕೇ ವಾಸ್ತೆ ಉಳಿದು ಬಿಟ್ಟಿದ್ದಾರೆ ಎಂಬ ಸತ್ಯದ ಅರಿವಾಗುತ್ತದೆ. ಅದೂ ಅಲ್ಲದೆ ತುಂಬಿದ ಸಭೆಯಲ್ಲಿ ಸುಮಾರು 200 ರಷ್ಟು ಪೊಲೀಸರ ಸಮ್ಮುಖದಲ್ಲೇ ಪೊಲೀಸು ನಾಯಿಗಳು ಎಂದು ಇಡೀ ವ್ಯವಸ್ಥೆಯನ್ನು ಜಗದೀಶ ಕಾರಂತ ಗೇಲಿ ಮಾಡಿದ್ದಾರೆಂದು ಹೇಳಲಾಗಿದೆ. ಪ್ರತಿಭಟನಾ ಸಭೆಗಿಂತ ನಾಲ್ಕು ದಿನ ಮೊದಲೇ ಸುರತ್ಕಲ್‌ನ ಮಾಜಿ ಶಾಸಕ ವಿಜಯ ಕುಮಾರ ಶೆಟ್ಟಿಯವರು ಸುರತ್ಕಲ್ ಸಬ್ ಇನ್ಸ್‌ಪೆಕ್ಟರ್‌ರನ್ನು ಸಂಪರ್ಕಿಸಿ ಇಂತಹ ಸಭೆ ನಡೆದರೆ ಕೋಮುಭಾವನೆ ಕೆರಳುತ್ತದೆಂದು ಎಚ್ಚರಿಸಿದ್ದರು. ಆದರೆ ಪೊಲೀಸರು ದಿವ್ಯ

ಪುಟ 6 ನೋಡಿ

ಕೋಮು ಸೌಹಾರ್ದತೆಗಾಗಿ ಸಿಪಿಐ(ಎಂ) ಪ್ರಯತ್ನಗಳು

ಕುಳಾಯಿ ಚರ್ಚ್‌ನ ಮೇಲೆ ದಾಳಿ ನಡೆದ ಸುದ್ದಿ ತಿಳಿದೊಡನೆ ಸಿಪಿಐ(ಎಂ) ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಕೆ.ಆರ್.ಶ್ರೀಯಾನ್ ಮತ್ತು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜೆ.ಬಾಲಕೃಷ್ಣ ಶೆಟ್ಟರು ಆ ಸ್ಥಳಕ್ಕೆ ಭೇಟಿ ನೀಡಿ ಚರ್ಚಿನ ಸಮಿತಿಯವರನ್ನು ಭೇಟಿಯಾಗಿ ಸಹಾನುಭೂತಿ ವ್ಯಕ್ತಪಡಿಸಿದರು ಹಾಗೂ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಆಡಳಿತವನ್ನು ಒತ್ತಾಯಿಸಿದರು.

ಸುರತ್ಕಲ್ ಕೋಮುಗಲಭೆಗಳ ಸಮಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಗಲಭೆ ಪೀಡಿತ ಪ್ರದೇಶಗಳಲ್ಲಿ ಜಿಲ್ಲಾಡಳಿತವು ಸಂಘಟಿಸಿದ ಪಾದ ಯಾತ್ರೆಗಳಲ್ಲಿ ಕಾಂ. ಕೆ.ಆರ್.ಶ್ರೀಯಾನ್, ಕಾಂ. ಬಿ.ಮಾಧವ, ಕಾಂ. ರಾಮಚಂದ್ರ ಉಚ್ಚಿಲ್ ಮತ್ತು ಕಾಂ. ಯಾದವಶೆಟ್ಟಿ ಭಾಗವಹಿಸಿದ್ದರು. ಮಂಗಳೂರಿನಲ್ಲಿ ಅನೇಕ ಜಾತ್ಯಾತೀತ ಸಂಘಟನೆಗಳನ್ನೊಳಗೊಂಡ ಕೋಮುವಾದ ವಿರೋಧಿ ವೇದಿಕೆಯ ನೇತೃತ್ವದಲ್ಲಿ ಜನವರಿ 30 ರಂದು ಬೃಹತ್ ಮಾನವ ಸರಪಳಿ ರಚಿಸಲಾಗುವುದು ಹಾಗೂ ಆ ನಂತರ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಲಿದೆ.

ಕೋಮುಗಲಭೆಯೆಂಬ ಕ್ಯಾನ್ಸರ್

ವಿಚಾರಶೀಲರನ್ನೆಲ್ಲಾ ಕಲಕಿಬಿಟ್ಟಿರುವ ಭೀಕರ ರೋಗದ ಬಗ್ಗೆ ಆಳವಾದ ಆತಂಕ ವ್ಯಕ್ತಪಡಿಸುತ್ತಾ "ನಿಮ್ಮ ನಿಮ್ಮ ಧರ್ಮದ ಅನುಯಾಯಿಗಳು ಒಬ್ಬರನ್ನೊಬ್ಬರನ್ನು ಕೊಲ್ಲುವುದನ್ನು ನೋಡಿ ಯಾಕೆ ಸುಮ್ಮನೆ ಕುಳಿತಿದ್ದೀರಿ, ಅವರನ್ನು ನಿಯಂತ್ರಿಸಲು ನಿಮಗೆ ಸಾಧ್ಯವಿಲ್ಲವೇ?" ಎಂದು ಪ್ರಶ್ನಿಸುತ್ತಾರೆ ಮಂಗಳೂರಿನ ಪ್ರಖ್ಯಾತ ವಿಚಾರವಾದಿಗಳಾದ ಪ್ರೊ. ನರೇಂದ್ರನಾಯಕ್.

"ಮೈ ವ ಹಿಂದೂ ನ ಮುಸಲ್ಮಾನ್ ಮುಝೆ ಜೀನೇದೋ" ಜಗಜೀತ್ ಸಿಂಗ್ ಹಾಡಿರುವ ಈ ಪಂಕ್ತಿಗಳು ಎಷ್ಟು ಹೃದಯತಟ್ಟುವಂತಹದು! ನಾನೊಬ್ಬ ವಿಚಾರವಾದಿ. ಒಂದು ಸಮಯದಲ್ಲಿ ಪಣಂಬೂರಿನಲ್ಲಿ ಮಸೀದಿ ಕಟ್ಟಲು 50 ಸೆಂಟ್ಸ್ ಸ್ಥಳವನ್ನು ಅನುದಾನ ಮಾಡುವ ಹುನ್ನಾರ ನಡೆದಾಗ ಅದರ ಬಗ್ಗೆ ತೀವ್ರವಾಗಿ ಪ್ರತಿಭಟಿಸಿದ್ದೆ. ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದೆ. ಆಗ, ಹಿಂದೂಗಳಿಗೆ ಬಹಳ ಸಂತೋಷವಾಗಿದ್ದು ಹಾಡಿಹೊಗಳಿದ್ದೇ!

ಕ್ರೈಸ್ತಶಾಲೆಗಳಲ್ಲಿ ಡೊನೇಶನ್‌ನ ಬಗ್ಗೆ ಕ್ರಿಸ್ ಪ್ಯಾಮೋಟ್ ಎಂಬ ತಥಾ ಕಥಿತ ಸಕಲ ರೋಗಗಳ ನಿವಾರಕನ ಬಗ್ಗೆ, ಪೊಟ್ಟದ ಬಗ್ಗೆ ಬರೆದಾಗ ಕ್ರೈಸ್ತರ ಕೆಂಗಣ್ಣಿಗೆ ಗುರಿಯಾಗಿದ್ದೆ.

ಭೂತದರ್ಶನ ಸುಳ್ಳು, ಭವಿಷ್ಯ ಸುಳ್ಳು, ರಾಮಜನ್ಮ ಭೂಮಿ, ಗಣಪತಿ ಹಾಲು ಕುಡಿಯುವುದು ಇತ್ಯಾದಿಗಳ ಬಗ್ಗೆ ಬರೆದಾಗ ಹಿಂದೂಗಳಲ್ಲಿ ಸ್ಥಾಪಿತ ಹಿತಾಸಕ್ತಿಗಳ ಆಕ್ರಮಣಕ್ಕೆ ಗುರಿಯಾಗಿದ್ದೆ.

ಇವತ್ತಿನ ಪರಿಸ್ಥಿತಿಯಲ್ಲಿ ಕೋಮು ದ್ವೇಷದ ಜ್ವಾಲೆ ಹತ್ತಿ ಉರಿಯುತ್ತಿರುವಾಗ ಇವೆಲ್ಲಾ ವಿಷಯಗಳು ಮತ್ತೆ ನೆನಪಿಗೆ ಬಂದುವು. ಮನುಷ್ಯ ಮನುಷ್ಯನನ್ನು ಪ್ರೀತಿಸಲು ಕಾರಣಗಳನ್ನು ಕಂಡು ಹುಡುಕಬಹುದು. ಆತ ಕೂಡ ನನ್ನಂತೆಯೇ ಮಾನವ, ನಾವು ಪ್ರೀತಿಯಿಂದಿರೋಣ, ನಮ್ಮ ಧರ್ಮ-ಮತಾನುಚರಣೆಗಳು ವೈಯಕ್ತಿಕ ವಿಷಯಗಳೆಂದು ಒಬ್ಬರೊಬ್ಬರನ್ನು ಅರ್ಥಮಾಡಿಕೊಳ್ಳಬಾರದೇ?

ಇದೇ ಮನುಷ್ಯ-ಮನುಷ್ಯನನ್ನು ದ್ವೇಷಿಸಲು ಸಾವಿರ ಕಾರಣಗಳನ್ನು ಕಂಡು ಹುಡುಕಲೂ ಕಷ್ಟವಿಲ್ಲ! ಆತನ ಗಡ್ಡ ಗಲೀಜು, ಆತನ ಮೀಸೆ ಹೀಗೆ, ಆಕೆಯ ಕುಂಕುಮ ಹೀಗೆ, ಆಕೆಯ ಬುರ್ಖಾ ಹೀಗೆ! ಇತ್ಯಾದಿಗಳನ್ನು ಬೊಟ್ಟುಮಾಡಿ ತೋರಿಸಿ ಇವುಗಳಿಗಾಗಿ ಜಗಳ ಕಾಯಲು ಕಷ್ಟವಿದೆಯೇ? ಖಂಡಿತವಾಗಿಯೂ ಇಲ್ಲ.

ದೇಶವು ಭಾರತ-ಪಾಕಿಸ್ತಾನವಾಗಿ ವಿಭಜನೆಯಾದಾಗ ರಕ್ತಪಾತ ನಡೆಯಿತು. ಕೋಟಿಗಟ್ಟಲೆ ರೂಪಾಯಿಗಳ ನಷ್ಟವಾಯಿತು. ಲಕ್ಷಾಂತರ ಮುಗ್ಧರು ಹತ್ಯೆಯಾದರು. ಹಿಂದೂ-ಮುಸಲ್ಮಾನರ ಮಧ್ಯೆ ದ್ವೇಷ ಹುಟ್ಟಿಸಲು ಬ್ರಿಟಿಷರು ನಡೆಸಿದ ಪ್ರಯತ್ನಕ್ಕೆ ಕೊನೆಗೂ ಫಲ ದೊರಕಿತು.

ಇವತ್ತು ಏನಾಗುತ್ತಿದೆ? ನಮ್ಮ ದೇಶದ ಮುಂದಿರುವ ಸಮಸ್ಯೆಗಳು ಏನು ಎಂಬುದರ ಬಗ್ಗೆ ಚಿಂತಿಸುವುದನ್ನು ಬಿಟ್ಟು ನಾವು ರಾಮಜನ್ಮಭೂಮಿ, ಬಾಬರಿ ಮಸೀದಿ, ಬಾಬಾ ಬುಡನ್‌ಗಿರಿ, ದತ್ತಾತ್ರೇಯ ಪೀಠ ಮುಂತಾದ ವಿವಾದಗಳಲ್ಲಿ ತೊಡಗಿದ್ದೇವೆ. ಇದರಿಂದಾಗಿ ಎಷ್ಟು ಆರ್ಥಿಕ ನಷ್ಟ, ಎಷ್ಟು ಮಂದಿ ಮುಗ್ಧರ ಹತ್ಯೆ ಎಂಬುದರ ಬಗ್ಗೆ ಆಲೋಚಿಸುತ್ತಿದ್ದೇವೆಯೇ? ಯಾರ ಕೈಗೊಂಬೆಗಳಾಗಿ ಮನುಷ್ಯರ ರಕ್ತದ ಒಲೆಗಳಲ್ಲಿ ಸುಟ್ಟು ಕರಕಲಾದ ಬೆಲೆಬಾಳುವ ವಸ್ತುಗಳ ಬೂದಿಯಲ್ಲಿ, ಹೆಣಗಳ ರಾಶಿಗಳ ಮೇಲೆ ನರ್ತಿಸುತ್ತಿದ್ದೇವೆ? ಗಾಳಿಸುದ್ದಿಗಳಿಗಂತೂ ಕೊನೆಯೇ ಇಲ್ಲ. ಇಂತಹ ಸುದ್ದಿಗಳನ್ನು ನಂಬುವವರಿಗೇನೂ ಕಡಿಮೆಯಿಲ್ಲ.

- ಅಲ್ಲಿ ಆ ಕೋಮಿಗೆ ಸೇರಿದ 9 ತಿಂಗಳ ಗರ್ಭಿಣಿಯನ್ನು ಬತ್ತಲೆ ಮಾಡಿ ಓಡಿಸಿದರಂತೆ!
- ಆ ಊರಿನಲ್ಲಿ ಗಂಡನನ್ನು ಕಟ್ಟಿ ಹಾಕಿ, ಆತನ ಕಣ್ಣೆದುರೇ ಹೆಂಡತಿಯ ಮೇಲೆ ಅತ್ಯಾಚಾರ ಮಾಡಿದರಂತೆ!

ಇಂತಹ ಎಷ್ಟು ಸುದ್ದಿಗಳನ್ನು ನೀವು ಕೇಳಿರಲಿಕ್ಕಿಲ್ಲ? ಗಲಾಟೆಯ ಸಮಯದಲ್ಲಿ ಇದನ್ನು ನಿಜವೆಂದು ನಂಬುವವರು ಅನ್ಯಾಯಕ್ಕೆ ಪ್ರತೀಕಾರ ಮಾಡಲು ಹೊರಡುವವರೆ! ಈ ಗಲಭೆಯಲ್ಲಿ ಮುಖ್ಯವಾಗಿ ನಡೆಯುವುದು ಸತ್ಯದ ಕೊಲೆ!

ಗಾಳಿ ಸುದ್ದಿಗಳನ್ನು ನಂಬುವ ಆತುರದಲ್ಲಿ ತಲೆಚಾಡಿಸಲಾಗಲೀ, ಆಲೋಚನೆ ಮಾಡಲಾಗಲಿ ಹೋಗುವುದೇ ಬೇಡ.

ಜನಾಂಗ-ಪಂಗಡ-ಜಾತಿ-ಮತದ ಆಧಾರದಲ್ಲಿ ಗಲಭೆಗಳು ಭಾರತದಲ್ಲಿ ಮಾತ್ರವೇ? ಖಂಡಿತವಾಗಿಯೂ ಇಲ್ಲ. ಇಸ್ರೇಲ್‌ನಲ್ಲಿ ಯಹೂದಿ-ಮುಸಲ್ಮಾನರ ಮಧ್ಯೆ, ಸರ್ಬಿಯಾ-ಕ್ರೋಶಿಯಾದಲ್ಲಿ ಕ್ರೈಸ್ತ-ಮುಸಲ್ಮಾನರ ಮಧ್ಯೆ, ಐರ್‌ಲ್ಯಾಂಡ್‌ನ ಯೇಸುಕ್ರಿಸ್ತನ ಅನುಯಾಯಿಗಳೇ ಆದ ಪ್ರೊಟೆಸ್ಟೆಂಟ್-ಕ್ಯಾಥೋಲಿಕರು, ಬೌದ್ಧ ಹಿಂದೂಗಳು, ದಲಿತ ಸವರ್ಣೀಯರು ಈ ಪಟ್ಟಿಗೆ ಅಂತ್ಯವೇ ಇಲ್ಲದಂತಿದೆ!

ದೇವನೊಬ್ಬನು ಇದ್ದರೆ ನಾನು ಆತನಲ್ಲಿ ಕೇಳುತ್ತಿದ್ದೆ - ನಿನ್ನ ಹೆಸರಿನಲ್ಲಿ ಈ ಅನ್ಯಾಯಗಳೆಲ್ಲಾ ಯಾಕೆ ನಡೆಯುತ್ತಿವೆ? ಸರ್ವಶಕ್ತನಾದ ನೀನು ಇವುಗಳನ್ನು ನಡೆಸಲು ಯಾಕೆ ಬಿಡುತ್ತಿ ಎಂದು. ಹಿಂದೂ ಮುಸಲ್ಮಾನ ಕ್ರೈಸ್ತ-ಯೆಹೂದ್ಯರ ದೇವರುಗಳು ಬೇರೆ ಬೇರೆಯಾದರೆ ನಾನು ಅವರಲ್ಲಿ ಕೇಳುತ್ತಿದ್ದೆ - ನಿಮ್ಮ ನಿಮ್ಮ ಧರ್ಮದ ಅನುಯಾಯಿಗಳು ಒಬ್ಬರೊಬ್ಬರನ್ನು ಕೊಲ್ಲುವುದನ್ನು ನೋಡಿ ಯಾಕೆ ಸುಮ್ಮನೆ ಕುಳಿತಿದ್ದೀರಿ, ಅವರನ್ನು ನಿಯಂತ್ರಿಸಲು ನಿಮಗೆ ಸಾಧ್ಯವಿಲ್ಲವೇ? ಎಂದು.

ಒಂದು ವಿಷಯ ನೆನಪಿಡಿ ದ.ಕ. ಜಿಲ್ಲೆಯ ಸಹೋದರ-ಸಹೋದರಿಯರೇ, ಮೂಲತಃವಾಗಿ ಇರುವುದು ಎರಡೇ ಜಾತಿ - ಶೋಷಕರು ಮತ್ತು ಶೋಷಿತರದ್ದು. ಶೋಷಕರೆಲ್ಲಾ ಸೇರಿ ನಮ್ಮನ್ನು ಶೋಷಿಸುತ್ತಿದ್ದಾರೆ. ಈ ಶೋಷಣೆಯ ವಿರುದ್ಧದ ಹೋರಾಟದ ದಿಕ್ಕು ತಪ್ಪಿಸಲು ಕೋಮು, ಮತ, ಭಾಷೆ, ಜನಾಂಗದ ದ್ವೇಷ ಹುಟ್ಟಿಸುತ್ತಿರುತ್ತಾರೆ ಈ ಶೋಷಕರು. ಇವರ ಕಪಿಮುಷ್ಠಿಯಿಂದ ಹೊರ ಬಂದು ನಮ್ಮ ಹೋರಾಟವನ್ನು ಮುಂದುವರಿಸೋಣ.

ಕೊನೆಯದೊಂದು ಮಾತು-ನಿಮ್ಮ ಸುತ್ತಲೂ ನೋಡಿ. ಈ ಗಲಭೆಗಳಲ್ಲಿ ಏಟು ತಿಂದವರು, ಮೃತರಾದವರು, ನಷ್ಟಕ್ಕೊಳಗಾದವರು ಯಾರೆಂಬುದನ್ನು ಸ್ಪಷ್ಟವಾಗಿ ಗಮನಿಸಿ. ಇದರಲ್ಲಿ ಉಭಯ ಕೋಮಿಗೆ ಸೇರಿದ ಹಣವಂತ ಗಣ್ಯ ವ್ಯಕ್ತಿಗಳು ಯಾರಾದರೂ ಇದ್ದಾರೆಯೇ ಎಂಬುದನ್ನು ಗಮನಿಸಿ-ಇಂತಹ ಒಬ್ಬರೂ ನಿಮಗೆ ಸಿಗಲಾರರು. ನಾನು ಈಗಾಗಲೇ ಇದನ್ನು ನೋಡಿದ್ದೇನೆ.

ಕೃಪೆ: ಪಟ್ಟಾಂಗ ಪತ್ರಿಕೆ

ಔಷಧಿ ಬೆಲೆಗಳನ್ನು ಗಗನಕ್ಕೇರಿಸಲಿದೆ

ವಾಜಪೇಯಿ ಸರಕಾರದ ಪೇಟೆಂಟ್ ತಿದ್ದುಪಡಿ ಮಸೂದೆ

ಅಮೆರಿಕನ್ ಸಾಮ್ರಾಜ್ಯಶಾಹಿಗಳನ್ನು ಸಂತುಷ್ಟಗೊಳಿಸಲು ಬಿಜೆಪಿ ನೇತೃತ್ವದ ಸರಕಾರ ಭಾರತದ ಜನಸಾಮಾನ್ಯರ ಆಹಾರವನ್ನೂ ವಂಚಿಸುತ್ತಿದೆ, ಔಷಧಿಯನ್ನೂ ವಂಚಿಸುತ್ತಿದೆ - ಅದಕ್ಕಾಗಿ ಸುಗ್ರೀವಾಜ್ಞೆಯ ಕಾರುಬಾರಿಗಿಳಿದಿದೆ. ಏಕೆಂದರೆ ಈ ಬಗ್ಗೆ ಅದು ವಿಶ್ವವ್ಯಾಪಾರ ಸಂಸ್ಥೆಗೆ ಗುಟ್ಟಿನಲ್ಲಿ ಮಾತು ಕೊಟ್ಟು ಬಿಟ್ಟಿರುವಂತಿದೆ.



'ನಮ್ಮ ಪೇಟೆಂಟ್ ಕಾನೂನು ರಾಷ್ಟ್ರೀಯ ಹಿತಾಸಕ್ತಿ ಹಾಗೂ ಅಂತರ್ರಾಷ್ಟ್ರೀಯ ಮಾನದಂಡಗಳ ಆಧಾರದಲ್ಲಿ ಜಾಗರೂಕತೆಯಿಂದ ರೂಪಿಸಿದ ಕಾನೂನು. ಇದು ನಮ್ಮ ಸಂಸದೀಯ ಬುದ್ಧಿವಂತಿಕೆಯನ್ನು ತೋರ್ಪಡಿಸಿದ ಒಂದು ಕಾನೂನು. ಅಮೆರಿಕನ್ ಹಿತಾಸಕ್ತಿಗಳನ್ನು ಸಂತುಷ್ಟಗೊಳಿಸಲು ಪೇಟೆಂಟ್ ಕಾನೂನುಗಳಲ್ಲಿ ಕೈಯಾಡಿಸುವುದು ನಮ್ಮ ಕೃಷಿ ಮತ್ತು ಕೈಗಾರಿಕೆಗಳಿಗೆ ಮಾರಕ''- ಇದು ಸರಿಯಾಗಿ 7 ವರ್ಷಗಳ ಹಿಂದೆ ಜನವರಿ 1992 ರಲ್ಲಿ 44 ಪ್ರತಿಷ್ಠಿತರು ಆಗಿನ ರಾಷ್ಟ್ರಪತಿಗಳಿಗೆ ಹಾಗೂ ಪ್ರಧಾನ ಮಂತ್ರಿಗಳಿಗೆ ಅರ್ಪಿಸಿದ ಒಂದು ಮನವಿಯ ಕೆಲವು ಸಾಲುಗಳು. 1970 ರ ಪೇಟೆಂಟ್ ಕಾನೂನಿಗೆ ತಿದ್ದುಪಡಿ ತರುವ ನರಸಿಂಹರಾವ್ ಸರಕಾರದ ಪ್ರಯತ್ನಗಳನ್ನು ಅತ್ಯಂತ ಕಳಕಳಿಯಿಂದ ವಿರೋಧಿಸಿದ ಮನವಿ.

ಈಗ ಏಳು ವರ್ಷಗಳ ನಂತರ ಆ ಮನವಿಗೆ ಸಹಿ ಹಾಕಿದ ನಾಲ್ವರು-ಅಟಲ್ ಬಿಹಾರಿ ವಾಜಪೇಯಿ, ಯಶವಂತ ಸಿನ್ಹಾ, ಮುರಳಿ ಮನೋಹರ ಜೋಷಿ ಹಾಗೂ ಎಲ್.ಕೆ.ಅಡ್ವಾಣಿ-ಅಮೆರಿಕನ್ ಹಿತಾಸಕ್ತಿಗಳನ್ನು ಸಂತುಷ್ಟ ಪಡಿಸಲು ಅದೇ ತಿದ್ದುಪಡಿಯನ್ನು ತರಲು ಸುಗ್ರೀವಾಜ್ಞೆಯ ಅಸ್ತ್ರವನ್ನು ಬಳಸುವ ಮಟ್ಟಕ್ಕೆ ಇಳಿದಿದ್ದಾರೆ. (ವಿವರಗಳಿಗೆ 'ಐಕ್ಯರಂಗ' ಡಿಸೆಂಬರ್ 14-20 ರ ಸಂಚಿಕೆ ನೋಡಿ)

ಬೇರೆ ದೇಶಗಳಲ್ಲಿ 'ಉತ್ಪನ್ನ ಪೇಟೆಂಟ್' ಪಡೆದವರಿಗೂ ತಮ್ಮ ಉತ್ಪನ್ನಗಳನ್ನು ಭಾರತದಲ್ಲಿ ಮಾರಲು ಏಕಸ್ವಾಮ್ಯವನ್ನು ನೀಡುವ ಈ ತಿದ್ದುಪಡಿ ಈಗ ನಮ್ಮ ಕೃಷಿ ಮತ್ತು ಕೈಗಾರಿಕೆಗಳಿಗೆ ಮಾರಕವಾಗಿಲ್ಲ ಎಂದು ಈ ಬಿಜೆಪಿ ನಾಯಕರುಗಳು ಹೇಳುತ್ತಾರೆಯೋ? ಇಲ್ಲ, ಖಂಡಿತಾ ಸಾಧ್ಯವಿಲ್ಲ.

ಇವು ಯಾವ ರೀತಿಯಲ್ಲಿ ಮಾರಕ? ಈ ವಿಷಯದ ತಜ್ಞ ಅಮಿತ್ ಸೇನ್ ಗುಪ್ತಾ ಮೂರು ಉದಾಹರಣೆಗಳನ್ನು ಕೊಡುತ್ತಾರೆ.

1. ಈಗ ವಿಶ್ವದಲ್ಲಿ ಕ್ಷಯರೋಗ ಮತ್ತೆ ಕಾಣಿಸಿಕೊಂಡಿದೆ - ಏಡ್ಸ್ ರೋಗಕ್ಕೆ ಸಂಬಂಧಿಸಿದ ಕ್ಷಯ ರೋಗ ಅದು. ಈ ರೋಗಕ್ಕೆ ಎಂದಿನ ಕ್ಷಯ ರೋಗ - ನಿರೋಧಕ ಔಷಧಿಗಳು ನಾಟುವುದಿಲ್ಲ, ಹೊಸ ಮಾದರಿಯ ಕ್ಷಯರೋಗ-ವಿರೋಧಿ ಔಷಧಿಗಳೇ ಬೇಕು. ಇವಕ್ಕೆಲ್ಲಾ ಪೇಟೆಂಟ್ ಇದೆ. ಭಾರತದಲ್ಲಿ ಕ್ಷಯರೋಗಿಗಳ ಸಂಖ್ಯೆ ಅತಿ ಹೆಚ್ಚು. ಇಂದೂ ಕೂಡಾ ನಮ್ಮ ದೇಶದಲ್ಲಿ 5 ಲಕ್ಷ ಜನ ಕ್ಷಯರೋಗದಿಂದ ಸಾಯುತ್ತಾರೆ. ಒಂದು ವೇಳೆ ರೋಗ ತೀವ್ರರೂಪದಲ್ಲಿ ದೇಶವನ್ನೆಲ್ಲಾ ವ್ಯಾಪಿಸಿದರೆ ಈ ರೋಗಿಗಳ ಜೀವವುಳಿಸುವ ಔಷಧಿಗಳು ಇವರ ಕೈಗೆಟುಕದಾಗುತ್ತದೆ. ಏಕೆಂದರೆ ನಾವು ಅಮೆರಿಕನ್ನರನ್ನು ಸಂತುಷ್ಟ ಪಡಿಸಲು ನಮ್ಮ ಆತ್ಮಗಳನ್ನು, ಅದಕ್ಕಿಂತಲೂ ಹೆಚ್ಚಿನದಾದ ನಮ್ಮ ಸಾರ್ವಭೌಮತೆಯನ್ನು ವಿಶ್ವ ವ್ಯಾಪಾರ ಸಂಘಟನೆಗೆ ಮಾರಹೊರಟಿದ್ದೇವೆ!

2. ಫಾಸ್ಸಿಪಾರಂ ಮಲೇರಿಯಾ ಎನ್ನುವುದು ಮಲೇರಿಯಾ ರೋಗದ ಅತ್ಯಂತ ದುಷ್ಟ ರೂಪ. ಅದು ಈಗಾಗಲೇ ದೇಶದಲ್ಲಿ ಹರಡಿದೆ. ಇವುಗಳಲ್ಲಿ ಹಲವು ವಿಧಗಳು ಮಲೇರಿಯಾದ ಔಷಧಿಯಾದ ಕ್ಲೋರೋಕ್ವಿನ್‌ಗೆ ಜಗ್ಗುವುದಿಲ್ಲ. ದೇಶದ ರಾಜಧಾನಿ ನವದೆಹಲಿಯಲ್ಲಿ ಇಂತಹ ಹಲವು ಕೇಸುಗಳು ಪತ್ತೆಯಾಗಿವೆ. ಈ ರೋಗಕ್ಕೆ ಹೊಸ ಔಷಧಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಆದರೆ ಅವೂ ಪೇಟೆಂಟ್ ಆಗಿವೆ.

3. ಕ್ಲೋರೋಫನಿಕಾಲ್ ನಾಟದ ವಿಷಮಜ್ವರ ಅಥವಾ ಟೈಫಾಯಿಡ್ ದೇಶದಲ್ಲಿ ಇಂದು ವ್ಯಾಪಕವಾಗಿದೆ. ಕೆಲವು ಅಧ್ಯಯನಗಳ ಪ್ರಕಾರ ಕೆಲವು ಪ್ರದೇಶಗಳಲ್ಲಿ ಕಂಡಬರುವ ವಿಷಮ ಜ್ವರದಲ್ಲಿ 40-50 ಶೇಕಡಾ ಈ ರೀತಿಯದ್ದು. ಇದಕ್ಕೆ ಒಂದು ಔಷಧಿಯನ್ನು ಅಭಿವೃದ್ಧಿ ಪಡಿಸಲಾಗಿದೆ. - ಸಿಪ್ರೋ ಫ್ಲೋಕ್ಸಾಸಿನ್ - ಆದರೆ ಇದಕ್ಕೂ ಪೇಟೆಂಟ್ 'ರಕ್ಷಣೆ' ಯಿದೆ. ಆದರೆ ಭಾರತದಲ್ಲಿ ಇದನ್ನು ಬೇರೊಂದು ಪ್ರಕ್ರಿಯೆಯಿಂದ ತಯಾರಿಸಲು ಸಾಧ್ಯವಾದದ್ದರಿಂದ ಭಾರತೀಯ ಪೇಟೆಂಟ್ ಕಾನೂನಿನ ರಕ್ಷಣೆಯಿಂದಾಗಿ ಒಂದು ಮಾತ್ರೆಗೆ 24 ರೂ. ಇದ್ದ ಬೆಲೆ 8 ರೂ.ಗಿಳಿಯಿತು. ಆದರೆ ಈಗ ಬಿಜೆಪಿ ಸರಕಾರ ತರಬಯಸುತ್ತಿರುವ ತಿದ್ದುಪಡಿಯಿಂದ ಇನ್ನು ಮುಂದೆ ಇದು ಸಾಧ್ಯವಾಗುವುದಿಲ್ಲ.

ಮತ್ತೆ 1970 ರ ಮೊದಲಿನ ಸ್ಥಿತಿ

1970 ರ ಭಾರತೀಯ ಪೇಟೆಂಟ್ ಕಾನೂನಿನ ಮುಖ್ಯ ಅಂಶವೆಂದರೆ ಔಷಧಿ, ಆಹಾರ ಮತ್ತು ರಾಸಾಯನಿಕ ಕ್ಷೇತ್ರಗಳಲ್ಲಿ ಯಾವುದೇ 'ಉತ್ಪನ್ನದ ಪೇಟೆಂಟ್' ಗೆ ಅವಕಾಶವಿಲ್ಲ. ಒಂದು ಉತ್ಪನ್ನವನ್ನು ಉದಾ : ಒಂದು ನಿರ್ದಿಷ್ಟ ಔಷಧಿಯನ್ನು ಬೇರೊಂದು ಪ್ರಕ್ರಿಯೆ ಅಥವಾ ವಿಧಾನ ಬಳಸಿ ತಯಾರಿಸಬಹುದು, ಆದರೆ ಈ ವಿಧಾನವನ್ನು ಮಾತ್ರ ಬೇರೆಯವರು ಬಳಸುವಂತಿಲ್ಲ. ಇದನ್ನು 'ಪ್ರಕ್ರಿಯೆ ಪೇಟೆಂಟ್' ಅನ್ನುತ್ತಾರೆ.

ಭಾರತೀಯ ಔಷಧಿ ಉದ್ದಿಮೆ ಈ ಕಾನೂನಿನ ರಕ್ಷಣೆಯಿಂದಾಗಿ ವ್ಯಾಪಕವಾಗಿ ಉಪಯೋಗವಾಗುವ ಸುಮಾರಾಗಿ ಎಲ್ಲಾ ಔಷಧಿಗಳನ್ನು ಇಲ್ಲಿಯೇ ಸಂಶೋಧಿಸಿದ ತಂತ್ರಜ್ಞಾನ ಬಳಸಿ ತಯಾರಿಸುವ ಸಾಮರ್ಥ್ಯವನ್ನು ಬೆಳೆಸಿಕೊಂಡಿದೆ. ಇದರಲ್ಲಿ ವಿವಿಧ ಸಿ.ಎಸ್.ಐ.ಆರ್.(ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ) ನ ಪ್ರಯೋಗಾಲಯಗಳು ದೊಡ್ಡ ಪಾತ್ರ ವಹಿಸಿವೆ.

1970 ರಲ್ಲಿ ಭಾರತೀಯ ಪೇಟೆಂಟ್ ಕಾನೂನು ರೂಪಿಸುವ ಮೊದಲು ಭಾರತೀಯ ಔಷಧಿ ಮಾರುಕಟ್ಟೆ ಬಹುರಾಷ್ಟ್ರೀಯ ಕಂಪನಿಗಳ ಕಪಿಮುಷ್ಟಿಯಲ್ಲಿತ್ತು. ಭಾರತದಲ್ಲಿ ಔಷಧಿಗಳ ಬೆಲೆ ವಿಶ್ವದಲ್ಲೇ ಅತೀ ಹೆಚ್ಚಿತ್ತು. ಸಾರ್ವಜನಿಕ ವಲಯದಲ್ಲಿ ಹಿಂದೂಸ್ತಾನ್ ಆಂಟಿ ಬಯೋಟಿಕ್ಸ್ ಹಾಗೂ ಐ.ಡಿ.ಪಿ.ಎಲ್. ಕಂಪನಿಗಳನ್ನು ಆರಂಭಿಸಿ ಪರಿಸ್ಥಿತಿಯನ್ನು ಕ್ರಮೇಣ ಹತೋಟಿಗೆ ತರಲಾಯಿತು. ಆದರೆ ಉದಾರೀಕರಣದಡಿಯಲ್ಲಿ ಈ ಎರಡೂ ಉದ್ದಿಮೆಗಳು ಈಗ ಸೊರಗಿ ಹೋಗಿವೆ. ಪೇಟೆಂಟ್ ಕಾನೂನಿನ ತಿದ್ದುಪಡಿಯೊಂದಿಗೆ ಇನ್ನೂ ಇರುವ ರಕ್ಷಣೆ ಕೂಡಾ ಮಾಯವಾಗುತ್ತದೆ.

ಈಗಾಗಲೇ ಬಹುರಾಷ್ಟ್ರೀಯ ಔಷಧಿ ಕಂಪನಿಗಳು - ಸೀಬಾಗೈಗಿ, ಬೂಟ್ಸ್, ಹೆಕ್ಸ್ಟ ಮತ್ತು ರ್‍ಹೋನ್ ಪೌಲೆಂಕ್ - ಪೇಟೆಂಟ್ ಕಾನೂನು ತಿದ್ದುಪಡಿಯಾಗುವ ನಿರೀಕ್ಷೆಯಿಂದ ಭಾರತದಲ್ಲಿನ ತಮ್ಮ ಸಂಶೋಧನಾ - ಅಭಿವೃದ್ಧಿ ಘಟಕಗಳನ್ನು ಮುಚ್ಚಿವೆ. ಸರ್ವ ಬಳಕೆಯ ಔಷಧಿಗಳನ್ನು ತಯಾರಿಸುವ ಕಂಪನಿಗಳು ಭಾರತದಲ್ಲಿ ಅವುಗಳ ತಯಾರಿಕೆಯನ್ನು ನಿಲ್ಲಿಸಿವೆ. ಅವನ್ನು ವಿದೇಶಗಳಿಂದ ನೇರವಾಗಿ ಆಮದು ಮಾಡಿ ಮನಬಂದ ಬೆಲೆಗೆ ಮಾರುವುದೇ ಈ ಕಂಪನಿಗಳಿಗೆ ಲಾಭದಾಯಕವೆನಿಸುತ್ತದೆ. ಕ್ರಮೇಣ ಭಾರತೀಯ ಔಷಧಿ ಉದ್ದಿಮೆಯಲ್ಲಿ ವಿದೇಶಿ ಬಹುರಾಷ್ಟ್ರೀಯ ಔಷಧಿ ಕಂಪನಿಗಳದ್ದೇ ರಾಜ್ಯಭಾರವಾಗಿ ಬಿಡುತ್ತದೆ. 1970 ರ ಮೊದಲಿದ್ದಂತೆ ಅವರು ಹೇಳಿದ 'ಭಾರೀ ಬೆಲೆಗಳನ್ನೇ' ತೆತ್ತು ಔಷಧಿ ಪಡೆಯಬೇಕಾಗುತ್ತದೆ. ಸಾರ್ವಜನಿಕ ಆರೋಗ್ಯದ ಮೇಲೆ ಇದರ ದುಷ್ಪರಿಣಾಮಗಳು ಏನೆಂದು ಯಾರಾದರೂ ಊಹಿಸಿಕೊಳ್ಳಬಹುದು.

ಕೃಷಿ ವಲಯದಲ್ಲೂ

ಕೃಷಿ ವಲಯದಲ್ಲಿ ಬಳಸುವ ಕೀಟನಾಶಕಗಳ ಬೆಲೆಗಳ ಕತೆಯೂ ಇದೇ. ಅಷ್ಟೇ ಅಲ್ಲ, ಪೇಟೆಂಟ್ ವ್ಯವಸ್ಥೆ ಬೇರೆ ರೀತಿಯಲ್ಲೂ ನಮ್ಮ ಕೃಷಿ ಮತ್ತು ಆಹಾರ ಉತ್ಪಾದನೆಯ ಮೇಲೆ ವಿನಾಶಕಾರಿ ಪರಿಣಾಮ ಬೀರಲಿದೆ ಎನ್ನುತ್ತಾರೆ ಪಿ.ಕೆ.ಗಂಗೂಲಿಯವರು. ಸಾವಿರಾರು ವರ್ಷಗಳಿಂದ ರೈತರು ತಮ್ಮದೇ ಬೀಜ ಉತ್ಪಾದಿಸಿ, ಅದನ್ನು ಸಂಗ್ರಹಿಸಿಟ್ಟು, ಮತ್ತೆ ಬಿತ್ತಿ ನಿಸರ್ಗ ತಾನಾಗಿಯೇ ಹೊಸ ಬೀಜ ಉತ್ಪಾದಿಸುವಂತಾಗಿದೆ. ಆದರೆ ಅಮೆರಿಕನ್ ಕಂಪನಿಯೊಂದು ಅಭಿವೃದ್ಧಿ ಪಡಿಸಿದ ಬೀಜಾಂತಕ ತಂತ್ರಜ್ಞಾನದಿಂದಾಗಿ ಮುಂದೆ ರೈತರು ಈ ತಂತ್ರಜ್ಞಾನದ ಪೇಟೆಂಟ್ ಪಡೆದಾತ ಕೇಳುವ ಬೆಲೆಗಳನ್ನು ತೆತ್ತು ಬೀಜಗಳನ್ನು ಪಡೆಯಬೇಕಾಗಬಹುದು. ಮೂರನೇ ಜಗತ್ತಿನ ಈ ಸಂಪನ್ಮೂಲ ವಿದೇಶಿಯರ ಪಾಲಾಗಬಹುದು ಎನ್ನುತಾರೆ ಅವರು.

ಇದರ ಇನ್ನೊಂದು ಪರಿಣಾಮವೆಂದರೆ ನಾವು ಸ್ವಾವಲಂಬೀ ಬೆಳವಣಿಗೆಗಾಗಿ ಬೆವರು ಹರಿಸಿ ರೂಪಿಸಿದ ರಾಷ್ಟ್ರೀಯ ಪ್ರಯೋಗಾಲಯ ಗಳನ್ನು, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ, (ICMR), ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (CSIR), ರಾಷ್ಟ್ರೀಯ ರಾಸಾಯನಿಕ ಪ್ರಯೋಗಾಲಯ(NCL), ಭಾರತೀಯ ಕೃಷಿ ಸಂಶೋಧನಾ ಮಂಡಳಿ (ICAR) ಇವನ್ನೆಲ್ಲಾ ಮುಚ್ಚಬೇಕಾದ ಪರಿಸ್ಥಿತಿ ಬರುವುದು. ಇವೀಗ ರಾಷ್ಟ್ರಪ್ರೇಮದ ಬಡಾಯಿ ಕೊಚ್ಚುವ, ಸ್ವದೇಶಿಯ ಒಣಮಂತ್ರ ಜಪಿಸುವ ಬಿಜೆಪಿ ಸರಕಾರದ ಸುಗ್ರೀವಾಜ್ಞೆ ಕಾರುಬಾರಿನ ಫಲ!

○

"ಸಂಸತ್ತು ಎಂದೂ ಇದಕ್ಕೆ ಅವಕಾಶ ನೀಡಬಾರದು"

ಎಂದಿದೆ ಬೌದ್ಧಿಕ ಆಸ್ತಿ ಹಕ್ಕುಗಳ ಜನತಾ ಆಯೋಗ. ಇ.ಎಂ.ಆರ್. ಹಕ್ಕು ನೀಡುವುದೆಂದರೆ ಗುತ್ತೆದಾರಿಕೆಯಿಂದ ದುಬಾರಿ ಔಷಧಿ ಬೆಲೆಗಳಿಗೆ ಹಾಗೂ ನಮ್ಮ ಔಷಧಿ ಉದ್ದಿಮೆಗಳ ನಾಶದಿಂದ ನಿರುದ್ಯೋಗಕ್ಕೆ ಅವಕಾಶ ನೀಡಿದಂತೆಯೇ ಎಂದಿದೆ ಈ ಆಯೋಗ.

'ರಾಷ್ಟ್ರೀಯ ಪೇಟೆಂಟ್ ಕಾನೂನು ಕಾರ್ಯ ತಂಡ' ಸರಕಾರ ಪೇಟೆಂಟ್ ಕಾನೂನುಗಳ, ಬೌದ್ಧಿಕ ಆಸ್ತಿಕ ಹಕ್ಕುಗಳ ಬಗ್ಗೆ ಪರೀಕ್ಷಿಸಲು ಒಂದು ರಾಷ್ಟ್ರೀಯ ಆಯೋಗ ರಚಿಸಬೇಕೆಂದು ಮತ್ತೆ-ಮತ್ತೆ ಒತ್ತಾಯಿಸಿತ್ತು. ಆದರೆ ಈ ಸರಕಾರಕ್ಕೆ ಮತಾಂತರದ ಹೆಸರಲ್ಲಿ ಜನಗಳ ನೆಮ್ಮದಿಗೆಡಿಸುವ ವಿಧಾನಗಳ ಬಗ್ಗೆ ರಾಷ್ಟ್ರೀಯ ಚರ್ಚೆ ಬೇಕಾಗಿದೆಯೇ ಹೊರತು ಇಡೀ ದೇಶವನ್ನು ಸಾಮ್ರಾಜ್ಯ ಶಾಹಿಗಳ ಕಾಲ ಬಳಿ ಕೆಡಹುವ ಒಂದು ವಿಚಾರದ ಬಗ್ಗೆ ರಾಷ್ಟ್ರೀಯ ಚರ್ಚೆ ಬೇಕಿಲ್ಲ. ಅದನ್ನು ತಪ್ಪಿಸಲು ತಾನೇ ಹಿಂದೆ ವಿರೋಧಿಸಿದ್ದ ಸುಗ್ರೀವಾಜ್ಞೆ ಕಾರುಬಾರಿಗೆ ಈಗ ಮೊರೆಹೋಗಿದೆ. ಸರಕಾರದ ಈ ಸಾಮ್ರಾಜ್ಯಶಾಹಿ ಬಾಲಬಡುಕತನವನ್ನು ಈ ಮೊದಲೇ ಅರಿತು **ರಾಷ್ಟ್ರೀಯ ಕಾರ್ಯತಂಡ** ತಾನೇ ಒಂದು ಆಯೋಗ ನೇಮಿಸಿತು - ಅಕ್ಟೋಬರ್ 22, 1998 ರಲ್ಲಿ. ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿದ್ದ ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್, ಪ್ರಖ್ಯಾತ ವಿಜ್ಞಾನಿ ಹಾಗೂ ಹಿಂದೆ ಯು.ಜಿ.ಸಿ. ಯ ಅಧ್ಯಕ್ಷರಾಗಿದ್ದ ಪ್ರೊ. ಯಶಪಾಲ್, ಜವಾಹರ ಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರೊ. ಪ್ರಭಾತ್ ಪಟ್ನಾಯಕ್ ಹಾಗೂ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಜಲ ತಂತ್ರಜ್ಞಾನ ಕೇಂದ್ರದ ಎಸ್.ಕೆ.ಸಿನ್ಹಾ ಈ ಆಯೋಗದ ಸದಸ್ಯರು. ಜನತಾ ಆಯೋಗಕ್ಕೆ ಈ ಬೌದ್ಧಿಕ ಆಸ್ತಿಕ ಹಕ್ಕುಗಳ ಪೇಟೆಂಟ್ ಕಾನೂನುಗಳ ಕುರಿತಂತೆ ಮೊದಲ ವರದಿಯನ್ನು ಬೇಗನೇ ಸಲ್ಲಿಸಬೇಕು ಎಂದು ಹೇಳಿದ್ದರಿಂದ ಡಿಸೆಂಬರ್ 8 ರಂದು ಅಂತಹ ಒಂದು ವರದಿಯನ್ನು ಸಲ್ಲಿಸಿದೆ. ಈಗ ಬಿಜೆಪಿ ಸರಕಾರ ಒಂದು ಸುಗ್ರೀವಾಜ್ಞೆಯ ಮೂಲಕ ವಿದೇಶಿ ಪೇಟೆಂಟ್‌ಧಾರಕ ಮಾತ್ರವೇ ಭಾರತದಲ್ಲಿ ತಮ್ಮ ಉತ್ಪಾದನೆಗಳನ್ನು ಮಾರಬೇಕು, ಇತರ ಯಾರೂ ಮಾರುವಂತಿಲ್ಲ ಎನ್ನುವ (EMR) ಅವಕಾಶ ನೀಡಲು ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಈ ಜನತಾ ಆಯೋಗ ಈ ಇ.ಎಂ.ಎರ್. ಬಗ್ಗೆ ಏನು ಹೇಳಿದೆ ನೋಡೋಣ.

"ಒಂದು ಇ.ಎಂ.ಆರ್ ವ್ಯವಸ್ಥೆಯೆಂದರೆ ಅತ್ಯಂತ ಕೆಟ್ಟ ಸ್ವರೂಪದ ಗುತ್ತೇದಾರಿಕೆಗೆ ಒಂದು ಸ್ಪಷ್ಟ ರೂಪಕೊಟ್ಟಂತೆ. ಏನೇ ಆಗಲಿ, ಇದನ್ನು ತಪ್ಪಿಸಬೇಕು. ಮೊದಲನೆಯದಾಗಿ, ಒಬ್ಬ ಇ.ಎಂ.ಆರ್. ಹಕ್ಕು ಪಡೆದಾತ ತನ್ನ ಉತ್ಪನ್ನವನ್ನು ಈ ದೇಶದಲ್ಲೇ ಉತ್ಪಾದಿಸಬೇಕಾಗಿಲ್ಲ, ಅಥವಾ ಆ ಉತ್ಪನ್ನವನ್ನು ದೇಶಿ ಉತ್ಪಾದಕರು ಯಾರೂ ಉತ್ಪಾದಿಸು ವಂತಿಲ್ಲ. ಅಂದರೆ ಒಬ್ಬ ಇ.ಎಂ.ಆರ್. ಹೊಂದಿದವನಿಗೆ ಆತ ದೇಶಕ್ಕೆ ತರುವ ಆಮದಿನ ಆಧಾರದ ಮೇಲಷ್ಟೇ ಇಡೀ ದೇಶಿ ಮಾರುಕಟ್ಟೆಯ ಮೇಲೆ ಗುತ್ತೇದಾರಿಕೆ ಹೊಂದುವ ಹಕ್ಕು ನೀಡಲಾಗುತ್ತದೆ. ನಿಜ, ಇದು ಆತ ಬೇರೆಲ್ಲೋ ಪೇಟೆಂಟ್ ಮಾಡಿರುವ ಉತ್ಪನ್ನವಿರಬಹುದು. ಆದರೆ ಒಂದು ಬಹುರಾಷ್ಟ್ರೀಯ ಕಂಪನಿ ತನ್ನ ಅಪಾರ ಹಣಕಾಸು ಸಾಮರ್ಥ್ಯದಿಂದ ಇತರರೆಲ್ಲರಿಗಿಂತ ತೀವ್ರವಾದ ಮಾರುಕಟ್ಟೆ ತಂತ್ರ ಬಳಸುವ ಮೂಲಕ ಇಂತಹುದೇ ಉತ್ಪನ್ನಗಳನ್ನು ತಯಾರಿಸುವ ದೇಶೀ ಉತ್ಪಾದಕರ ಮಾರುಕಟ್ಟೆಯನ್ನು ಕಿತ್ತುಕೊಳ್ಳಲು ಸಾಧ್ಯವಾಗುತ್ತದೆ.

ಅಂದರೆ ಇ.ಎಂ.ಆರ್. ವ್ಯವಸ್ಥೆ ಗುತ್ತೇದಾರಿಕೆಗೆ ಒಂದು ಸ್ಪಷ್ಟ ರೂಪ ಕೊಟ್ಟು ಬಿಡುತ್ತದಷ್ಟೇ ಇಲ್ಲ, ನಮ್ಮ ಉದ್ದಿಮೆಗಳ ನಾಶವನ್ನು ಮಾಡುತ್ತದೆ. ಅರ್ಥಾತ್ ನಮ್ಮ ಉತ್ಪನ್ನಗಳನ್ನು ಮೂಲೆಗೆ ತಳ್ಳಿ ಆಮದಿಗೆ ಅವಕಾಶ ನೀಡುತ್ತದೆ. ಇದರ ಫಲವೆಂದರೆ ಗುತ್ತೇದಾರಿಕೆಯಿಂದ ದುಬಾರಿ ಬೆಲೆಗಳು ಹಾಗೂ 'ಉದ್ದಿಮೆಗಳ ನಾಶದಿಂದ ಉದ್ಯೋಗವಕಾಶದಲ್ಲಿ ಕಡಿತ.

ಔಷಧಿ ಉದ್ದಿಮೆ ಒಂದು ರೀತಿಯಲ್ಲಿ ವಿಶಿಷ್ಟ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಇಲ್ಲಿ ಬಳಕೆದಾರರು ತಮಗೆ ಬೇಕಾದುದನ್ನು ಆರಿಸಿಕೊಳ್ಳುವಂತಿಲ್ಲ. ಡಾಕ್ಟರರು ಸೂಚಿಸಿದ ಔಷಧಿಯನ್ನೇ ಕೊಳ್ಳಬೇಕು. ಯಾವುದರ ಬೆಲೆ ಕಮ್ಮಿ ಎಂದು ನೋಡಿಕೊಂಡು ಕೊಳ್ಳುವಂತಿಲ್ಲ. ಬೇರೆ ವಲಯದಲ್ಲಿ ಹೆಚ್ಚು ಬೆಲೆಯ ಸರಕುಗಳನ್ನು ಜನಕೊಳ್ಳದೆ ಪ್ರತಿರೋಧ ತೋರಿಸಬಹುದು. ಔಷಧಿ ವಲಯದಲ್ಲಿ ಹಾಗಾಗುವುದಿಲ್ಲ. ವೈದ್ಯಕೀಯ ವೃತ್ತಿಯವರು ಒಂದು ನಿರ್ದಿಷ್ಟ ಔಷಧಿಯನ್ನೇ ಸೂಚಿಸುವಂತೆ ಮಾಡುವ ಮೂಲಕ ಆ ಔಷಧಿಗೆ ದುಬಾರಿ ಬೆಲೆ ಕೇಳಲು ಸಾಧ್ಯ. ಈ ಇ.ಎಂ.ಆರ್. ಅಥವಾ ವಿಶಿಷ್ಟ ಮಾರಾಟ ಹಕ್ಕು ಪಡೆದಿರುವ ಕಂಪನಿಯ ವಿರುದ್ಧ ಔಷಧಿ ಬೆಲೆ ಹತೋಟಿ ವ್ಯವಸ್ಥೆ ಏನೂ ಮಾಡಲಾರದು............ ಇಷ್ಟೇ ಅಲ್ಲ, ಇಂತಹ ಕಂಪನಿಗೆ ಇಂತಹ ಗುತ್ತೇದಾರಿ ಹಕ್ಕು ಪಡೆಯುವ ಅರ್ಹತೆ ಇದೆಯೇ ಎಂದು ಪರಿಶೀಲಿಸುವ ಹಕ್ಕು ಕೂಡಾ ದೇಶಕ್ಕಿಲ್ಲ. ಟ್ರಿಪ್ಸ್‌ನ ಇ.ಎಂ.ಆರ್. ವ್ಯವಸ್ಥೆಯ ಪ್ರಕಾರ 'ವಿಶ್ವ ವ್ಯಾಪಾರ ಸಂಸ್ಥೆ' ಯ ನೂರು ಚಿಲ್ಲರೆ ಸದಸ್ಯ ದೇಶಗಳಲ್ಲಿ ಯಾವುದೇ ದೇಶದಲ್ಲಿ ಆ ಕಂಪನಿ ತನ್ನ ಉತ್ಪನ್ನವನ್ನು ಪೇಟೆಂಟ್ ಮಾಡಿದ್ದರೆ ಹಾಗೂ ಮಾರಾಟದ ಅನುಮತಿ ಪಡೆದಿದ್ದರೆ ನಮ್ಮ ದೇಶದಲ್ಲಿ ಅದಕ್ಕೆ ತಂತಾನೇ ಈ ಹಕ್ಕು ದೊರೆಯುತ್ತದೆ. ಈ ಬಗ್ಗೆ ಪರೀಕ್ಷೆ ಮಾಡುವಂತಿಲ್ಲ, ಪ್ರಶ್ನೆ ಕೇಳುವಂತಿಲ್ಲ, ಮಿತಿ ಹಾಕುವಂತಿಲ್ಲ, ಶರತ್ತು ಹಾಕುವಂತಿಲ್ಲ, ಇ.ಎಂ.ಆರ್. ಪಡೆದ ಕಂಪನಿಯ ದೇಶದಲ್ಲಿನ ಅಳತೆಗೋಲನ್ನೂ ಬಳಸುವಂತಿಲ್ಲ. .... ಆದರಿಂದ ಈ ಆಯೋಗ ಚರ್ಚಿಸಿ ರೂಪಿಸಿದ ಅಭಿಪ್ರಾಯದ ಪ್ರಕಾರ ಸಂಸತ್ತು ಎಂದೂ ಈ ವಿಶಿಷ್ಟ ಮಾರಾಟ ಹಕ್ಕ (EMR) ನ್ನು ನೀಡಬಾರದು. ಈ ಹಕ್ಕು ಕೇವಲ ಐದು ವರ್ಷಗಳ ಪೇಟೆಂಟ್ ಮಾತ್ರವೇ ಅಲ್ಲ. ಅದು ಯಾವುದೇ ಪರಿಶೀಲನೆಯಿಲ್ಲದೆ, ಬಹಳ ಸಂದೇಹಾಸ್ಪದ ಆಧಾರದಲ್ಲಿ ಒಬ್ಬ ಆಮದುಗಾರನಿಗೆ ದೇಶೀ ಮಾರುಕಟ್ಟೆಯ ಮೇಲೆ ಕೊಡುವ ಒಂದು ಗುತ್ತೇದಾರಿಕೆ. ಇದರಿಂದಾಗಿ ಹೆಚ್ಚಿನ ಅಭಿವೃಶೀಲ ದೇಶಗಳು ಈ ಇ.ಎಂ.ಆರ್. ಅಂಶಗಳನ್ನು ಜಾರಿಗೊಳಿಸದಿರುವ ದಾರಿ ಆರಿಸಿ ಕೊಂಡಿವೆ. ಇದುವರೆಗೆ ಈ ಇ.ಎಂ.ಆರ್. ವ್ಯವಸ್ಥೆಯನ್ನು ಇದುವರೆಗೆ ಆರಂಭಿಸಿದ ದೇಶಗಳೆಂದರೆ ಪಾಕಿಸ್ತಾನ ಮತ್ತು ಇತರ ಎರಡು ಚಿಕ್ಕ ದೇಶಗಳು ಮಾತ್ರ.

ಬಿಜೆಪಿ ನೇತೃತ್ವದ ಸರಕಾರ ಭಾರತದಂತಹ ದೊಡ್ಡ ದೇಶವನ್ನು ಈ ದೇಶಗಳ ಸಾಲಿಗೆ ಸೇರಿಸುವ ನಾಚಿಕೆಗೇಡಿ ತರಾತುರಿಯಲ್ಲಿದೇ ಅಲ್ಲವೇ?

ಅಂಜನಾಮಿಶ್ರ ಸಾಮೂಹಿಕ ಅತ್ಯಾಚಾರ ಪ್ರಕರಣ
ಸಿಬಿಐ ತನಿಖೆಗೆ ಎಐಡಿಡಬ್ಲ್ಯುಎ ಆಗ್ರಹ

ಒರಿಸ್ಸಾದಲ್ಲಿ ಮಾಜಿ ಅಕೌಂಟೆಂಟ್ ಜನರಲ್ ಹಾಗೂ ಮುಖ್ಯಮಂತ್ರಿ ಬೆಂಬಲಿತ ಕಿಡಿಗೇಡಿಗಳು ಶ್ರೀಮತಿ ಅಂಜನಾ ಮಿಶ್ರಾರವರ ಮೇಲೆ ಜನವರಿ 9-10 ರಂದು ಸಾಮೂಹಿಕ ಅತ್ಯಾಚಾರ ನಡೆಸಿದ್ದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ಈ ಮಾಜಿ ಅಕೌಟೆಂಟ್ ಜನರಲ್ ಸ್ವತಃ ಒಬ್ಬ ಆರೋಪಿಯಾಗಿ ನ್ಯಾಯಾಲಯದಲ್ಲಿ ಒಂದು ವಿಚಾರಣೆ ಎದುರಿಸುತ್ತಿದ್ದಾನೆ,

ಅಂಜನಾ ಮಿಶ್ರಾರವರು ರಾಜಧಾನಿ ಭುವನೇಶ್ವರದಿಂದ ಕಟಕ್ ಕಡೆಗೆ ಹೊರಟಿದ್ದಾಗ ಆಕೆಯ ಕಾರನ್ನು ಅಡ್ಡಗಟ್ಟಿ ಆಕೆಯ ಜತೆಗಿದ್ದವರನ್ನು ಬಂದೂಕಿನಿಂದ ಬೆದರಿಸಿ 5 ಗಂಟೆಗಳ ಕಾಲ ಈ ಹೀನಕೃತ್ಯ ನಡೆಸಲಾಗಿದೆ. ಅಂಜನಾರವರು ಪೋಲೀಸರಿಂದ ಈ ಪ್ರಯಾಣಕ್ಕೆ ರಕ್ಷಣೆ ಕೇಳಿದ್ದರೂ ಕೊಟ್ಟಿರಲಿಲ್ಲ. ಈ ಅಪರಾಧಿಗಳು ಆಕೆ ಮುಖ್ಯಮಂತ್ರಿ ಹಾಗೂ ಮಾಜಿ ಅಕೌಟೆಂಟ್ ಜನರಲ್ ವಿರುದ್ಧ ತಮ್ಮ ದೃಢ ನಿಲುವನ್ನು ಬದಲಿಸಬೇಕು ಎಂದೂ ಬೆದರಿಸಿದರು.

ಪೋಲೀಸರು ಹಾಗೂ ಮುಖ್ಯಮಂತ್ರಿಗಳು ಮಾಜಿ ಅಕೌಟೆಂಟ್ ಜನರಲ್ ಇಂದ್ರಜಿತ್ ರಾಯ್‌ನನ್ನು ರಕ್ಷಿಸಲು ಪಿತೂರಿ ನಡೆಸಿದ್ದಾರೆಂಬುದು ಸ್ಪಷ್ಟ ಎಂದಿರುವ ಎಐಡಿಡಬ್ಲ್ಯುಎ ಈ ಕ್ರಿಮಿನಲ್‌ಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು, ಅಂಜನಾ ಮಿಶ್ರಾರವರಿಗೆ ಪೂರ್ಣ ರಕ್ಷಣೆ ನೀಡಬೇಕು ಹಾಗೂ ಈ ಘಟನೆಯ ಸಿಬಿಐ ತನಿಖೆ ನಡೆಸಬೇಕು ಎಂದು ಆಗ್ರಹಪಡಿಸಿದೆ.

ದೇಶದೊಳಗೆ

ರಾಜ್ಯಾದ್ಯಂತ ಪ್ರತಿಭಟನೆ

ಅಂಜನಾ ಮಿಶ್ರರವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ ಸುದ್ದಿ ಭುವನೇಶ್ವರ ಹಾಗೂ ಕಟಕ್ ತಲುಪಿದ್ದಂತೆ ಪ್ರತಿಭಟನೆಯ ದನಿಗಳೂ ಕೇಳಿಬಂದವು. ಇದು ಜನವರಿ 13 ರಂದು ರಾಜ್ಯವ್ಯಾಪಿ ಬಂದ್ ವರೆಗೂ ತಲುಪಿತು. ಸಿಪಿಐ (ಎಂ), ಸಿಪಿಐ, ಜನತಾದಳ ಮತ್ತಿತರ ಪಕ್ಷಗಳೂ ಈ ಬಂದ್‌ಗೆ ಕರೆ ನೀಡಿದವು.

ಜನವರಿ 10 ರಂದು ಎಐಡಿಡಬ್ಲ್ಯುಎ ರಾಜ್ಯ ಕಾರ್ಯದರ್ಶಿ ತಪಸಿ ಪ್ರಹರಾಜ್ ಹಾಗೂ ಮತ್ತಿತರ ಮಹಿಳಾ ಸಂಘಟನೆಗಳ ಕಾರ್ಯಕರ್ತರ ಜತೆಗೆ ಅಂಜನಾ ಮಿಶ್ರ ಕಟಕ್ ಮಹಿಳಾ ಪೋಲೀಸ್ ಸ್ಟೇಶನ್‌ನಲ್ಲಿ ಪ್ರಥಮ ದೂರು ಸಲ್ಲಿಸಿದರು. ಅಲ್ಲಿ ಸಲ್ಪ ಸಮಯದಲ್ಲೇ ರಾಜಕೀಯ ಮುಖಂಡರು, ಕಾರ್ಯಕರ್ತರು, ಜನಸಾಮಾನ್ಯರು ನೆರೆಯಲಾರಂಭಿಸಿದರು. ಅಂಜನಾರವರನ್ನು ಎಸ್.ಸಿ.ಬಿ. ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ವೈದ್ಯಕೀಯ ತಪಾಸಣೆಗೆ ಕಳಿಸಿದಾಗ ಅಲ್ಲಿಯ ಸೂಪರಿಂಟೆಂಡೆಂಟ್ ವಿಳಂಬ ತಂತ್ರ ಅನುಸರಿಸಲಾರಂಭಿಸಿದಾಗ ಆತನನ್ನೇ ಘೆರಾವ್ ಮಾಡಲಾಯಿತು. ಆ ದಿನವೇ ಸಿಪಿಐ(ಎಂ) ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಸ್ತಾರೋಕೋ ನಡೆಸಿತು. ಮರುದಿನವೂ, ಜನವರಿ 12 ರಂದೂ ರಾಜ್ಯದ ಹಲವೆಡೆ ರಾಸ್ತಾರೋಕೋ ನಡೆಯಿತು.

ವಿದ್ಯಾರ್ಥಿ ಸಮ್ಮೇಳನಗಳು

ಸಿಂಧನೂರು 7ನೇ ತಾಲ್ಲೂಕು ಸಮ್ಮೇಳನ

ಭಾರತ ವಿದ್ಯಾರ್ಥಿ ಫೆಡೆರೇಷನ್ (ಎಸ್.ಎಫ್.ಐ) ತಾಲೂಕು ಸಮ್ಮೇಳನ ಡಿಸೆಂಬರ್ 24 ರಂದು ಜ್ಯೋತಿ ಮಹಿಳಾ ಸಮಾಜದಲ್ಲಿ ನಡೆಯಿತು. ತಾಲೂಕು ಅಧ್ಯಕ್ಷರಾದ ಸಿ. ಚಿದಾನಂದ ದೊರೆ ಧ್ವಜಾರೋಹಣ ಮಾಡಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಮುಖಂಡರಾದ ಬಿ. ಲಿಂಗಪ್ಪ ಸಮ್ಮೇಳನ ಉದ್ಘಾಟಿಸಿದರು. ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ (ಡಿ.ವೈ.ಎಫ್.ಐ) ಜಿಲ್ಲಾ ಅಧ್ಯಕ್ಷರಾದ ಶರಬಣ್ಣ ನಾಗ್ಲಾಪುರ, ಎಸ್.ಎಫ್.ಐ.ನ ರಾಜ್ಯ ಉಪಾಧ್ಯಕ್ಷರಾದ ಚಂದ್ರಪ್ಪ ಹೊಸಕೇರಾ ಮಾತನಾಡಿದರು. ಅಧ್ಯಕ್ಷತೆಯನ್ನು ಚಿದಾನಂದ ದೊರೆ ವಹಿಸಿದ್ದರು.

ನಿರ್ಣಯಗಳು:

1. ನಗರದ ರಸ್ತೆಗಳನ್ನು ರಿಪೇರಿ ಮಾಡಿಸಬೇಕು.
2. ತಾಲೂಕಿನ ಎಲ್ಲ ಶಾಲಾ ಕಾಲೇಜಿನಲ್ಲಿ ಡೋನೇಷನ್ ತೆಗೆದು ಕೊಳ್ಳಬಾರದು ಎಂದು ಸಮ್ಮೇಳನದಲ್ಲಿ ನಿರ್ಣಯಗಳನ್ನು ಅಂಗಿಕರಿಸಲಾಯಿತು

ನೂತನ ಸಮಿತಿ:

ಅಧ್ಯಕ್ಷರಾಗಿ: ಶಿವಮೂರ್ತಿ
ಉಪಾಧ್ಯಕ್ಷರಾಗಿ: ಸಿ. ಚಿದಾನಂದ ದೊರೆ, ಸುಭಾನ
ಕಾರ್ಯದರ್ಶಿ: ವತಾಲಸಾಬ,
ಸಹ ಕಾರ್ಯದರ್ಶಿ: ಆದನ ಗೌಡ ರುದ್ರಮುನಿ ಮತ್ತು
15 ಜನರ ಕಾರ್ಯಕಾರಿ ಸಮಿತಿಯು ರಚನೆಯಾಯಿತು.

ತಾಲೂಕು ವಿದ್ಯಾರ್ಥಿ ಸಮ್ಮೇಳನ

ಗುಲ್ಬರ್ಗ:- ಜಿಲ್ಲೆಯ ಅಫಜಲಪುರ ತಾಲೂಕು ಎಸ್.ಎಫ್.ಐ. ವಿದ್ಯಾರ್ಥಿಗಳ ಪ್ರಥಮ ಸಮ್ಮೇಳನವು ಇತ್ತೀಚೆಗೆ ಜರುಗಿತು. ಮಹಾಕಾಶ್ವರ ಗುಡ್ಡದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ನಾಮದೇವ ಕಿಡುಕೊಳ್ಳಿ ಉದ್ಘಾಟಿಸಿದರು ಮುಖ್ಯ ಅತಿಥಿಗಳಾಗಿ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಜೈಲಾಲ ತೋಟದ ಮನಿ, ಉಪನ್ಯಾಸಕರಾದ ಮಲ್ಲಿಕಾರ್ಜುನ ಹೊಸಮನಿ ಭೀಮಶಂಕರ ಮೊದಲಾದವರು ಭಾಗವಹಿಸಿ ಮಾತನಾಡಿದರು.

ತಾಲೂಕು ಸಮಿತಿ:

ಅಧ್ಯಕ್ಷರು- ದತ್ತಾತ್ರೇಯ ದೇವರನಾಡಿಗ ಉಪಾಧ್ಯಕ್ಷರು- ವಿಜಯ ಕುಮಾರ್ ದೇಸಾಯಿ, ಕಲ್ಯಾಣರಾವ್ ನರೂರ ಹಣಮಂತ ಬೋರಳಗಿ, ರಮೇಶ ಹಗ್ಗಿ ಶೈಲೇಶ, ಕಾರ್ಯದರ್ಶಿ- ಬಸವರಾಜ್ ಜಿ. ಗುತ್ತೇದಾರ್, ಸಹಕಾರ್ಯದರ್ಶಿ: ಭೀಮರಾವ್ ಶೆಂಡಿಗ ಮಹಾಂತಪ್ಪಾಸಪನಗೊಳ ಪ್ರಕಾಶ, ಲಕ್ಷ್ಮಿಪುತ್ರ ಶರಣ ಬಸವ ತಳವಾರ.

ಹಾನಗಲ್ ತಾಲ್ಲೂಕು ಸಮ್ಮೇಳನ

ಶಿಕ್ಷಣದಲ್ಲಿ ಕೋಮುವಾದಿಕರಣ ಹಾಗೂ ವ್ಯಾಪಾರೀಕರಣ ವ್ಯಾಪಕಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹಾನಗಲ್ ತಾಲೂಕು ವಿದ್ಯಾರ್ಥಿಗಳು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಅಡಿಯಲ್ಲಿ ತಾಲೂಕು ಪ್ರಥಮ ಸಮ್ಮೇಳನ ನಡೆಸಿದರು.

ಸಮ್ಮೇಳನ ಉದ್ಘಾಟಿಸಿದ ಕಾರ್ಮಿಕ ಮುಖಂಡ ನಿತ್ಯಾನಂದ ಸ್ವಾಮಿಯವರು ವಿದ್ಯಾರ್ಥಿಗಳು ಶಿಕ್ಷಣದ ಉಳಿವಿಗಾಗಿ ಹೋರಾಟ ನಡೆಸುವುದರ ಜೊತೆ ದೇಶದ ಆತಂಕಕಾರಿ ಕೋಮುವಾದದ ವಿರುದ್ಧ ಸೆಣಸುವಂತೆ ಕರೆನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಎಸ್.ಎಫ್.ಐ. ರಾಜ್ಯ ಮುಖಂಡ ಯುವರಾಜ ಕಂಬಾಳಿ ಮಠ ಮಾತನಾಡಿ ಎಸ್.ಎಫ್.ಐ. ದೇಶದ ಅಗ್ರಗಣ್ಯ ವಿದ್ಯಾರ್ಥಿ ಸಂಘಟನೆಯಾಗಿ ಶಿಕ್ಷಣ ಕ್ಷೇತ್ರದ ಸಮಸ್ಯೆಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದೆ ಎಂದರು.

ಸಮ್ಮೇಳನದಲ್ಲಿ ಫಕೀರಪ್ಪ ಹೋತನಹಳ್ಳಿ, ಶಿವಾನಂದ ಕ್ಯಾಲಕೊಂಡ, ಮಹಾಂತೇಶ ಮತ್ತು ವಿಜಯಕಾಂತ ಪಾಟೀಲ ಮುಂತಾದವರು ಶುಭಕೋರಿ ಮಾತನಾಡಿದರು. ಅಧ್ಯಕ್ಷತೆಯನ್ನು ಎಸ್.ಎಫ್.ಐ.ನ ವಿಜಯಕುಮಾರ್ ದೊಡ್ಡಮನಿ ವಹಿಸಿದ್ದರು. ಸಂತೋಷ ಹೊಂಬರಡಿ ಸ್ವಾಗತಿಸಿದರೆ ಭಾಸ್ಕರ ಹುಲ್ಮನಿ ಕಾರ್ಯಕ್ರಮ ನಿರೂಪಿಸಿ ಶಾಂತಾ ಹಿರೇ ಮಠ ವಂದಿಸಿದರು.

ನೂತನ ಸಮಿತಿ:

ಅಧ್ಯಕ್ಷರು- ರಾಘವೇಂದ್ರ ಬೇಟಿಗೇರಿ, ಉಪಾಧ್ಯಕ್ಷರು ವಿ. ನಾಯಕ ಗುಡಿಗಾರ, ಶಾಂತಿ ಹಿರೇಮಠ, ಬಿರೇಂದ್ರ, ರವಿರಾಜ ಹಾದಿಮನಿ; ಪ್ರಧಾನ ಕಾರ್ಯದರ್ಶಿ- ವಿಜಯ ಕುಮಾರ್ ದೊಡ್ಡಮನಿ, ಸಹಕಾರ್ಯದರ್ಶಿಗಳು- ಮಲ್ಲಿಕಾರ್ಜುನ ಸುಣಗಾರ, ಸಂತೋಷ ಹೊಂಬರಡ್, ಭಾಸ್ಕರ ಹುಲ್ಮನಿ, ಸಂಜೀವ ಧಾರವಾಡಕರ ಜೊತೆಗೆ ಶಿಕಾಂತ ಮತ್ತೂರು, ವಿಜಯಶ್ರೀ ಕ್ಯಾಸುಲೂರ, ಸಂಜೀಪ ಪಾಟೀಲ ಮತ್ತು ಮಲ್ಲಿಕಾರ್ಜುನ ಪಟಿದವರ್ ಸದಸ್ಯರುಗಳಾಗಿ ಆಯ್ಕೆಗೊಂಡರು.

ಹುಬ್ಬಳ್ಳಿ ತಾಲೂಕ್ ಸಮ್ಮೇಳನ

ಶಿಕ್ಷಣದ ವ್ಯಾಪಾರೀಕರಣ, ಖಾಸಗೀಕರಣದ ಜೊತೆಗೆ ಇಂದು ಕೋಮುವಾದೀಕರಣಗೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆ ಇದರ ವಿರುದ್ಧ ವಿದ್ಯಾರ್ಥಿಗಳು ಎಚ್ಚೆತ್ತು ಹೋರಾಟ ಮಾಡುವುದು ಇಂದಿನ ಅಗತ್ಯ ಎಂದು ಸಿ.ಆರ್.ಭಟ ಹೇಳಿದರು.

ಡಿ. 8 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಹುಬ್ಬಳ್ಳಿ ತಾಲೂಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಮಹೇಶ ಪತ್ತಾರ 'ಎಸ್.ಎಫ್.ಐ. ಸಂವಿಧಾನ ಕಾರ್ಯಕ್ರಮ' ಕುರಿತು ಮಾತನಾಡಿದರು. ಡಿವೈಎಫ್ಐ ನ ಅಬ್ದುಲ್ ರಜಾಕ್ ಮುಲ್ಲಾ, ಸಮುದಾಯದ ಗಂಗಾಧರ ಗಾಡದ ಶುಭಕೋರಿ ಮಾತನಾಡಿದರು. ಪ್ರಕಾಶ ಅವರಾದಿ ಅಧ್ಯಕ್ಷತೆ ವಹಿಸಿದ್ದರು.

ತಾಲೂಕು ಪದಾಧಿಕಾರಿಗಳು

ದಾಕ್ಷಾಯಿಣಿ ಉಳ್ಳಾಗಡ್ಡಿಮಠ- ಅಧ್ಯಕ್ಷರು, ಪ್ರಕಾಶ ಅವರಾಧಿ -ಕಾರ್ಯದರ್ಶಿ, ಬಿ.ವಿ.ಕೋರಿಮಠ ಜಯಶ್ರೀ ಗಾಡದ, ಗುರು ಕೆಂಚನಗೌಡ್ರ, ಶಂಕರ ತೋರಗಲ್ -ಉಪಾಧ್ಯಕ್ಷರು, ಸತೀಶ ಸೋನಾರ, ಸವಿತಾ ಪಾಟೀಲ್, ಸುಧೀರ ಕಾಕಡೆ -ಸಹಕಾರ್ಯದರ್ಶಿಗಳು.

ಪ್ರೌಢಶಾಲೆ ಘಟಕ ರಚನೆ

ಶಿರಸಿ: ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ.ಐ.)ನ ಭನವಾಸಿ ಜಯಂತಿ ಪ್ರೌಢಶಾಲೆ ಘಟಕವು ಜನವರಿ 5 ರಂದು ರಚನೆಯಾಗಿದ್ದು ಅಧ್ಯಕ್ಷರಾಗಿ ಗಣಪತಿ ನಾಯ್ಕ, ಕಾರ್ಯದರ್ಶಿಯಾಗಿ ಅನುಪಮಾ ಸಿ. ಗೌಡ ಆಯ್ಕೆಗೊಂಡರು. ಉಪಾಧ್ಯಕ್ಷರುಗಳಾಗಿ ಶ್ರೀಧರ ಜಿ. ಚಕ್ರಸಾಲಿ, ವಿನಾಯಕ ದೀಕ್ಷಿತ್, ಶಿಲ್ಪಾ ಶೆಟ್ಟಿ, ಸಹಕಾರ್ಯದರ್ಶಿಗಳಾಗಿ ಪ್ರವೀಣ ಸಳಗಾಂವಕರ, ಮಲ್ಲಿಕಾರ್ಜುನ ವಿಪ್ಪಣಸಿ, ಸ್ವಪ್ನಾ ಪೆಟ್ಕರ, ರಜತಾ ಹೆಗಡೆ ಆಯ್ಕೆಗೊಂಡರು.

ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಯುವರಾಜ ಕಂಬಾಳಿಮಠ, ಎಸ್.ಎಫ್.ಐ. ಶಿರಸಿ ತಾಲೂಕು ಮುಖಂಡರಾದ ಮಂಜುನಾಥ ಸಭೆಯಲ್ಲಿ ಉಪಸ್ಥಿತರಿದ್ದರು.

..............ತತ್ತರಿಸಿದ ಸುರತ್ಕಲ್

ಪುಟ 4 ರಿಂದ

ಮುಸ್ಲಿಮರದು. ಸತ್ತವರು ಅಪರಾಧಿಗಳೇ? ಕೋಮುವಾದಿಗಳೇ? ಖಂಡಿತಾ ಅಲ್ಲ. ಆದರೆ ಇವರೇಕೆ ಸಾಯಬೇಕು? ಯಾಕೆ ಈ ಮುಗ್ಧ, ಅಸಹಾಯಕ, ಬಡ ಜನರನ್ನು ಕೊಂದರು? ಯಾರಿಗೆ ನಷ್ಟವಾಯಿತು? ಯಾರಿಗೆ ಲಾಭವಾಯಿತು? ಈಗಲಾದರೂ ಈ ಪ್ರಶ್ನೆಗಳನ್ನು ಕೇಳೋಣ.

ಯಾರ ತಪ್ಪಿಗೆ ಯಾರಿಗೆ ಶಿಕ್ಷೆ?

ಒಂದು ವರ್ಷದ ಹಿಂದೆ ಪುತ್ತೂರಿನ ಕಾಲೇಜು ವಿದ್ಯಾರ್ಥಿ ಸೌಮ್ಯಳನ್ನು ಬಲಾತ್ಕಾರಗೈದು ಅಮಾನುಷವಾಗಿ ಕೊಲೆ ಮಾಡಲಾಗಿತ್ತು. ಈ ಪ್ರಕರಣದ ಆರೋಪಿ ಅಶ್ರಫ್ ಎಂಬ ಮುಸ್ಲಿಂ ಯುವಕನ ಮೇಲೆ ಮೊಕದ್ದಮೆ ನಡೆದು, ಸರಿಯಾದ ಸಾಕ್ಷ್ಯಾಧಾರ ಒದಗಿಸುವುದರಲ್ಲಿ ಪ್ರಾಸಿಕ್ಯೂಶನ್ ವಿಫಲವಾದುದರಿಂದ ನ್ಯಾಯಾಲಯವು ಆತನನ್ನು ಬಿಡುಗಡೆ ಮಾಡಿತು. ಆನಂತರದ ದಿನಗಳಲ್ಲಿ ಈ ಪ್ರಕರಣಕ್ಕೆ ಕೋಮು ಬಣ್ಣ ಬಳಿದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮುಸ್ಲಿಮರ ಮೇಲೆ ವ್ಯವಸ್ಥಿತವಾದ ಉದ್ರೇಕಕಾರಿ ಪ್ರಚಾರ ನಡೆಯಿತು. ಹಿಂದೂ ಕೋಮುವಾದಿ ಸಂಘಟನೆಗಳು ಮಾತ್ರವಲ್ಲದೆ ಚುನಾಯಿತ ಜನ ಪ್ರತಿನಿಧಿಗಳೂ ಈ ಪ್ರಚಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಮುಸ್ಲಿಂ ಯುವಕರು ಅತ್ಯಾಚಾರಿಗಳು, ಹಿಂದೂ ಹುಡುಗಿಯರನ್ನು ಪ್ರೀತಿಸುವಂತೆ ನಟಿಸಿ ಅವರನ್ನು ಕೆಡಿಸುವವರು ಎಂಬಿತ್ಯಾದಿ ಪ್ರಚಾರಗಳು ಇಡೀ ಸಮಾಜದೊಳಗೆ ಉದ್ರೇಕಕಾರಿ ಪರಿಸ್ಥಿತಿಯನ್ನು ನಿರ್ಮಿಸಿದವು. ಈ ಪ್ರಚಾರಗಳು ಪರಾಕಾಷ್ಠೆಗೆ ತಲುಪಿದ್ದ ಸುರತ್ಕಲ್‌ನಲ್ಲಿ ಸಮಾಜದೊಳಗೆ ಬೆಳೆದಿದ್ದ ಅರ್ಬುದವು ಸ್ಫೋಟಗೊಂಡಿತು. ಗಲಭೆಗಳ ದಿನಗಳಲ್ಲಿ ಊರೆಲ್ಲಾ ಕೇಳಿಬರುತ್ತಿದ್ದ ಪ್ರಚಾರವೆಲ್ಲಾ ಸೌಮ್ಯಳ ಕೊಲೆಯನ್ನೇ ಕೇಂದ್ರವಾಗಿಟ್ಟು ನಡೆಯುತ್ತಿತ್ತು. ಮುಖ್ಯಮಂತ್ರಿ ಪಟೇಲರು ಮಂಗಳೂರಿನಲ್ಲಿ ನಡೆಸಿದ ಪ್ರಮುಖ ನಾಗರಿಕರ ಸಭೆಯಲ್ಲಿ ಮಂಗಳೂರಿನ ಸಂಸತ್ ಸದಸ್ಯ ಧನಂಜಯ ಕುಮಾರರು ತನ್ನ ಮಾತುಗಳನ್ನು ಆರಂಭಿಸಿದ್ದೇ ಸೌಮ್ಯ ಕೊಲೆಯ ಕುರಿತು ಪೀಠಿಕೆಯೊಂದಿಗೆ. ಊರಲ್ಲಿ ಒಂದು ಮಾನಭಂಗ ಮತ್ತು ಕೊಲೆಯಂತಹ ನೀಚ ಕೃತ್ಯ ನಡೆದರೆ ಇಡೀ ಜಿಲ್ಲೆಯಲ್ಲಿ ಒಂದು ಕೋಮಿನ ಜನರು ಅದಕ್ಕೆ ಕಾರಣರಾಗುತ್ತಾರೆಯೇ? ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಅದೇ ಘಟನೆಯಲ್ಲಿ ಸುರತ್ಕಲಿನ ಶಾಸಕ ಕುಂಬಳೆ ಸುಂದರ ರಾಯರು ಮಾತನಾಡುತ್ತಾ 'ನಾನು ಮತ್ತು ಬಾಲಕೃಷ್ಣ ಭಟ್ಟರು (ವಿಧಾನ ಪರಿಷತ್ ಸದಸ್ಯ) ಉದ್ರೇಕಕಾರಿ ಭಾಷಣ ಮಾಡಿದುದೇ ಕೋಮುಗಲಭೆಗೆ ಕಾರಣವೆಂದು ಆರೋಪಿಸಲಾಗುತ್ತಿದೆ. ಇದು ಸರಿಯಲ್ಲ' ಎಂದರು. ಆ ತನಕ ಬಹಿರಂಗವಾಗಿ ಕೇಳಿಬರದಿದ್ದ ಈ ಆರೋಪವು ಕುಂಬ್ಳೆಯವರ ಬಾಯಿಯಿಂದಲೇ ಪ್ರಚಾರಕ್ಕೆ ಬಂತು.

ಸುರತ್ಕಲಿನಲ್ಲಿ ಹಚ್ಚಿದ ಬೆಂಕಿ ಮಂಗಳೂರು, ಬಂಟ್ವಾಳ ಮತ್ತು ಪುತ್ತೂರು ತಾಲೂಕುಗಳಲ್ಲಿ ವಿಷಾನಿಲಗಳನ್ನು ಹರಡಿದೆ. ಮೊನ್ನೆಯ ತನಕ ಮನುಷ್ಯರಾಗಿದ್ದವರು, ನೆರೆಹೊರೆಯ ಮಿತ್ರರಾಗಿದ್ದವರು, ಕೋಮುಗಲಭೆಗಳ ಸುದ್ದಿ ಕೇಳಿದೊಡನೆ ತಾವು ಹಿಂದುಗಳು, ತಾವು ಮುಸ್ಲಿಮರು ಎಂದು ತಮ್ಮನ್ನು ಗುರುತಿಸಿಕೊಂಡು ರಕ್ಕಸರ ಭಾಷೆಯಲ್ಲಿ ಮಾತನಾಡತೊಡಗಿದ್ದಾರೆ. ಸಮಾಜದೊಳಗೆ ವಿಷ ಹರಡುತ್ತಿದೆ.

ಮನುಷ್ಯರನ್ನು ಮನುಷ್ಯರನ್ನಾಗಿ ಮಾತ್ರವೇ ಕಾಣುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಅಪಾಯಕಾರಿ ಪ್ರವೃತ್ತಿಯ ಕುರಿತು ಜನರನ್ನು ಎಚ್ಚರಿಸ ಬಯಸುತ್ತದೆ. ಬಡತನ, ಬೆಲೆ ಏರಿಕೆ, ನಿರುದ್ಯೋಗದಂತಹ ಗಂಭೀರ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಕೋಮು ಭಾವನೆಗಳನ್ನು ಕೆರಳಿಸಲಾಗುತ್ತಿದೆ. ಇದರಿಂದ ನಷ್ಟ ಅನುಭವಿಸುವವರು ಬಡವರು ಮಾತ್ರ. ಬಡವರ, ಕಾರ್ಮಿಕರ, ರೈತಾಪಿ ಜನರ, ಐಕ್ಯತೆಯನ್ನು ಒಡೆಯುವ ದುಷ್ಟ ಶಕ್ತಿಗಳನ್ನು ಸಮಾಜವು ದೂರವಿರಿಸಬೇಕು.

(ಪುಟ 4 ರಲ್ಲಿರುವ ಎರಡು ಫೋಟೋಗಳ ಕೃಪೆ: ಪಟ್ಟಾಂಗ ಪತ್ರಿಕೆ)

ಬೆಂಕಿ ಹಚ್ಚಲು ಬಂದ ....

ಪುಟ 4 ರಿಂದ

ಮೌನ ಆಚರಿಸಿದರು.

ಈ ಪ್ರತಿಭಟನಾ ಸಭೆಯಂತೂ ಅಲ್ಪಸಂಖ್ಯಾತರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟಲು ದೊಡ್ಡದೊಂದು ಅವಕಾಶ ದೊರೆತಿರುವಂತೆ ಜಗದೀಶ ಕಾರಂತ ಮತ್ತು ವಿಧಾನ ಪರಿಷತ್ ಸದಸ್ಯ ಬಾಲಕೃಷ್ಣ ಭಟ್ ಬಳಸಿಕೊಂಡರು. ಈ ಸಭೆಯಲ್ಲಿ ಕೇಳಿದ ಕೆಲವು ತುಣುಕುಗಳನ್ನು ಗಮನಿಸಿ.

- "ಅನ್ಯಾಯ, ಅಪಮಾನ, ಆಕ್ರಮಣಗಳನ್ನು ಇಷ್ಟು ವರ್ಷ ಸಹಿಸಿಕೊಂಡು ಬಂದಿರುವ ಹಿಂದುಗಳು ಇನ್ನು ಮುಂದೆ ಜಾತ್ಯಾತೀತತೆಯ ಹೆಸರಿನಲ್ಲಿ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತ ಹಿಂದೂಗಳ ವಿರುದ್ಧ ಎತ್ತಿಕಟ್ಟಿ ದೌರ್ಜನ್ಯ ನಡೆಸಿರುವುದನ್ನು ಸಹಿಸಿಕೊಂಡಿರಲು ಸಾಧ್ಯವಿಲ್ಲ".

- "ಹಿಂದೂ ಸಮಾಜದ ಮೇಲೆ ವಿವಿಧ ಮುಖಗಳಲ್ಲಿ ದೌರ್ಜನ್ಯಗಳು ನಡೆಯು ತಿದ್ದರೂ ನಾವದನ್ನು ಪ್ರತಿಭಟಿಸಬಾರದು ಎಂದು ಅಧಿಕಾರಸ್ಥರು ಹೇಳುತ್ತಿದ್ದಾರೆ. ಎಲ್ಲರೂ ಅಣ್ಣ-ತಮ್ಮಂದಿರಂತೆ ಬಾಳ ಬೇಕು ಎಂದು ಹೇಳುತ್ತಾರೆ. ಅಣ್ಣ- ತಮ್ಮಂದಿರಾಗಲು ತಾಯಿ ಒಬ್ಬಳೇ ಇರಬೇಕು. ಆದರೆ ಭಾರತ ಮಾತೆಯೆಂಬ ತಾಯಿಯನ್ನು ಗೌರವಿಸಲು ಒಪ್ಪದ ಅಲ್ಪಸಂಖ್ಯಾತರನ್ನು ಸಹೋದರರಂತೆ ಕಾಣುವುದಾರೂ ಹೇಗೆ?"

- "ಎಲ್ಲಿಯಾದರೂ ಕ್ರಿಶ್ಚಿಯನ್ನರು ಹಿಂದೂಗಳಿಂದ ಒದೆತ ತಿಂದಿದ್ದರೆ ಅದಕ್ಕೆ ಕಾರಣವೇನೆಂದು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ಶಾಂತಿಪ್ರಿಯರಾದ ಹಿಂದೂಗಳು ಯಾರ ಮೇಲೂ ಆಕ್ರಮಣ ಮಾಡುವುದಿಲ್ಲ. ಆದರೆ ಮತವನ್ನು ವ್ಯಾಪಾರದ ಸರಕಾಗಿಸಿ ಮನೆಮನೆಗೆ ತೆರಳಿ ಮತಾಂತರಗೊಳಿಸುವ ಹುನ್ನಾರದಲ್ಲಿರುವ ಕ್ರಿಶ್ಚಿಯನ್ನರ ದುರ್ವರ್ತನೆಯನ್ನು ಸಹಿಸಲು ಸಾಧ್ಯವಿಲ್ಲ."

- "ಅಲ್ಪ ಸಂಖ್ಯಾತರು ಏನು ಮಾಡಿದರೂ ಅದನ್ನು ವೈಯಕ್ತಿಕ ಎಂದು ತೋರಿಸಿ ಬಿಡುವ ಸೆಕ್ಯೂಲರ್‌ವಾದಿಗಳು ಹಿಂದುಗಳು ಅನ್ಯಾಯವನ್ನು ಪ್ರತಿಭಟಿಸಿದರೆ ಅದನ್ನು ದೌರ್ಜನ್ಯವೆಂದು ಕರೆಯುತ್ತಾರೆ" - ಹೀಗೆ ಎಂತಹ ಸೆಕ್ಯುಲರ್‌ವಾದಿ ಹಿಂದೂಗಳ ಮನಸ್ಸನ್ನೂ ಒಂದು ಕ್ಷಣ ವಿಚಲಿತವಾಗುವಂತೆ ಮಾತನಾಡಿದ ಜಗದೀಶ ಕಾರಂತ ನೆರೆದಿದ್ದ ಸಾರ್ವಜನಿಕರಿಗೆ ಅಲ್ಪಸಂಖ್ಯಾತರ ಆಕ್ರಮಣಗಳಿಂದ ಹಿಂದೂ ಧರ್ಮ, ಸಂಸ್ಕೃತಿ, ಶ್ರದ್ಧೆ, ನಂಬಿಕೆಗಳು ನಶಿಸುತ್ತಿರುವುದರಿಂದ ಅವುಗಳ ರಕ್ಷಣೆಗಾಗಿ ಹಿಂದೂ ಯುವಕರು ಮುಂದೆ ಬರಬೇಕು. ದಾರಿಗೆ ಬಂದು ಪ್ರತಿಭಟಿಸಬೇಕೆಂದು ಕರೆ ನೀಡಿದರು. ಇದೇ ವೇದಿಕೆಯಲ್ಲಿದ್ದ ಎಂ.ಎಲ್‌ಸಿ ಬಾಲಕೃಷ್ಣ ಭಟ್ ಅಲ್ಪ ಸಂಖ್ಯಾತರು ಹಿಂದೂಗಳ ಮೇಲೆ ದೌರ್ಜನ್ಯವೆಸಗಿ ಇಲ್ಲಿ ಬದುಕಲು ಬಿಡಲಾರೆವು. ಅವರು ಹಿಂದೂಗಳ ವಿಶ್ವಾಸಗಳಿಸಿಕೊಳ್ಳಲಿ ಎಂದು ಗುಡುಗಿದರು. ಜಗದೀಶ ಕಾರಂತ ಹಾಗೂ ಬಾಲಕೃಷ್ಣ ಭಟ್ ನಡೆಸಿದ ಈ ಉದ್ರೇಕಕಾರಿ ಭಾಷಣಗಳೇ ಮುಂದೆ ಸುರತ್ಕಲ್‌ನಲ್ಲಿ ವ್ಯಾಪಿಸಿದ ಕೋಮುಗಲಭೆಗೆ ಮೂಲವಾಯಿತು ಎಂಬುದನ್ನು ಪೋಲೀಸರೇ ಒಪ್ಪುತ್ತಾರೆ. ಆದರೆ ಸರಿಯಾದ ಸಮಯಕ್ಕೆ ನಿರ್ಧಾರ ಕೈಗೊಳ್ಳುವ ಬುದ್ಧಿವಂತಿಕೆ ಅವರಿಗೆ ಅಂದು ಬಂದಿರಲಿಲ್ಲ. ಈಗ ಲಬೋಲಬೋ ಎಂದು ಅಳುತ್ತಿರುವುದರಿಂದಾಗುವ ಪ್ರಯೋಜನವಾದರೂ ಏನು?

ಜೆ.ಎಂ.ಎಸ್. ಘಟಕ ಉದ್ಘಾಟನೆ

ಬಳ್ಳಾರಿಯ ಬಸವೇಶ್ವರ ನಗರದ ಜನವಾದಿ ಮಹಿಳಾ ಸಂಘಟನೆ ಘಟಕ ರಾಜ್ಯ ಕಾರ್ಯದರ್ಶಿ ಕೆ. ನೀಲಾ ಉದ್ಘಾಟಿಸುವುದರ ಮೂಲಕ ಜನವರಿ 7 ರಂದು ರಚನೆಗೊಂಡಿತು. ಶತಮಾನಗಳ ಪಾಳೇಗಾರಿ ಮೌಲ್ಯಗಳಿಂದ ಮಹಿಳೆ ಹೊರ ಬರುವುದು. ಬೆಲೆ ಏರಿಕೆ, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಕೋಮುವಾದದ ವಿರುದ್ಧ ಹೋರಾಡು ವುದರ ಜೊತೆಗೆ ಮಹಿಳೆಯರಿಗೆ ಅಕ್ಷರದ ಅರಿವು ವೈಜ್ಞಾನಿಕ ಚಿಂತನೆ ಹಾಗೂ ಮಹಿಳೆಯರ ಸಮಗ್ರ ಅಭಿವೃದ್ಧಿ ಜೆ.ಎಂ.ಎಸ್.ನ ಮೂಲ ಉದ್ದೇಶವೆಂದು ಕೆ.ನೀಲಾ ತಮ್ಮ ಉದ್ಘಾಟನ ಬಾಷಣದಲ್ಲಿ ವಿವರಿಸಿದರು.

ಮಹಿಳೆಯು ಸಮಾಜದ ಆಗು ಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಬೇಕು. ಈ ನಿಟ್ಟಿನಲ್ಲಿ ಜೆ.ಎಂ.ಎಸ್. ಕಾರ್ಯ ಸ್ವಾಗತಾರ್ಹವೆಂದ ಮುಖ್ಯ ಅತಿಥಿಗಳಾಗಿದ್ದ ಪ್ರೇಮಾಗೌಡ ಸಂಘಟನೆಯು ಜಿಲ್ಲಾದ್ಯಾಂತ ಬೆಳೆದು ಬರಲಿ ಎಂದು ಆಶಿಸಿದರು. ಮತ್ತೊಬ್ಬ ಅತಿಥಿ ಮಂಗಳ ಮಾತನಾಡಿ ಮಹಿಳೆ - ಪುರುಷರಲ್ಲಿ ಸಮಾನ ಗೌರವದ ಅವಶ್ಯಕತೆ ವಿವರಿಸಿದರು.

ಶುಭಕೋರಿ ಗ್ರಾಮೀಣ ಬ್ಯಾಂಕ್ ಯೂನಿಯನ್‌ನ ಜಿಲ್ಲಾ ಉಪಾಧ್ಯಕ್ಷ ಎಸ್. ಲೋಕೇಂದ್ರ ಮಾತನಾಡಿದರೆ ಜ್ಯೋತಿ ಸದಾಶಿವ ಸ್ವಾಗತಿಸಿ, ಸರಳಾ ಪ್ರಾಸ್ತಾವಿದರು ವಾಣಿಶ್ರೀ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ರಾಜೇಶ್ವರಿ ಕಾರ್ಯಕ್ರಮ ನಿರ್ವಹಿಸಿದರೆ ಶ್ರೀ ದೇವಿ ವಂದನೆ ಸಲ್ಲಿಸಿದರು.

ನೂತನ ಘಟಕದ ಪದಾಧಿಕಾರಿಗಳು: ಅಧ್ಯಕ್ಷರು-ಗೀತಾ; ಉಪಾಧ್ಯಕ್ಷರು- ಶಕುಂತಲಮ್ಮ ಲಕ್ಷ್ಮಿ ದೇವಿ, ಸರ್ವೇಶ್ವರಿ, ಮಹಾದೇವಿ; ಪ್ರ.ಕಾರ್ಯದರ್ಶಿ- ವಾಣಿಶ್ರೀ ಜಂಟಿ ಕಾರ್ಯದರ್ಶಿಗಳು-ಜ್ಯೋತಿ ಸದಾಶಿವ ಸುರೇಖ, ಮಂಗಳ.ಎಸ್.ಸ್ವಾಮಿ ಶೈಲಜ; ಖಜಾಂಚಿ- ಸರಳ ಮತ್ತು ಸಮಂತ ಮಣ್ಣಿ

ಶಿಕ್ಷಣ ನೀತಿಯಿಂದ ವಿದ್ಯಾರ್ಥಿಗಳ ಭವಿಷ್ಯ ಕರಾಳ

ಉತ್ತರ ಕನ್ನಡ: ಕೇಂದ್ರದ ನೂತನ ಶಿಕ್ಷಣ ನೀತಿಯಿಂದ ದೇಶದ ವಿದ್ಯಾರ್ಥಿಗಳ ಭವಿಷ್ಯಾ ಕರಾಳವಾಗುತ್ತಿದೆ ಶಿಕ್ಷಣದಲಲ್ಲಿ ಕೋಮುವಾದವನ್ನು ತುಂಬುವುದರೊಟ್ಟಿಗೆ ಶಿಕ್ಷಣದ ವ್ಯಾಪಾರೀಕರಣವನ್ನು ಮಾಡಿ ವಿದ್ಯಾರ್ಥಿಗಳ ನಿರ್ಮಲ ಮನಸ್ಸನ್ನು ಕದಡುವುದಲ್ಲದೇ ಬಡ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿಸಲಾಗುತ್ತಿದೆ ಎಂದು ಎಸ್.ಎಫ್.ಐ.ನ ಉ.ಕ. ಜಿಲ್ಲಾ ಅಧ್ಯಕ್ಷೆ ಯಮುನಾ ಗಾಂವ್ಕರ ನುಡಿದರು.

ಇತ್ತೀಚೆಗೆ ಮುಂಡಗೋಡದಲ್ಲಿ ನಡೆದ ತಾಲೂಕಾ ಮಟ್ಟದ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ನ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು ಅಜಾದ್ ಪ್ರೌಢಶಾಲೆಯಲ್ಲಿ ನಡೆದ ಈ ಸಮ್ಮೇಳನ ವನ್ನು ಉದ್ಘಾಟಿಸಿ ಮಾತನಾಡಿದ ತಹ ಶೀಲ್ದಾರರಾದ ಆರ್.ಜಿ. ನಾಡಿಗೇರ್ ಅವರು ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದು ಬದುಕಿನಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಶಿಕ್ಷಣ ರಂಗದಲ್ಲಿ ಬರುವ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಎಂದು ತಿಳಿಸಿದರು.

ಬಿ.ಟಿ. ಬೆಂಡಿಗೇರಿಯವರು ಮಾತನಾಡಿ ವಿದ್ಯಾರ್ಥಿಗಳು ಬಾರದು ವಿದ್ಯಾರ್ಥಿಗಳು ಸದಾ ಐಕ್ಯತೆಯಿಂದಿರಬೇಕು ಎಂದರು.

ಇದೇ ಸಂದರ್ಭದಲ್ಲಿ ಬಿ.ಇ.ಓ. ಹೆಚ್. ಹನುಮಂತರಾಯಪ್ಪ ಆದಿಜಾಂಭವ ಪ್ರೌಢಶಾಲೆಯ ಮುಖ್ಯೋಪಾಧ್ಯಯರಾದ ಡಿ.ಜಿ. ಹೆಗಡೆ ಮಾತನಾಡಿದರು. ಶಿಕ್ಷಕರಾದ ಕೃಷಿ ಕಟ್ಟಿ, ಕೆ.ಎಫ್. ಕುಮಾರ್ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ತಾಲೂಕು ಅಧ್ಯಕ್ಷರಾದ ಗಣಪತಿ ಯಲಿವಾಳ ವಹಿಸಿದ್ದರು. ಮೊದಲಿಗೆ ಶೀಲಾ ಸಂಗಡಿಗರು ಸ್ವಾಗತಗೀತೆ ಹಾಡಿದರೆ ರೇಖಾ ಅಂಡಗಿ ಸ್ವಾಗತಿಸಿದರು. ಗೋಪಾಲ ಕೃಷ್ಣಜಿ ಕಾರ್ಯಕ್ರಮ ನಿರ್ವಹಿಸಿದರೆ ಬಸವರಾಜ ದೊಡ್ಡಮನಿ ವಂದಿಸಿದರು.

ವಿಶ್ವಸಂಸ್ಥೆ ತಂಡ ಬಳಸಿ ಅಮೆರಿಕನ್ ಗೂಢಚರ್ಯೆ?

ವಿಶ್ವಸಂಸ್ಥೆ ನಿಶ್ಶಸ್ತ್ರೀಕರಣದ ತಂಡ ಬಳಸಿ ಅಮೆರಿಕ ಗೂಡಚರ್ಯೆಯನ್ನು ನಡೆಸುತ್ತಿದೆ ಎಂದು ಇರಾಕ್ ಹಿಂದಿನಿಂದಲೂ ಆರೋಪಿಸುತ್ತಾ ಬಂದಿದೆ. ಈಗ ಅದು ನಿಜ ಎಂದು ಅಮೆರಿಕದಲ್ಲಿ ಹಲವು ಪತ್ರಿಕೆಗಳು ಪ್ರಕಟಿಸಿರುವ ವರದಿಗಳಿಂದ ಗೊತ್ತಾಗುತ್ತಿದೆ. ಅಮೆರಿಕದ ಹಲವು ಪ್ರಮುಖ ಪತ್ರಿಕೆಗಳು ವಿಶ್ವಸಂಸ್ಥೆಯ ಕಾರ್ಯದರ್ಶಿ ಹೇಳಿಕೆಗಳ ಆಧಾರದ ಮೇಲೆ ಈ ವರದಿ ಮಾಡಿವೆ. ಈ ವರದಿ ಪ್ರಕಾರ ಹಲವು ವರ್ಷಗಳಿಂದ ವಿಶ್ವಸಂಸ್ಥೆ ಭದ್ರತಾ ಸಮಿತಿ ನೇಮಿಸಿರುವ ನಿಶ್ಶಸ್ತ್ರೀಕರಣ ತಂಡದ ಅಮೆರಿಕನ್ ಸದಸ್ಯರನ್ನು ಬಳಸಿ, ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್‌ರ ರಕ್ಷಣಾ ಪಡೆಗಳ ಒಳಗಿನ ರಹಸ್ಯ ಮಾತುಕತೆ 'ಕೇಳಲು' ಬಳಸುವ ಗೂಢಚರ್ಯೆಯ ಇಲೆಕ್ಟ್ರಾನಿಕ್ ಉಪಕರಣಗಳನ್ನು ಗುಟ್ಟಾಗಿ ಇಡಲು ಬಳಸಿದೆಯಂತೆ. ಇದು ವಿಶ್ವಸಂಸ್ಥೆ ಮಹಾ ಕಾರ್ಯದರ್ಶಿಗಳಿಗೆ ಗೊತ್ತಾಗಿ, ನಿಶ್ಶಸ್ತ್ರೀಕರಣ ತಂಡದ ನಾಯಕ ಅಮೆರಿಕದ ರಿಚರ್ಡ್ ಬಟ್ಲರನ್ನು ಕರೆಸುವ ಮಟ್ಟಕ್ಕೆ ಹೋಗಿದೆಯಂತೆ. ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಕೋಫಿ ಅನ್ನನ್ ರಿಚರ್ಡ್ ಬಟ್ಲರ್ ಕರೆಸಿ ಆತನ ರಾಜೀನಾಮೆ ಕೇಳಿದಾರೆಂತಲೂ ಸುದ್ದಿ ಹರಡಿದೆ. ಮಹಾ ಕಾರ್ಯದರ್ಶಿಗಳ ಅಧಿಕೃತ ವಕ್ತಾರ ಇದನ್ನು ನಿರಾಕರಿಸಿದರೂ ಈ ಬಗ್ಗೆ ದಟ್ಟ ಸುದ್ದಿ ಹರಡಿದೆ. ಈ ಆಪಾದನೆ ಮಹಾಕಾರ್ಯದರ್ಶಿಗಳಿಗೆ ನುಂಗಲಾರದ ತುತ್ತಾಗಿದೆ. ಈ ಆಪಾದನೆಯನ್ನು ಒಪ್ಪಿಕೊಂಡರೆ ವಿಶ್ವಸಂಸ್ಥೆಯ ಇದ್ದಬದ್ದ ಮಾನ ಹರಾಜಾದಂತೆ. ಇದಲ್ಲದೆ ನಿಶ್ಶಸ್ತ್ರೀಕರಣ ತಂಡ ಇರಾಕ್ ಸರ್ಕಾರದ ಬಗ್ಗೆ ಕಲೆ ಹಾಕಿದ ಗುಪ್ತ ವಿಷಯಗಳನ್ನು, ಅಮೆರಿಕದ ಗೂಢಚರ್ಯ ವಿಭಾಗಕ್ಕೆ ಕೊಡಲಾಗಿದೆ ಎಂಬ ವರದಿಯೂ ಬಂದಿದೆ. ಕ್ಲಿಂಟನ್ ಸರ್ಕಾರ ಈ ಆಪಾದನೆಯನ್ನು ನಿರಾಕರಿಸಿದ್ದರೂ, ಇದು ಅಮೆರಿಕದ ಪತ್ರಿಕೆಗಳಲ್ಲಿ ಬಿಸಿ ಸುದ್ದಿಯಾಗಿದೆ.

15 ಸಾವಿರ ರೊಮೆನಿಯನ್ ಗಣಿಗಾರರ ಮುಷ್ಕರ

ರೋಮೆನಿಯಾದ 15 ಸಾವಿರ ಗಣಿಗಾರರು ಮುಷ್ಕರದಲ್ಲಿದ್ದಾರೆ. ಗಣಿಗಾರರ ಬೇಡಿಕೆಗಳಲ್ಲಿ ವೇತನ ಏರಿಕೆ, ಉದ್ಯೋಗದ ಬಗ್ಗೆ ಭರವಸೆ, ಗಣಿಗಳನ್ನು ಉಳಿಸಲು ಸರ್ಕಾರದ ಕ್ರಮಗಳು ಸೇರಿವೆ. ಈ ಬೇಡಿಕೆಗಳನ್ನು ಪೂರೈಸದಿದ್ದರೆ ಮತ್ತು ಪ್ರಧಾನಿ ಗಣಿ ಪ್ರದೇಶಗಳಿಗೆ ಭೇಟಿ ನೀಡಿ ಮಾತುಕತೆ ನಡೆಸದಿದ್ದರೆ, ರಾಜಧಾನಿ ಬುಕಾರೆಸ್ಟ್‌ಗೆ ಜಾಥಾ ಬರುವುದಾಗಿ ಬೆದರಿಸಿದ್ದಾರೆ.

ವಿಶ್ವಸಂಸ್ಥೆಯ ಶಾಂತಿ ಪಾಲನಾ ಕರ್ತವ್ಯದಲ್ಲಿ ಚ್ಯುತಿಯ ಇನ್ನೊಂದು ಉದಾಹರಣೆ - ಅಂಗೋಲಾ

ವಿಶ್ವಸಂಸ್ಥೆಯ ತಂಡ ಬಳಸಿ ಇರಾಕ್ ಮೇಲೆ ಅಮೆರಿಕದ ಗೂಢಚರ್ಯೆ ನಡೆಸುತ್ತಿತ್ತು ಎಂಬ ವರದಿಗಳ ಬೆನ್ನ ಹಿಂದೆ ಅಂಗೋಲ ದಲ್ಲಿ ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆಗಳ ಬಗೆಗಿನ ವರದಿ - ವಿಶ್ವಸಂಸ್ಥೆಯ ವಿಶ್ವಾಸಾರ್ಹತೆಯನ್ನು ಇನ್ನಷ್ಟು ಕಡಿಮೆ ಮಾಡಿದೆ. ಇತ್ತೀಚಿನ ದಿನಗಳಲ್ಲಿ ಅಂಗೋಲದ ಸರ್ಕಾರ ಮತ್ತು ಯುನಿಟಾ ಗೆರಿಲ್ಲಾಗಳ ನಡುವಿನ ಹೋರಾಟಕ್ಕೆ ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆ ಎರಡು ವಿಮಾನಗಳು ಬಲಿಯಾಗಿವೆ. ಇವೆರಡು ಘಟನೆಗಳಲ್ಲಿ ವಿಶ್ವಸಂಸ್ಥೆಯ ಈ ಘಟನೆಯ ತನಿಖೆ ಸಂಬಂಧದಲ್ಲಿ ಸರ್ಕಾರದಿಂದಾಗಲಿ, ಯೂನಿಟಾ ಗೆರಿಲ್ಲಾಗಳಿಂದಾಗಲಿ ಯಾವುದೇ ಮಾಹಿತಿ ಪಡೆಯಲು ಸಾಧ್ಯವಾಗಿಲ್ಲ.


1994 ರಲ್ಲಿ 19 ವರ್ಷಗಳ ಆಂತರಿಕ ಸಮರದ ನಂತರ ಏರ್ಪಟ್ಟ ಶಾಂತಿ ಒಪ್ಪಂದವನ್ನು ಜಾರಿ ಮಾಡಲು ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆಗಳು ಅಲ್ಲಿ ಇವೆ. ಆದರೆ ಅವು ಪರಿಣಾಮಕಾರಿಯಾಗಿಲ್ಲ ಎಂಬುದಕ್ಕೆ ಈ ಎರಡು ಘಟನೆಗಳೇ ಸಾಕ್ಷಿ. ತಮ್ಮ ಪಡೆಗಳ ರಕ್ಷಣೆಯನ್ನು ಮಾಡಿಕೊಳ್ಳಲಾಗದ ಪಡೆ ಕದನ ವಿರಾಮವನ್ನು ಹೇಗೆ ಜಾರಿ ಮಾಡೀತು?

ಇದಕ್ಕೆ ಮೂಲಕಾರಣ 1994 ರಲ್ಲಿ ಯೂನಿಟಾ ಪುನಃ ತನ್ನ ಗೆರಿಲ್ಲಾ ಪಡೆಗಳಿಗೆ ಹೊರಗಡೆಯಿಂದ ಕಳ್ಳತನದಿಂದ ಭಾರಿ ಶಸ್ತ್ರಾಸ್ತ್ರ ಆಮದು ಮಾಡಲು ಸಾಧ್ಯವಾಗಿದ್ದು. ಇದನ್ನು ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆ ಪರಿಣಾಮಕಾರಿಯಾಗಿ ತಡೆಯದಿದ್ದದ್ದು ಈಗಿನ ಪರಿಸ್ಥಿತಿಗೆ ಮೂಲ ಕಾರಣ. ಯೂನಿಟಾ ಗೆರಿಲ್ಲಾಗಳಿಗೆ ಅಮೆರಿಕ, ಬ್ರಿಟನ್‌ಗಳ ಬೆಂಬಲ ಇದೆ ಎಂಬುದೇ ಇದಕ್ಕೆ ಕಾರಣ. ಇರಾಕ್‌ನ ಮೇಲೆ 8 ವರ್ಷವಾದರೂ ಕತ್ತಿ ಮಸೆಯುವ ಅಮೆರಿಕಾ, ಅದೇ ವಿಶ್ವಸಂಸ್ಥೆಯ ನಿರ್ಣಯಗಳನ್ನು ಪ್ರತಿದಿನ ಉಲ್ಲಂಘಿಸುತ್ತಿರುವ ಯೂನಿಟಾದ ಬಗ್ಗೆ ಮೌನವಾಗಿದೆ. ಅಂಗೋಲಾದ ಸರ್ಕಾರ ಎಡಪಂಥೀಯ ಸರ್ಕಾರವೆಂದೆ? ಅದನ್ನು ಉರುಳಿಸುವಲ್ಲಿ ಯೂನಿಟಾಗೆ ಅಮೆರಿಕದ ಪರೋಕ್ಷ ಬೆಂಬಲವಿದೆಯೆಂದೇ?

ವಿಶ್ವಸಂಸ್ಥೆ - ಅಮೆರಿಕ ಸಾಮ್ರಾಜ್ಯ ಶಾಹಿಯ ಕೈಗೊಂಬೆ ಎಂದು ಅಂಗೋಲ ಘಟನೆಗಳು ಪುನಃ ಸಿದ್ಧಪಡಿಸಿವೆ. ಇದನ್ನು ಸರಿಪಡಿಸುವವರಿಗೆ ವಿಶ್ವಸಂಸ್ಥೆಯು ವಿಶ್ವಾಸಾರ್ಹತೆಯನ್ನು ಸಿದ್ಧಪಡಿಸುವುದು ಕಷ್ಟಸಾಧ್ಯವಾಗುತ್ತಿವೆ.

ಬ್ರೆಜಿಲ್ ಪ್ರಾಂತ್ಯದಲ್ಲಿ ವೇತನ ನಿಲುಗಡೆಯ ಬಿಕ್ಕಟ್ಟು

ಬ್ರೆಜಿಲ್‌ನ ಅತಿ ದೊಡ್ಡ ಪ್ರಾಂತ್ಯವೊಂದು ಕೇಂದ್ರ ಸರ್ಕಾರಕ್ಕೆ ಸಾಲ ಪಾವತಿಯನ್ನು 90 ದಿನಗಳ ವರೆಗೆ ನಿಲ್ಲಿಸಲು ಆಜ್ಞೆ ಮಾಡಿದ್ದು ತೀವ್ರ ಬಿಕ್ಕಟ್ಟಿಗೆ ಕಾರಣವಾಗಿದೆ. ಈ ಸುದ್ದಿ ಹರಡುತ್ತಿದ್ದಂತೆ ಶೇರು ಮಾರುಕಟ್ಟೆಯ ಬೆಲೆಗಳು ಬೀಳಲಾರಂಭಿಸಿದವು. ವಿದೇಶಿ ಬಂಡವಾಳ ಗಾಬರಿಗೊಂಡು ಬ್ರೆಜಿಲ್‌ನಿಂದ ಹೊರಕ್ಕೆ ಹೋಗುತ್ತಿವೆ. 1998 ರಲ್ಲಿ ಬ್ರೆಜಿಲ್ ವಿದೇಶಿ ವಿನಿಮಯ ಮಾರುಕಟ್ಟೆಯ 15 ಶತಕೋಟಿ ಡಾಲರು ಕಳೆದುಕೊಂಡಿದೆ. ಇದು 1997 ರ ಸಂಖ್ಯೆಯ ಎರಡು ಪಟ್ಟು. ಬ್ರೆಜಿಲ್ ಬಿಕ್ಕಟ್ಟು, ಮೆಕ್ಸಿಕೋ ಸೇರಿ ಹಲವು ಲ್ಯಾಟಿನ್ ಅಮೆರಿಕದ ದೇಶಗಳಿಗೆ ಹರಡಿದೆ.



ಪಾಪರ್ ಆಗಿರುವ ಗೋರ್ಬಚೆವ್ ರಾಜಕೀಯ ಬಿಡ್ತಾರಂತೆ!

ಕೇಳಿರಿ! ಕೇಳಿರಿ! ಗೋರ್ಬಚೇವ್ ರಾಜಕೀಯ ಬಿಡ್ತಾರಂತೆ. ಇತ್ತೀಚೆಗೆ ಗೋರ್ಬಚೆವ್ ರಾಜಕೀಯದಲ್ಲಿ ಇದ್ರಾ ಅಂತ ಕೇಳಬಹುದು ನೀವು. ಅದೇನೋ ಗೊತ್ತಿಲ್ಲ. 1996 ರ ಚುನಾವಣೆಯಲ್ಲಿ ಅವಮಾನಕಾರಿಯಾಗಿ ಸೋತಿದ್ದರಂತೆ ಗೊತ್ತ. ಮತ್ತು ಅವರು ಗಳಿಸಿದ ಮತ ಶೇಕಡಾ 1.0 ಮಾತ್ರ. ಇತ್ತೀಚಿಗೆ ರಶ್ಯಾದ ಈ ಶತಮಾನದ ಬೆಳವಣಿಗೆ ಬಗ್ಗೆ ಅವರು ಬರೆದ ಪುಸ್ತಕ ಬಿಡುಗಡೆಯಾಗಿದೆ.

ಈಗ ಅವರು ತಮ್ಮ ಹೆಸರಿನ ಫೌಂಡೇಶನ್ ಮಾಡಿಕೊಂಡಿದ್ದಾರೆ. ಇತ್ತೀಚಿನ ವಿದೇಶಿ ವಿನಿಮಯ ಬಿಕ್ಕಟ್ಟು ಅವರನ್ನು ಪಾಪರ್ ಮಾಡಿದೆ. ಅವರ 80 ಸಾವಿರ ಡಾಲರನಷ್ಟು ಜೀವನದ ಉಳಿತಾಯ ಬೆಲೆ ಇಲ್ಲದಂತಾಗಿದೆ. ಸದ್ಯಕ್ಕೆ ಆತನ ಫೌಂಡೇಶನ್‌ನ ಉದ್ಯೋಗಿಗಳಿಗೆ ಸಂಬಳ ಕೊಡಲು ಕಾಸಿಲ್ಲವಂತೆ - ಹಲವು ತಿಂಗಳುಗಳಿಂದ.

ಪಾಕಿಸ್ತಾನದಲ್ಲಿ ನವಾಜ್ ಶರೀಫ್ ಮೇಲೆ ಹತ್ಯೆ ಪ್ರಯತ್ನ

ಪಾಕಿಸ್ತಾನದ ಕಾನೂನು ಮತ್ತು ವ್ಯವಸ್ಥೆ ಹದಗೆಡುತ್ತಿದ್ದು, ಸಿಂಧ್ ಕರಾಚಿಗಳಲ್ಲಿ ಹೆಚ್ಚು ಕಡಿಮೆ ಮಿಲಿಟರಿ ಆಡಳಿತ ಜಾರಿಗೆ ಬಂದಿದೆ. ಇತ್ತೀಚೆಗೆ ನವಾಜ್ ಶರೀಫ್‌ರ ಮೇಲೆ ಬಾಂಬ್ ಧಾಳಿಯಿಂದ ಹತ್ಯೆಯ ಪ್ರಯತ್ನ ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದು ತೋರಿಸುತ್ತದೆ. ಲಾಹೋರ್‌ನಲ್ಲಿ ನವಾಜ್ ಶರೀಫರ ಫಾರ್ಮ್ ಹೌಸ್‌ಗೆ ಹೋಗುವ ದಾರಿಯಲ್ಲಿ ಇಟ್ಟಿದ್ದ ಟೈಂ ಬಾಂಬ್ ಸಿಡಿಯಿತು. ಆದರೆ ಆ ಬಾಂಬ್ ಇಟ್ಟವರು ಯೋಚಿಸಿದಂತೆ, ಈ ಸಮಯ ದಲ್ಲಿ ನವಾಜ್ ಶರೀಫ್ ಆ ದಾರಿ ಮೇಲೆ ಹೋಗಿರದ್ದರಿಂದ ಅವರು ಪಾರಾದರು ಅಷ್ಟೆ. ಆದರೆ ಯಾರು ಈ ಬಾಂಬ್ ಇಟ್ಟಿರುವವರು ಎನ್ನುವ ಬಗ್ಗೆ ಜಿಜ್ಞಾಸೆ ನಡೆಯುತ್ತಲೇ ಇದೆ.

ಈ ನಡುವೆ ನವಾಜ್ ಶರೀಫ್‌ರ ಸರ್ಕಾರ ಜನತೆಯ ನಡುವೆ ಹೆಚ್ಚೆಚ್ಚು ಅಪ ಖ್ಯಾತಿ ಪಡೆಯುತ್ತಿದ್ದು, ಹೆಚ್ಚೆಚ್ಚು ಸರ್ವಾಧಿ ಕಾರಿ ಪ್ರವೃತ್ತಿ ತೋರಿಸುತ್ತಿದೆ. ಧಾರ್ಮಿಕ ಮೂಲಭೂತವಾದವನ್ನು ದುರ್ಬಳಕೆಗೆ ಈಡು ಮಾಡಿರುವ ಸರ್ಕಾರ ಹೆಚ್ಚೆಚ್ಚು ಸೈನ್ಯದ ಮೇಲೆ ಅವಲಂಬಿಸುತ್ತಿದೆ. ಸೈನ್ಯಕ್ಕೆ ಹೆಚ್ಚೆಚ್ಚು ರಾಜಕೀಯ, ಆಡಳಿತದ ಹೊಣೆ ಕೊಡುತ್ತಿದೆ. ಕರಾಚಿಯ ನ್ಯಾಯ ವ್ಯವಸ್ಥೆ, ವಿದ್ಯುತ್ ಬೋರ್ಡ್, ನೀರು ಮತ್ತು ಕೊಳಚೆ ನಿರ್ಮೂಲನಾ ಬೋರ್ಡ್‌ಗಳನ್ನು ನೋಡಿ ಕೊಳ್ಳಲು ಸೈನ್ಯಕ್ಕೆ ಹೇಳಲಾಗಿದೆ. ಪಾಕಿಸ್ತಾನ ದಲ್ಲಿ ಮಿಲಿಟರಿ ಸರ್ಕಾರ ಇದ್ದಾಗಲೂ ಈ ರೀತಿಯ ಜವಾಬ್ದಾರಿಯನ್ನು ಸೈನ್ಯಕ್ಕೆ ಕೊಟ್ಟಿರಲಿಲ್ಲವಂತೆ.

ಇದು ನಿಮಗೆ ಗೊತ್ತೆ?

ಜಗತ್ತಿನ ಯಾವ ಭಾಗ ಅತ್ಯಂತ ಬಡತನ ಇರುವಂತಹದು ಎಂದು ಊಹಿಸಬಲ್ಲಿರಾ? ಆಫ್ರಿಕಾ ಇರಬಹುದು ಎಂದಿರಾ? ಇಲ್ಲ. ನಿಮಗೆ ಆಶ್ಚರ್ಯವಾಗ ಬಹುದು. ಭಾರತವೂ ಸೇರಿರುವ ದಕ್ಷಿಣ ಏಶ್ಯಾ ಜಗತ್ತಿನ ಅತ್ಯಂತ ಬಡತನ ಇರುವ ಪ್ರದೇಶ. ಅದೂ ಎಲ್ಲಾ ವಿಕಾಸಶೀಲ ದೇಶಗಳ ಸರಾಸರಿ ತಲಾ ಆದಾಯದ ಮೂರನೇ ಒಂದಕ್ಕೂ ಕಡಿಮೆ. ದಕ್ಷಿಣ ಏಶ್ಯಾದ ತಲಾ ಸರಾಸರಿ ಆದಾಯ 309 ಡಾಲರುಗಳು. ಎಲ್ಲಾ ವಿಕಾಸಶೀಲ ದೇಶಗಳದ್ದು ಸರಾಸರಿ 570 ಡಾಲರು ಗಳು. ಅತ್ಯಂತ ಕಡಿಮೆ ಅಭಿವೃದ್ಧಿ ಕಂಡಿರುವ ಆಫ್ರಿಕಾದ ಸಹಾರಾ ಪ್ರದೇಶದ ತಲಾ ಸರಾಸರಿ ಆದಾಯ 555 ಡಾಲರು.

ಅಂಗನವಾಡಿ ನೌಕರರ ತಾಲೂಕು ಸಮಾವೇಶ

ದಕ್ಷಿಣ ಕನ್ನಡದ ಬೆಳ್ತಂಗಡಿ ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ತಾಲೂಕು ಸಮಾವೇಶವು ಸಿಐಟಿಯು ನೇತೃತ್ವದಲ್ಲಿ ನಗರದ ಎನ್.ಜಿ.ಓ ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು.

ಸಮಾವೇಶ ಉದ್ಘಾಟಿಸಿದ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ರಾಜ್ಯದಲ್ಲಿ ಬಡ ಮಕ್ಕಳು ಮತ್ತು ಅಪೌಷ್ಟಿಕತೆಯ ಗರ್ಭಿಣಿಯರ ಸೇವೆ ಸಲ್ಲಿಸುತ್ತಿರುವ ಅಂಗನ ವಾಡಿ ಕಾರ್ಯಕರ್ತೆಯರನ್ನು ಕೀಳರಿಮೆಯಿಂದ ಸರ್ಕಾರ ಕಾಣುತ್ತಿದೆ ಎಂದರು. ಇಲಾಖಾ ಅಧಿಕಾರಿಗಳು, ಜೀಪು ಚಾಲಕರು, ಕಛೇರಿ ಸ್ವಚ್ಛಗೊಳಿಸುವವರು ಎಲ್ಲರು ಖಾಯಂ ನೌಕರರಿದ್ದು ಎಲ್ಲಾ ಸೌಲಭ್ಯ ಪಡೆಯುವಾಗ ನಮಗೇಕೆ ತಾರತಮ್ಯ ಎಂದರು. ಅಂಗನವಾಡಿ ಕಾರ್ಯಕರ್ತೆಯರ ಮಧ್ಯೆ ಹಲವು ಸಂಘಟನೆಗಳಿದ್ದರು, ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಸಿಐಟಿಯು ಸಂಘಟನೆಯಡಿ ಸಂಘಟಿತರಾಗಿ ಇಂದು ಹಲವು ಬೇಡಿಕೆ ಈಡೇರಿಸಿ ಕೊಳ್ಳಲು ಸಾಧ್ಯವಾಗಿದೆ ಎಂದರು. ಕನಿಷ್ಟ ವೇತನ 2 ಸಾವಿರ ರೂ ಇಲ್ಲವೆ ಖಾಯಂ ಗೊಳಿಸಬೇಕೆಂದು ಇದು ನಮ್ಮ ಮೊದಲ ಬೇಡಿಕೆ ಎಂದರು.

ದ.ಕ. ಸಿಐಟಿಯು ಪ್ರ. ಕಾರ್ಯದರ್ಶಿ ಬಿ.ಮಾಧವ ಮಾತನಾಡಿ ಸಂಘಟನೆ ಮೂಲಕ ನಮ್ಮ ಬೇಡಿಕೆಗಳನ್ನು ಈಡೇರಿಸಿ ಕೊಳ್ಳಬೇಕೆಂದು ಸುಮಿತ್ರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ರೈತ ಸಂಘದ ಹರಿದಾಸ್ ಎಂ.ಎಸ್., ಡಿ.ವೈ.ಎಫ್.ಐ. ಬಾಲಕೃಷ್ಣ ಅಡೆಂಜ, ಮಹಿಳಾ ಸಂಘಟನೆಯ ಸುಕನ್ಯ ಹರಿದಾಸ್, ಸಮಾವೇಶದ ಸಂಚಾಲಕ ಬಿ.ಎಂ. ಭಟ್, ಬೀಡಿ ಯೂನಿಯನ್‌ನ ಸಂಜೀವ ಬಂಗೇರ ಮೊದಲಾದವರು ವೇದಿಕೆಯಲ್ಲಿದ್ದರು.

ನೂತನ ಸಮಿತಿ: ಗೌರವ ಅಧ್ಯಕ್ಷರು- ಸುಕನ್ಯ,ನ್ಯಾಯವಾದಿ; ಅಧ್ಯಕ್ಷರು- ಸುಮಂಗಲ; ಉಪಾಧ್ಯಕ್ಷರು- ಸುಮಂಗಲ, ಹೇಮಾ, ವಿದ್ಯಾವತಿ; ಕಾರ್ಯದರ್ಶಿ-ಕುಸುಮಾವತಿ.ಜಿ.; ಸಹ ಕಾರ್ಯದರ್ಶಿಗಳು- ಸುಶೀಲ, ಹೇಮಾವತಿ ಶಂಕರಿ; ಖಜಾಂಚಿ- ವಸುಂದರ

ಗ್ರಾಮ ಪಂಚಾಯತ್ ನೌಕರರ ಸಮಾವೇಶ

ಉಡುಪಿ:ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ (ಸಿ.ಐ.ಟಿ.ಯು) ಇದರ ನೇತೃತ್ವದಲ್ಲಿ ಉಡುಪಿ ತಾಲೂಕು ಗ್ರಾಮ ಪಂಚಾಯತು ನೌಕರರ ಸಮಾವೇಶವು ಉಡುಪಿ ಎನ್. ಜಿ.ಓ ಸಭಾ ಭವನದಲ್ಲಿ ಡಿ. 27 ರಂದು ಜರುಗಿ ಗ್ರಾಮ ಪಂಚಾಯತು ನೌಕರರನ್ನು ರಾಜ್ಯ ಸರಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ರಾಜ್ಯ ಸರಕಾರಿ ನೌಕರರಿಗೆ ಸರಿಸಮಾನವಾದ ವೇತನ ಸವಲತ್ತುಗಳನ್ನು ಒದಗಿಸುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸಲು ನಿರ್ಣಯಿಸಲಾಯಿತು. ಸಿ.ಐ.ಟಿ.ಯು ದ.ಕ. ಮತ್ತು ಉಡುಪಿ ಜಿಲ್ಲಾ ಪ್ರ. ಕಾರ್ಯದರ್ಶಿ ಬಿ. ಮಾಧವರವರು ಮಾತನಾಡುತ್ತಾ ಗ್ರಾಮ ಪಂಚಾಯತ್ ಸರಕಾರದ ಪ್ರಮುಖ ಅಂಗ. ಇದರ ನೌಕರರಿಗೆ ಜೀವನ ನಿರ್ವಹಿಸಲಾಗದ ರೀತಿಯಲ್ಲಿ ವೇತನದ ವ್ಯವಸ್ಥೆ ಇದೆ. ಇದು ಬದಲಾವಣೆ ಆಗಬೇಕು. ರಾಜ್ಯ ಸರಕಾರಿ ನೌಕರರಿಗೆ ಸಿಗುವ ವೇತನ ಸವಲತ್ತುಗಳು ಗ್ರಾಮ ಪಂಚಾಯತ್ ನೌಕರರಿಗೆ ಸಿಗಬೇಕು. ಇದು ನಮ್ಮ ಪ್ರಮುಖ ಬೇಡಿಕೆ. ಇದಕ್ಕಾಗಿ ರಾಜ್ಯದಾದ್ಯಂತ ಸಂಘಟನೆಯನ್ನು ಬಲಪಡಿಸಲು ಸಿ.ಐ.ಟಿ.ಯು ಕಾರ್ಯಪ್ರವೃತ್ತವಾಗಿದೆ ಎಂದರು.

ಈ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿ ಕೆ. ಶಂಕರ್ ರವರು ಮಾತಾಡುತ್ತಾ ಸಿ.ಐ.ಟಿ.ಯು ನೇತೃತ್ವದ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘವು ಹಲವು ಪ್ರಮುಖ ಬೇಡಿಕೆಗಳನ್ನಿಟ್ಟು ರಾಜ್ಯ ವ್ಯಾಪಿ ಹೋರಾಟಗಳನ್ನು ನಡೆಸಿದೆ. ಇನ್ನು ಮುಂದಿನ ಹೋರಾಟದಲ್ಲಿ ಉಡುಪಿ ಮತ್ತು ದ.ಕ. ಜಿಲ್ಲೆಯ ಗ್ರಾಮ ಪಂಚಾಯತ್ ನೌಕರರು ಸೇರಿ ಯಶಸ್ವಿ ಗೊಳಿಸುವ ದೃಢ ನಿರ್ಧಾರ ಮಾಡಬೇಕು ಎಂದರು. ಕುಂದಾಪುರ ತಾಲೂಕು ಗ್ರಾಮ ಪಂಚಾಯತು ನೌಕರರ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ ಮತ್ತು ಕಾರ್ಯದರ್ಶಿ ಭಾಸ್ಕರ ಬೈಂದೂರು ಶುಭ ಕೋರಿ ಮಾತನಾಡಿದರು. ಗ್ರಾಮ ಪಂಚಾಯತು ನೌಕರರಾದ ದಿನಕರ ಕೆಮ್ಮಣ್ಣು, ಸುರೇಶ ಕೆಮ್ಮಣ್ಣು, ಶಂಕರ ಶಿರ್ವ, ಲಕ್ಷ್ಮಣ ಶೆಟ್ಟಿ ಚಾಂತಾರು ಸಂಘವನ್ನು ಬಲಪಡಿಸುವ ಬಗ್ಗೆ ಸಲಹೆ ನೀಡಿದರು.

ಅಧ್ಯಕ್ಷರಾಗಿ ಲಕ್ಷ್ಮಣ ಶೆಟ್ಟಿ ಹೆರಂಜೆ, ಸುರೇಶ ಬಂಗೇರ, ಕೆಮ್ಮಣ್ಣು ಪ್ರಧಾನ ಕಾರ್ಯದರ್ಶಿಯಾಗಿ ಉದಯ ಶೆಟ್ಟಿ ಪರ್ಡೂರು ಆಯ್ಕೆಯಾದರು.

ಜನವರಿ 16: ಅಲ್ಪಸಂಖ್ಯಾತರೊಂದಿಗೆ ಸೌಹಾರ್ದ ದಿನ

ಜನವಾದಿ ಮಹಿಳಾ ಸಂಘಟನೆಯ ಕರೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಜನವರಿ 6 ರಂದು ಮಹಾರಾಷ್ಟ್ರದ ನಾಶಿಕದಲ್ಲಿ ಹಿಂದೂ ಸಮ್ಮೇಳನ ಎಂದು ಹೇಳಿಕೊಂಡ ಸಭೆಯೊಂದು ಕ್ರಿಶ್ಚಿಯನ್ನರ ಬಗ್ಗೆ ಅಂಗೀಕರಿಸಿದ ನಿರ್ಣಯ ಅತ್ಯಂತ ಆಕ್ಷೇಪಾರ್ಹ ಎಂದು ಖಂಡಿಸಿದೆ. ಕ್ರೈಸ್ತ ಪಾದ್ರಿಗಳು, ನನ್‌ಗಳು ಆ ಪ್ರದೇಶವನ್ನು ಬಿಟ್ಟು ಹೋಗದಿದ್ದರೆ ಹಿಂಸಾಚಾರ ನಡೆಯುವುದಾಗಿ ಆ ನಿರ್ಣಯ ಬಹಿರಂಗವಾಗಿಯೇ ಬೆದರಿಸಿದೆ. ಇಂತಹ ಉದ್ರೇಕಕಾರಿ ಹೇಳಿಕೆಗಳಿಂದಲೇ ಮಧ್ಯ ಪ್ರದೇಶದಲ್ಲಿ ಸಿಸ್ಟರ್ ಮರಿಯಾಳ ಅಮಾನುಷ ಹತ್ಯೆ, ಜಬುವಾದಲ್ಲಿ ಕ್ರೈಸ್ತ ಸನ್ಯಾಸಿಯರ ಮೇಲೆ ಧಾಳಿಯಂತಹ ಭಯಾನಕ ಘಟನೆಗಳು ನಡೆದಿವೆ ಎಂದು ಎಐಡಿಡಬ್ಲ್ಯುಎ ಹೇಳಿಕೆ ಅಭಿಪ್ರಾಯ ಪಟ್ಟಿದೆ.

ಗುಜರಾತಿನಲ್ಲಿ ಕ್ರೈಸ್ತ ಸಮುದಾಯದ ವಿರುದ್ಧ ಹಿಂಸಾಚಾರ ವ್ಯಾಪಕಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇದು ಬಂದಿರುವುದು ತನ್ನ 'ಹಿಂದೂ ರಾಷ್ಟ್ರ' ವನ್ನು ಸ್ಥಾಪಿಸುವಲ್ಲಿ ಮುಂದಿನ ಹಿಂಸಾತ್ಮಕ ಅಧ್ಯಾಯವನ್ನು ಬಡ ಬುಡಕಟ್ಟು ಜನಗಳ ಮೇಲೆ ಪ್ರಯೋಗಿಸುವ ಗುರಿಯನ್ನು ಸಂಘ ಪರಿವಾರ ಇಟ್ಟು ಕೊಂಡಿದೆ ಎಂಬುದನ್ನು ಸ್ಪಷ್ಟಗೊಳಿಸಿದೆ. ಬಿಜೆಪಿಯ ಸಾಮಾಜಿಕ ನೆಲೆಗಳಾದ ಲೇವಾ ದೇವಿಗಾರರು ಹಾಗೂ ಕಾಳಸಂತೆಕೋರ ವ್ಯಾಪಾರಿಗಳಿಂದ ಅತ್ಯಂತ ಹೇಯ ಶೋಷಣೆಗೊಳಗಾಗಿರುವ ಈ ಬುಡಕಟ್ಟು ಜನವನ್ನು ಈಗ ಧರ್ಮದ ಹೆಸರಲ್ಲಿ ವಿಭಜಿಸಿ ಅವರು ಶೋಷಣೆಗೆ ಇನ್ನೂ ತೀವ್ರರೀತಿಯಲ್ಲಿ ಬಲಿಯಾಗುವಂತೆ ಮಾಡಲಾಗುತ್ತಿದೆ ಎಂದು ಎಐಡಿಡಬ್ಲ್ಯುಎ ಖಂಡಿಸಿದೆ.

ಗುಜರಾತಿನಲ್ಲಿ ಗಲಭೆ ಪೀಡಿತ ಪ್ರದೇಶಗಳಲ್ಲಿ ಒಂದಾದ ನವಸಾರಿಯ ಪೋಲೀಸ್ ಸೂಪರಿಂಟೆಂಡ್‌ನ ಸಾರ್ವಜನಿಕ ಹೇಳಿಕೆಗಳನ್ನು ಎಐಡಿಡಬ್ಲ್ಯುಎ ಬಲವಾಗಿ ಖಂಡಿಸಿದೆ. ಕ್ರಿಶ್ಚಿಯನ್ನರ ಮೇಲೆ ಆಕ್ರಮಣಗಳನ್ನು ನಿಲ್ಲಿಸಲೆಂದು ಕಳಿಸಿದ ಈ ಅಧಿಕಾರಿ ಈ ಆಕ್ರಮಣಗಳನ್ನು ಸಮರ್ಥಿಸಿಕೊಂಡಿದ್ದಾನೆ. ಪರಿಶಿಷ್ಟ ಬುಡಕಟ್ಟು ಕೋಮುಗಳಿಗೆ ಸಂವಿಧಾನದತ್ತ ಸೌಲಭ್ಯಗಳನ್ನು ವಿಕೃತಗೊಳಿಸುತ್ತಾ ಆತ ಈ ಸೌಲಭ್ಯಗಳು ಹಿಂದೂ ಬುಡಕಟ್ಟು ಜನಗಳಿಗೆ ಮಾತ್ರ, ಕ್ರಿಶ್ಚಿಯನ್ ಬುಡಕಟ್ಟು ಜನರೂ ಇದರ ಪ್ರಯೋಜನ ಪಡೆಯುತ್ತಿರುವುದಾಗಿ ಅಸಂತೃಪ್ತಿ ಹರಡಿದೆ ಎಂದು ಹೇಳಿದ್ದಾನೆ. ಈ ಹಿಂದೆ ಹಿಂದು ಜಾಗರಣಾ ಮಂಚದ ವೇದಿಕೆಯಿಂದ ಕ್ರೈಸ್ತರ ವಿರುದ್ಧ ಉದ್ರೇಕಕಾರಿ ಹೇಳಿಕೆಗಳನ್ನು ನೀಡುತ್ತಿದ್ದ ಸಮಯದಲ್ಲೇ ಈ ಪ್ರದೇಶದ ಕಲೆಕ್ಟರ್ ಆದೇ ವೇದಿಕೆಯಲ್ಲಿ ಇದ್ದ ಎಂಬ ಸಂಗತಿಯತ್ತ ಎಐಡಿಡಬ್ಲ್ಯುಎ ಗಮನ ಸೆಳೆದಿದೆ.

ಈ ಎರಡೂ ರಾಜ್ಯಗಳಲ್ಲಿ (ಮಹಾರಾಷ್ಟ್ರ ಮತ್ತು ಗುಜರಾತ್) ಬಿಜೆಪಿ ಗೃಹಮಂತ್ರಿಗಳಿದ್ದಾರೆ. ಅವರು ಈ ಕೋಮುಬುದ್ಧಿಯ ಅಧಿಕಾರಿಗಳಿಗೆ ಪೋಷಣೆ ನೀಡಿದ್ದಾರೆ. ಆದ್ದರಿಂದಲೇ ಹಿಂಸಾಚಾರ ನಡೆಸಿದ ಕ್ರಿಮಿನಲ್‌ಗಳನ್ನು ಬಂಧಿಸಿಲ್ಲ, ಬದಲಾಗಿ ಬುಡಕಟ್ಟು ಸಾಕ್ಷಿಗಳಿಗೆ ಸಾಕ್ಷ್ಯ ನೀಡದಂತೆ ಬೆದರಿಸಲಾಗುತ್ತಿದೆ ಎಂದಿರುವ ಎಐಡಿಡಬ್ಲ್ಯುಎ ಕೇಂದ್ರ ಸರಕಾರ ತಕ್ಷಣ ಮಧ್ಯ ಪ್ರವೇಶಿಸಬೇಕು ಎಂದು ಆಗ್ರಹಿಸಿದೆ. ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ಅತ್ಯಾಚಾರಗಳನ್ನು ಅಂತ್ಯಗೊಳಿಸಬೇಕು. ಕೇಂದ್ರ ಸರಕಾರ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿ ಜನವರಿ 16 ರಂದು ಸೌಹಾರ್ದದಿನ ಆಚರಿಸಬೇಕು ಎಂದು ಎಐಡಿಡಬ್ಲ್ಯುಎ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಇ.ಎಂ.ಎಸ್. ಸಮಗ್ರ ಕೃತಿಗಳ ಪ್ರಥಮ ಸಂಪುಟ ಬಿಡುಗಡೆ

ಜನವರಿ 7 ರಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಜ್ಯೋತಿಬಸುರವರು ಇ.ಎಂ.ಎಸ್. ನಂಬೂದರಿ ಪಾಡ್‌ರವರ ಸಮಗ್ರ ಕೃತಿಗಳ ನೂರು ಸಂಪುಟಗಳಲ್ಲಿ ಮೊದಲನೇ ಸಂಪುಟವನ್ನು ತಿರುವನಂತ ಪುರದ ಎ.ಕೆ.ಜಿ. ಸ್ಮಾರಕ ಸಭಾಂಗಣದಲ್ಲಿ ನಡೆದ ಒಂದು ಭವ್ಯ ಸಮಾರಂಭದಲ್ಲಿ ಬಿಡುಗಡೆ ಮಾಡಿದರು.

ಇ.ಎಂ.ಎಸ್.ರವರು 1927 ರಿಂದ 1935 ರ ನಡುವೆ ಬರೆದ ಅವರ ಆರಂಭದ ಲೇಖನಗಳು ಈ ಸಂಪುಟದಲ್ಲಿವೆ. ಇವುಗಳಲ್ಲಿ ಜವಾಹರಲಾಲ್ ನೆಹರೂ ಕುರಿತ ಜೀವನ ಚರಿತ್ರೆಯೂ ಇದೆ. ಇದು ಮಲೆಯಾಳಂ ಭಾಷೆಯಲ್ಲೇ, ನೆಹರೂರವರ ಪ್ರಥಮ ಜೀವನ ಚರಿತ್ರೆ ಎಂದು ಹೇಳಲಾಗಿದೆ. ಅಲ್ಲದೆ 1917 ರ ಮಹಾನ್ ಅಕ್ಟೋಬರ್ ಕ್ರಾಂತಿಯ ಬಗ್ಗೆ ಒಂದು ಕಿರುಹೊತ್ತಿಗೆಯೂ ಈ ಸಂಪುಟದಲ್ಲಿ ಸೇರಿದೆ. ಎಕೆಜಿ ಸಂಶೋಧನಾ ಮತ್ತು ಅಧ್ಯಯನ ಕೇಂದ್ರ ಹಾಗೂ ಸಿಪಿಐ(ಎಂ) ಒಡೆತನದ ಚಿಂತಾ ಪ್ರಕಾಶನದವರು ಜಂಟಿಯಾಗಿ 383 ಪುಟಗಳ ಈ ಸಂಪುಟವನ್ನು ಹೊರತಂದಿದ್ದಾರೆ.

1500 ಕ್ಕೂ ಹೆಚ್ಚು ಮಂದಿ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಕೇರಳದ ಎಡ ಆಂದೋಲನದ ಪ್ರಮುಖರು, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು, ಬುದ್ಧಿಜೀವಿಗಳು, ಪ್ರಾಧ್ಯಾಪಕರು, ಸಂಶೋಧಕರು ಭಾಗವಹಿಸಿದ್ದ ಸಮಾರಂಭದ ಅಧ್ಯಕ್ಷತೆಯನ್ನು ಕೇರಳದ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಇ.ಕೆ.ನಾಯನಾರ್ ವಹಿಸಿದ್ದರು. ಅವರು ಹಾಗೂ ಜ್ಯೋತಿಬಸುರವರೊಂದಿಗೆ ವೇದಿಕೆಯಲ್ಲಿ ಇನ್ನಿಬ್ಬರು ಪೊಲಿಟ್ ಬ್ಯೂರೋ ಸದಸ್ಯರಾದ ವಿ.ಎಸ್. ಅಚ್ಯುತಾನಂದನ್ ಹಾಗೂ ಪಿನರಾಯಿ ವಿಜಯನ್, ರಾಜ್ಯ ಸಂಸ್ಕೃತಿ ಮಂತ್ರಿ ಟಿ.ಕೆ.ರಾಮಕೃಷ್ಣನ್, ಖ್ಯಾತ ಅರ್ಥಶಾಸ್ತ್ರಜ್ಞ ಕೆ.ಎನ್.ರಾಜ ಹಾಗೂ ಈ ಸಂಪುಟದ ಮುಖಪುಟ ರೂಪಿಸಿದ ಕಲಾವಿದ ಎಂ.ರಾಮಚಂದ್ರನ್ ಉಪಸ್ಥಿತರಿದ್ದರು.

ಪ್ರಥಮ ಪ್ರತಿಯನ್ನು ಡಾ. ಕೆ.ಎನ್.ರಾಜ್ ರವರಿಗೆ ನೀಡುವ ಮೂಲಕ ಜ್ಯೋತಿ ಬಸುರವರು ವಿಧ್ಯುಕ್ತವಾಗಿ ಸಂಪುಟದ ಬಿಡುಗಡೆ ಮಾಡಿದರು. ರಾಷ್ಟ್ರದ ರಾಜಕಾರಣದಲ್ಲಿ 50 ವರ್ಷಗಳಿಗೂ ಹೆಚ್ಚು ಕಾಲ ಕಮ್ಯುನಿಸ್ಟ್ ಆಂದೋಲನವನ್ನು ಕಟ್ಟುವಲ್ಲಿ ಹಾಗೂ 1964 ರಿಂದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕೆಲಸದಲ್ಲಿ ಇಎಂಎಸ್ ರೊಂದಿಗೆ ತಮ್ಮ ನಿಕಟ ಒಡನಾಟವನ್ನು ನೆನಪಿಸಿಕೊಂಡ ಜ್ಯೋತಿಬಸು ಅವರು ಕ್ಲಿಷ್ಟ ವಿಷಯಗಳನ್ನು ಜನಪ್ರಿಯ ರೀತಿಯಲ್ಲಿ ಬರೆಯುತ್ತಿದ್ದರು ಎಂದು ಹೇಳಿದರು. ಅವರ ಸರಳ ಜೀವನಶೈಲಿ ಹಾಗೂ ದೇಶ ಮತ್ತು ಪಕ್ಷಕ್ಕೆ ಅವರ ಆಳವಾದ ಬದ್ಧತೆಯನ್ನು ಸ್ಮರಿಸುತ್ತಾ "ಇ.ಎಂ.ಎಸ್. ಬಾಯಿ ತೆರೆದಾಗ ಒಂದು ಚರ್ಚೆ ಆರಂಭವಾಗುತ್ತಿತ್ತು" ಎಂದರು. ಇ.ಎಂ.ಎಸ್. ರವರ ಕೆಲವು ಕೃತಿಗಳನ್ನು ಇಂಗ್ಲೀಷ್ ನಲ್ಲಿಯೂ ಪ್ರಕಟಿಸಿ ಅವು ಬೇರೆ ಭಾಷೆಗಳಿಗೆ ತುರ್ಜುಮೆಯಾಗುವಂತಾಗಬೇಕು ಎಂದು ಜ್ಯೋತಿಬಸು ಬಯಸಿದರು.

ಈ ಸಂಪುಟ ಯೋಜನೆಯ ಕಾರ್ಯಕಾರೀ ಸಂಪಾದಕ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಎಂ.ಎ.ಬೇಬಿಯವರು ಸ್ವಾಗತ ಬಯಸುತ್ತಾ ನೂರು ಸಂಪುಟಗಳಲ್ಲಿ 40 ಸಾವಿರ ಪುಟಗಳ ಈ ಸಮಗ್ರ ಕೃತಿಗಳ ಪ್ರತಿಯೊಂದು ಸಂಪುಟವೂ 5000 ಪ್ರತಿಗಳಲ್ಲಿ ಪ್ರಕಟವಾಗಲಿದ್ದು ಸುಮಾರು 5 ಲಕ್ಷ ಪುಸ್ತಕಗಳು ಮಲೆಯಾಳಿ ಓದುಗರ ಕೈ ಸೇರುತ್ತದೆ ಎಂದರು. ಸಂಪಾದಕ ಪಿ.ಗೋವಿಂದ ಪಿಳ್ಳೆಯವರು ಮಾತನಾಡುತ್ತಾ ಮೊದಲ ಸಂಪುಟದ ಬಗ್ಗೆ ತಿಳಿಸಿದರು.

ವಾರದ ವ್ಯಂಗ್ಯ ಚಿತ್ರ

ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



ವಿಮಲಾ ಫಾರೂಕಿ ನಿಧನ : ಮಹಿಳಾ ಆಂದೋಲನಕ್ಕೆ ಪ್ರಗತಿಶೀಲ ವಲಯಗಳಿಗೊಂದು ನಷ್ಟ

ರಾಷ್ಟ್ರೀಯ ಭಾರತೀಯ ಮಹಿಳಾ ಒಕ್ಕೂಟ (ಎನ್.ಎಫ್.ಐ. ಡಬ್ಲ್ಯು.)ದ ಹಾಗೂ ಸಿಪಿಐನ ಹಿರಿಯ ಮುಖಂಡರಾಗಿದ್ದ ವಿಮಲಾ ಫಾರೂಕಿಯವರು ಜನವರಿ 2ರಂದು ನಿಧನರಾದರು.ಅವರ ನಿಧನದಿಂದ ಮಹಿಳಾ ಆಂದೋಲನ ಹಾಗೂ ಪ್ರಗತಿಪರ ವಲಯಗಳು ಆಳವಾದ ನಷ್ಟ ಅನುಭವಿಸಿವೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್‌ರಿಗೆ ಕಳಿಸಿದ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.


ಅವರು ತನ್ನ ಇಡೀ ಬದುಕನ್ನು ಕಮ್ಯುನಿಸ್ಟ್ ಆಂದೋಲನಕ್ಕೆ ಮುಡಿಪಿಟ್ಟ ಸಂಗಾತಿ. ಐದು ದಶಕಗಳ ಕಾಲ ಕಮ್ಯುನಿಸ್ಟ್ ಆಂದೋಲನದಲ್ಲಿ ಸಕ್ರಿಯರಾಗಿದ್ದ , ಪ್ರಜಾಸತ್ತಾತ್ಮಕ ಮಹಿಳಾ ಆಂದೋಲನವನ್ನು ಕಟ್ಟಿ ಬೆಳೆಸುವಲ್ಲಿ ಒಂದು ಪ್ರಧಾನ ಪಾತ್ರ ವಹಿಸಿದ ಅವರು ಪ್ರಧಾನ ಕಾರ್ಯದರ್ಶಿಯಾಗಿ ಎನ್. ಎಫ್. ಐ. ಡಬ್ಲ್ಯು. ಗೆ ಗಮನಾರ್ಹ ಕೊಡುಗೆ ನೀಡಿದರು ಎಂದು ಸುರ್ಜಿತ್ ಶ್ರದ್ಧಾಂಜಲಿ ಅರ್ಪಿಸುತ್ತಾ ಹೇಳಿದ್ದಾರೆ.

'ಮಹಿಳಾ ಹಕ್ಕುಗಳ ಅವಿರತ ಹೋರಾಟಗಾರರು' ಜನವಾದಿ ಮಹಿಳಾ ಸಂಘಟನೆ ಶ್ರದ್ಧಾಂಜಲಿ

ವಿಮಲಾ ಫಾರೂಕಿಯವರು ಮಹಿಳಾ ಹಕ್ಕುಗಳ,ಅದರಲ್ಲೂ ಬಡ ಮಹಿಳೆಯರ ಹಕ್ಕುಗಳಿಗಾಗಿ ಅವಿರತವಾಗಿ ಹೋರಾಡಿದವರು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಶ್ರದ್ಧಾಂಜಲಿ ಅರ್ಪಿಸಿದೆ.ಭಾರತದ ಮಹಿಳಾ ಆಂದೋಲನದ ಗೌರವಾನ್ವಿತ ಮುಖಂಡರಲ್ಲಿ ಒಬ್ಬರಾದ ಅವರು ಎನ್‌ಎಫ್‌ಐಡಬ್ಲ್ಯುನ ಪ್ರಧಾನ ಕಾರ್ಯದರ್ಶಿಯಾಗಿ ಕಳೆದ ಎರಡು ದಶಕಗಳಲ್ಲಿ ಶಕ್ತಿಶಾಲಿ ಐಕ್ಯ ಚಳುವಳಿಗಳಿಗೆ ನೇತೃತ್ವ ನೀಡಿದ ಮಹಿಳಾ ಸಂಘಟನೆಗಳ ವಿಶಾಲ ಮೈತ್ರಿ ಬೆಳೆಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದರು.ಇದರಿಂದ ಮಹಿಳಾ ಪ್ರಶ್ನೆಗಳು ರಾಷ್ಟ್ರೀಯ ಪ್ರಶ್ನೆಗಳಾಗಿ ಇಡೀ ದೇಶ ಗಮನ ಹರಿಸುವಂತಾಗಿದೆ ಎಂದಿರುವ ಎಐಡಿಡಬ್ಲ್ಯುಎ ಆಕೆಗೆ ಐಕ್ಯ ಚಳುವಳಿಗೆ ಎಲ್ಲಾ ವಿಭಾಗಗಳನ್ನು ಸೆಳೆಯುವ, ಆದರೆ ಅದೇ ವೇಳೆಗೆ ನೀತಿಗಳನ್ನು ಕುರಿತಂತೆ ಒಂದು ದೃಢ ನಿಲುವಿನ ಅಪಾರ ಸಾಮರ್ಥ್ಯವಿತ್ತು ಎಂದು ನೆನಪಿಸಿಕೊಂಡಿದೆ.

ವಿಮಲಾದೀ (ವಿಮಲಕ್ಕ) ಎಂದೇ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದ ಅವರು ಇತ್ತೀಚಿನ ವರ್ಷಗಳಲ್ಲಿ ಹಿಂದುತ್ವ ಶಕ್ತಿಗಳ ಧಾಳಿಗಳಿಗೆದುರಾಗಿ ಮಹಿಳೆಯರನ್ನು ಒಂದು ಜಾತ್ಯಾತೀತ ವೇದಿಕೆಯಲ್ಲಿ ಅಣಿನೆರೆಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದರು. ಗುಜರಾತಿನ ಹದಗೆಡುತ್ತಿರುವ ಪರಿಸ್ಥಿತಿ ಬಗ್ಗೆ ಅವರು ತಮ್ಮ ಕೊನೆಗಾಲದಲ್ಲಿ ಬಹಳ ಆತಂಕ ವ್ಯಕ್ತಪಡಿಸಿದ್ದರು.

ಎಐಡಿಡಬ್ಲ್ಯುಎಯೊಂದಿಗೆ ಅತ್ಯಂತ ನಿಕಟ ಸಂಪರ್ಕ ಹೊಂದಿದ್ದ ಆಕೆಯ ನಿರ್ಗಮನದಿಂದ ಅಪಾರ ನಷ್ಟವಾಗಿದೆ ಎನ್ನುತ್ತಾ ಅವರ ಮಗ ಟಿಪ್ಪು,ಸೊಸೆ ಸಾಹಿಬಾ ಹಾಗೂ ಎನ್‌ಎಫ್‌ಐಡಬ್ಲ್ಯುನ ಅವರ ಎಲ್ಲಾ ಸಹಯೋಗಿಗಳಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.



ಇ.ಎಂ.ಎಸ್. ಭವನ ನಿಧಿ

ಹಿಂದಿನ ಸಂಚಿಕೆಯವರೆಗಿನ ಒಟ್ಟು ಮೊತ್ತ ರೂ. 801106

ಪ್ರಕಾಶ್ ಚಂದ್ರಶೆಟ್ಟಿ	5000
ಕಾರ್ ಆಟೋ ಮೊಬೈಲ್ಸ್	3000
ದಿ ಓನ್ಲಿ ಪ್ಲೇಸ್	1000
(ಮೇಲಿನ ಮೂರು ಇ.ಕೆ.ಎನ್.ರಾಜನ್ ಸಂಗ್ರಹಿಸಿ ಕೊಟ್ಟದ್ದು)	
ಟಿ.ಆರ್.ಗೋಪಿನಾಥನ್	1000
ನಂದಕುಮಾರ	1001
ಬಾಲನ್	1000
ಉದಯ ಶಂಕರ್, ಎಲ್‌ಐಸಿ	5000
ಹೆಚ್.ವಿ.ರಾಮಾಂಜನೇಯಪ್ಪ	1001
ಸಿಪಿಐ(ಎಂ)ಧಾರವಾಡ ಜಿಲ್ಲಾ ಸಮಿತಿ	5,500
ಗಂಗಾವತಿ ತಾಲ್ಲೂಕು ಸಮಿತಿ	950
ಕೆಂಚರೆಡ್ಡಿ-ಹರಿಹರ ಫಾಲಿಫೈಬರ್ಸ್	3000
ಸಂತೋಷ್ ಗುರಡ್ಡಿ, ಅಡ್ವೊಕೇಟ್, ಬೆಂಗಳೂರು	5000
ಬಾಲಕೃಷ್ಣ ಶೆಟ್ಟಿ (ಮೊದಲ ಕಂತು)	250
ವಿ.ಎಸ್. ಕೋದಂಡರಾಂ ರೂ.	500
ಗುರುಸಿದ್ಧಮೂರ್ತಿ	500
ರಂಗನಾಥ ಹವಾಲ್ದಾರ್	500
ಜಂಬಯ್ಯ ನಾಯಕ್	500
ಸಿಪಿಐ(ಎಂ), ಮಲೆನಾಡು ಪ್ರಾದೇಶಿಕ ಸಮಿತಿ	10,000
ಸಿಪಿಐ(ಎಂ) ಐಟಿಸಿ ಶಾಖೆ	5,500
ಮಾಬು ಸಾಬ್, ಹಗರಿಬೊಮ್ಮನ ಹಳ್ಳಿ	100
ಪೀಟರ್ ಲೋಬೋ, ವಿರಾಜಪೇಟೆ	250
ಒಟ್ಟು	8,51,658

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ),ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು:ಜಿ.ಎನ್ ನಾಗರಾಜ್. ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ